ಸೆಪ್ಟೆಂಬರ್ 7, 2025

41ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೋಲೀಸ್ ನ್ಯೂಸ್

2001

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ಅಭಿಮಾನ್ ಸ್ಟುಡಿಯೋ ಸರ್ಕಾರದ ವಶಕ್ಕೆ.....

# ಅಲ್ಲೇ ಆಗಲಿದೆ ವಿಷ್ಣು ದಾದಾ ಸ್ಮಾರಕ!!





## ಪರಿಷತ್ ನಾಮ ಹೈಕಮಾಂಡ್ ಹೈಡ್ರಾಮಾ!

## ಪ್ರೇಯಸಿಗೆ ಪೆಟ್ರೋಲ್ ಸುರಿದು ಸುಟ್ಟುಬಿಟ್ಟ!





## ಚನ್ನಪಟ್ಟಣದಲ್ಲಿ ಲಾಕಪ್ ಡೆತ್!

## ನಕಲಿ ಪತ್ರಕರ್ತರಿದ್ದಾರೆ ಹುಷಾರ್!

1975ರಲ್ಲಿ 'ಶಿಕ್ಷಣ ಸುಧಾರಕ' ಪಾಕ್ಷಿಕ
1985ರಲ್ಲಿ 'ಪೊಲೀಸ್ ನ್ಯೂಸ್' ವಾರಪತ್ರಿಕೆ
1987ರಲ್ಲಿ 'ಪೊಲೀಸ್ ನ್ಯೂಸ್' (ತಮಿಳು)
1989ರಲ್ಲಿ 'ಲೋಕವಾಣಿ' ದೈನಿಕ
1990ರಲ್ಲಿ 'ಮಂಗಳೂರು ಮಿತ್ರ' ಸಂಜೆ ದೈನಿಕ
1992ರಲ್ಲಿ 'ಕರ್ನಾಟಕ ಮಲ್ಲ' ದೈನಿಕ
1996ರಲ್ಲಿ 'ಆದರ್ಶ ಗಂಡ ಹೆಂಡತಿ' ಮಾಸಪತ್ರಿಕೆ
1997ರಲ್ಲಿ 'ಕ್ರೀಡಾ ಸಮಯ' ಮಾಸಿಕ
1999ರಲ್ಲಿ 'ಶುಭದಿನ' ವಾಣಿಜ್ಯ ದೈನಿಕ
1999 ರಲ್ಲಿ 'ಸಿಟಿ ಟುಡೆ' ಸಂಜೆ ದೈನಿಕ
ಆರೋಗ್ಯ ಸ್ಪೂರ್ತಿ, ಮಾಸಿಕ
ಸೌಂದರ್ಯ, ಮಾಸಿಕ
ಸ್ಟೂಡೆಂಟ್ ಗೈಡ್, ಮಾಸಿಕ



## ಪ್ರಶಸ್ತಿ-ಪುನಸ್ಕಾರಗಳು

ಪತ್ರಿಕೋದ್ಯಮದಲ್ಲಿ ಸತತ 25 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ್ದ ಶ್ರೀ ಎಂ. ಮಲ್ಲಿಕಾರ್ಜುನಯ್ಯನವರು ಕಾಯಾ, ವಾಚಾ, ಮನಸಾ ತ್ರಿವಿಧ ಶುದ್ಧಿಯಿಂದ ದುಡಿಮೆ ಮಾಡಿದ ಫಲವಾಗಿ ಯಶಸ್ಸು ಕಂಡರು. ರಾಜ್ಯ ಹಾಗೂ ಹೊರ ದೇಶಗಳಲ್ಲಿ ಅನೇಕ ಸೇವಾ ಸಂಸ್ಥೆಗಳ ಸದಸ್ಯರಾಗಿ, ಧರ್ಮದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಅಂತರರಾಷ್ಟ್ರೀಯ ಸೇವಾ ಸಂಸ್ಥೆಯಾದ 'ಲಯನ್ಸ್ ಕ್ಲಬ್ ಆಫ್ ಬೆಂಗಳೂರು' ಮೆಜೆಸ್ಟಿಕ್ ಶಾಖೆಯ ಅಧ್ಯಕ್ಷರಾಗಿದ್ದರು. 1989ರಲ್ಲಿ ಸಿಂಗಾಪುರ, ಹಾಂಗ್‌ಕಾಂಗ್ ಮತ್ತಿತರೆ ರಾಷ್ಟ್ರಗಳಿಗೆ ಭೇಟಿ ನೀಡಿ ಪ್ರವಚನ ಗೈದಿದ್ದರು. 1993ರಲ್ಲಿ ಗಲ್ಫ್ ರಾಷ್ಟ್ರಗಳಿಗೆ (ದುಬೈ, ಅಬುದಾಬಿ) ಭೇಟಿ ನೀಡಿ ಅಲ್ಲಿನ ಕನ್ನಡ ಸಂಸ್ಥೆಗಳಿಂದ ಗೌರವ ಸ್ವೀಕರಿಸಿದ್ದರು. 1993-94ರಲ್ಲಿ ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ಪತ್ರಕರ್ತರ ಸಮ್ಮೇಳನದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದಿಂದ 'ಗೌರವ' ಸ್ವೀಕರಿಸಿದ್ದರು. 1998ರಲ್ಲಿ ಮುದ್ರಣ ಕಲೆಯ ಹೆಚ್ಚಿನ ಅಧ್ಯಯನಕ್ಕಾಗಿ ಯುರೋಪ್ ರಾಷ್ಟ್ರಗಳ ಆಹ್ವಾನದ ಮೇರೆಗೆ ಅಲ್ಲಿಗೆ ತೆರಳಿ ಗೌರವ ಸಂಪಾದಿಸಿದ್ದರು. 1999ರಲ್ಲಿ ಕರ್ನಾಟಕ ಪತ್ರಿಕಾ ಅಕಾಡೆಮಿಯಿಂದ 'ಪತ್ರಿಕೋದ್ಯಮದಲ್ಲೇ ವಿಶಿಷ್ಟ ಸಾಹಸ' ಮೆರೆದ ಪ್ರಶಸ್ತಿ ಸ್ವೀಕರಿಸಿದ್ದರು.

# ಒಂದೇ ವಾರದಲ್ಲಿ ಕಾಂಗ್ರೆಸ್ಸಿಗೆ ಆದ ಮೂರು ಮುಜುಗರಗಳು!

**ಕಾಂಗ್ರೆಸ್ ನಾಯಕರು ಒಂದು ವಾರದಲ್ಲಿ ನೀಡಿದ ಮೂರು ಹೇಳಿಕೆಗಳು ಪಕ್ಷಕ್ಕೆ ತೀವ್ರ ಮುಜುಗರವನ್ನು ತಂದೊಡ್ಡಿದ್ದು ಸುಳ್ಳು ಅಂತೀರಾ... ಇದು ರಾಷ್ಟ್ರ ಮಟ್ಟದಲ್ಲೂ ದೊಡ್ಡ ಸುದ್ದಿಯಾಗಿ ಕಾಂಗ್ರೆಸ್ ಹೈಕಮಾಂಡ್‌ಕಸಿವಿಸಿ ಅನುಭವಿಸಿದ್ದು,ರಾಜ್ಯ ಕಾಂಗ್ರೆಸ್ ಮುಖಂಡರು ಇದಕ್ಕೆ ಸ್ಪಷ್ಟನೆ ಕೊಡುವ ಅನಿವಾರ್ಯತೆಯೂ ಎದುರಾಯಿತು... ಒಂದು ಕಡೆ,ಲೋಕಸಭೆಯಲ್ಲಿ ವಿಪಕ್ಷದ ನಾಯಕ ರಾಹುಲ್ ಗಾಂಧಿ ಅವರು ವೋಟ್ ಚೋರಿ ಪ್ರವಾಸವನ್ನು ನಡೆಸುತ್ತಿದ್ದಾರೆ. ಬಿಹಾರದಲ್ಲಿ ನಡೆಯುತ್ತಿರುವ ಈ ಯಾತ್ರೆಗೆ ರಾಷ್ಟ್ರೀಯ ಜನತಾದಳವೂ ಸಾಥ್ ನೀಡಿರುವುದರಿಂದ ಯಾತ್ರೆಗೆ ಭರ್ಜರಿ ರೆಸ್ಪಾನ್ಸ್ ಸಿಗುತ್ತಿದೆ... ಇನ್ನೊಂದು ಕಡೆ, ಕರ್ನಾಟಕ ಕಾಂಗ್ರೆಸ್ಸಿನ ಸಚಿವರು/ ಶಾಸಕರು ನೀಡುತ್ತಿರುವ ಹೇಳಿಕೆಗಳು ಪಾರ್ಟಿಗೆ ತೀವ್ರ ಮುಜುಗರವನ್ನು ತಂದೊಡ್ಡುತ್ತಿದೆ! ಇದು ಖುದ್ದು ಕಾಂಗ್ರೆಸ್ ನಾಯಕರೇ ಮಾಡಿಕೊಂಡಿರುವ ಎಡವಟ್ಟು ಆಗಿರುವುದರಿಂದ, ಬಿಜೆಪಿ ಮತ್ತು ಜೆಡಿಎಸ್ ಇದರ ಭರಪೂರ ಲಾಭವನ್ನು ಪಡೆದುಕೊಳ್ಳುತ್ತಿದೆ....**

ಧರ್ಮಸ್ಥಳದಲ್ಲಿ ನೂರಾರು ಶವ ಹೂತ(?) ಪ್ರಕರಣದ ವಿಚಾರದಲ್ಲಿ ಯಾವನೋ ಒಂದು ಬುರುಡೆ ಹಿಡಿದುಕೊಂಡು ಬಂದದ್ದನ್ನು ನೋಡಿ, ಕಾಂಗ್ರೆಸ್ ಸರ್ಕಾರ ಆ ಬಗ್ಗೆ ತನಿಖೆ ಮಾಡಲು ಏಕಾಏಕಿ ವಿಶೇಷ



ತನಿಖಾ ದಳವನ್ನು ರಚಿಸಿತ್ತು. ಆದರೆ, ಮಾಸ್ಕ್ ಮ್ಯಾನ್ ತೋರಿಸಿದ ಜಾಗದಲ್ಲಿ ನಾಲ್ಕು ಮೂಳೆ ಬಿಟ್ರೆ ಬೇರೇನೂ ಸಿಗದೇ, ಇದೀಗ ಆತನನ್ನೇ ಎಸ್‌ಐಟಿ ಪೊಲೀಸರು ಬಂಧಿಸಿದ್ದಾರೆ! ಇದರಿಂದ, ಧರ್ಮಸ್ಥಳದಲ್ಲಿ ಅಕ್ರಮ ನಡೆದಿದೆ ಎಂಬುದನ್ನು ತನಿಖಿಸಲು ಎಸ್‌ಐಟಿ ರಚನೆ ಮಾಡಿದ್ದ ಕಾಂಗ್ರೆಸ್ ಸರ್ಕಾರದ ವಿರುದ್ಧ ರಾಜ್ಯಾದ್ಯಂತ ಆಕ್ರೋಶ ಹೆಚ್ಚಾಯಿತು!

**ಬುರುಡೆ ಪ್ರಕರಣದಲ್ಲಿ ಕಾಂಗ್ರೆಸ್ ಡಬಲ್ ಸ್ಟ್ಯಾಂಡರ್ಡ್!**

ಧರ್ಮಸ್ಥಳದ 'ಬುರುಡೆ' ಪ್ರಕರಣದಲ್ಲಿ ತಮಿಳುನಾಡಿನ ಕಾಂಗ್ರೆಸ್ ಸಂಸದ ಸೆಂದಿಲ್ ಕುಮಾರ್(ಇವರು ಹಿಂದೆ ದಕ್ಷಿಣ ಕನ್ನಡ ಎಸ್ಪಿ ಆಗಿದ್ದವರು ) ಅವರ ನೇರ ಪಾತ್ರವಿದೆ ಎಂದು ಬಿಜೆಪಿ ಶಾಸಕರಾದ ಗಾಲಿ ಜನಾರ್ದನ ರೆಡ್ಡಿ ಮತ್ತು ಉಡುಪಿಯ ಶಾಸಕ ಯಶಪಾಲ್ ಸುವರ್ಣ ಆರೋಪಿಸಿದ್ದರು. ಇದಕ್ಕೆ, ಸೆಂದಿಲ್ ಕುಮಾರ್ ಕೂಡ ತಿರುಗೇಟನ್ನೂ ನೀಡಿದ್ದು, ಈ ಪ್ರಕರಣದಲ್ಲಿ ಸರ್ಕಾರದ ಪಾತ್ರವೇನೂ ಇಲ್ಲ ಎಂದು ಖುದ್ದು ಮುಖ್ಯಮಂತ್ರಿಗಳೇ ಸ್ಪಷ್ಟಪಡಿಸಿದ್ದರು.

**ಅಧಿವೇಶನದಲ್ಲಿ ಸಂಘದ ಗೀತೆ ಹಾಡಿದ್ದ ಡಿ.ಕೆ. ಶಿವಕುಮಾರ್!**

ವಿಧಾನ ಮಂಡಲದ ಮಳೆಗಾಲದ ಅಧಿವೇಶನದಲ್ಲಿ ಮಾತನಾಡುತ್ತಿದ್ದ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್, ಮಾತಿನ ಭರದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಗೀತೆಯನ್ನು ಹಾಡಿಬಿಟ್ಟರು! ಬಹುಷಃ ಈ ಮಟ್ಟಿಗೆ ಅದು ವೈರಲ್ ಆಗುತ್ತೆ ಎನ್ನುವುದು ಅವರಿಗೇ ಗೊತ್ತಾಗಿರಲಿಕ್ಕಿಲ್ಲವೇನೋ? ಅಥವಾ ಬೇಕೆಂದೇ



ಹಾಡಿದ್ರೂ ಹಾಡಿರಬಹುದು! ಈ ಹಿನ್ನಲೆಯಲ್ಲಿ ಸ್ವಪಕ್ಷದಲ್ಲೇ ಚೀಮಾರಿ ಶುರುವಾದಾಗ, ಡಿಕೆ-ನಾನು ಬಿಜೆಪಿ, ಜೆಡಿಎಸ್, ಕಮ್ಯೂನಿಸ್ಟ್ ಎಲ್ಲಾ ನಾಯಕರನ್ನು ಫಾಲೋ ಮಾಡುತ್ತೇನೆ....ಅದೇ ರೀತಿ, ಸಂಘದ ನಮಸ್ತೆ ಸದಾ ವತ್ಸಲೆ ಮಾತೃಭೂಮಿ ಎನ್ನುವ ಗೀತೆಯನ್ನು ಕೂಡ.... ಎಂದು ಹೇಳಿಯೇ ಹಾಡಿದರು. ಇದು ರಾಷ್ಟ್ರ ಮಟ್ಟದಲ್ಲಿ ದೊಡ್ಡ ಸುದ್ದಿಯಾಯಿತು.

**ಒಂದು ಕಡೆ ರಾಹುಲ್ ಪಾದಯಾತ್ರೆ, ಇನ್ನೊಂದು ಕಡೆ ಆರ್ ಎಸ್ಎಸ್ ಗೀತೆ!**

ಡಿ.ಕೆ. ಶಿವಕುಮಾರ್ ಅವರ ನಮಸ್ತೆ ಸದಾ ವತ್ಸಲೇ ಹಾಡು ಕೆಲವೇ ನಿಮಿಷದಲ್ಲಿ ರಾಷ್ಟ್ರೀಯ ಸುದ್ದಿ ವಾಹಿನಿಗಳಲ್ಲಿ ಪ್ರಸಾರವಾಯಿತು. ಇದ'ಕ್ಕೆ ಹೊಸ'ಹೊಸ' ಆಯಾಮಗಳು ಸುತ್ತಿಕೊಂಡವು. ಇದನ್ನೇ ಕಾಯುತ್ತಿದ್ದ ಕರ್ನಾಟಕ ಕಾಂಗ್ರೆಸ್ಸಿನ ಒಂದು ಬಣ, ಡಿಕೆಶಿ ವಿರುದ್ಧ ತಿರುಗಿ ಬೀಳಲಾರಂಭಿಸಿತು.

ಹಿರಿಯ ನಾಯಕರಾದ ಬಿ.ಕೆ ಹರಿಪ್ರಸಾದ್, ಕೆ.ಎನ್. ರಾಜಣ್ಣ ಆದಿಯಾಗಿ ಕೆಲವರು ಡಿಸಿಎಂ ವಿರುದ್ಧ ತಿರುಗಿ ಬಿದ್ದರು. ಮುಖ್ಯವಾಗಿ, ಎಐಸಿಸಿ ಅಧ್ಯಕ್ಷರೂ ಬೇಸರ ವ್ಯಕ್ತ ಪಡಿಸಿದರು. ಹೀಗಾಗಿ, ಡಿಕೆ ಶಿವಕುಮಾರ್ ಕ್ಷಮೆ ಕೇಳುವ ಪ್ರಸಂಗ ಎದುರಾಯಿತು. ನನ್ನನು ಮೋಸದಿಂದ ಸೋಲಿಸಿದರು ಎಂದ ಸಿಎಂ ಸಿದ್ದರಾಮಯ್ಯ!

ಇನ್ನು, ಸಿದ್ದರಾಮಯ್ಯ ಕಾರಿದ ಹಳೇ ನಂಜಿನ ವಿಚಾರ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಾಂಗ್ರೆಸ್‌ಗೆ ಬರುವ ಮುನ್ನ ಜಾತ್ಯಾತೀತ ಜನತಾದಳದಲ್ಲಿ ಇದ್ದವರು. ಅವರು 1991ರಲ್ಲಿ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋಲನ್ನು ಅನುಭವಿಸಿದ್ದರು. ಅದನ್ನ ಈವಾಗ ಜ್ಞಾಪಿಸಿಕೊಂಡು,ನನ್ನನ್ನು ಮೋಸದಿಂದ ಸೋಲಿಸಲಾಯಿತು ಎಂದು ಮೊನ್ನೆ ನಡೆದ ಕಾರ್ಯಕ್ರಮವೊಂದರಲ್ಲಿ ಹೇಳಿಬಿಟ್ರು. ಅವರು ಚುನಾವಣೆ ಸೋತಿದ್ದು ಜೆಡಿಎಸ್ ನಿಂದ ಸ್ಪರ್ಧಿಸಿ! ಮೋಸದಿಂದ ಗೆದ್ದರು ಎಂದದ್ದು ಆಗಿನ ಕಾಂಗ್ರೆಸ್ ಅಭ್ಯರ್ಥಿಯನ್ನು ಉದ್ದೇಶಿಸಿ!!





**ಬಿಹಾರದಲ್ಲಿ ರಾಹುಲ್ ಗಾಂಧಿವೋಟ್ ಚೋರಿಯಾತ್ರೆ**

**1991ರಲ್ಲಿ ಸಿದ್ದರಾಮಯ್ಯ ಕೊಪ್ಪಳ ಲೋಕಸಭಾ**

☞ 3



ಸಂಪಾದಕ
**ಎಂ. ರಾಹುಲ್**

ನನ್ನ ಟೀಂ

ಹೆಚ್.ಕೆ. ಮಹದೇವ್
ಸಿದ್ದು ಮನ್ನಾಪೂರ
ಮೋಹನ್ ಬೋಳಂಗಡಿ
ಕೋ.ನಾ. ಪ್ರಭಾಕರ್
ವೀರಶೆಟ್ಟಿ ಕುಂಬಾರ
ಬಿ.ಎಂ. ಲವಕುಮಾರ್
ಶಾಂತರಾಜು ಬಿ. ಕಲ್ಲಹಳ್ಳಿ
ಬಿ.ವಿ. ಕುಲಕರ್ಣಿ
ಡಿ. ಸಿದ್ದರಾಜು
ರಾಜೀವ್ ಕೆ. ಬೈರಿ
ಸಂತೋಷ್‌ಕುಮಾರ್
ವೀರನಗೌಡ
ಮಂಜುನಾಥ ಕರೋಳಿ

ಅಕ್ಷರ ಜೋಡಣೆ :
**ಈ. ರಾಜೇಶ್**
ಪ್ರಸರಣಾಧಿಕಾರಿ :
**ಜಿ. ವೀರನಗೌಡ**

# ದಸರಾ ಉದ್ಘಾಟನೆಗೆ ಭಾನು ಮುಸ್ತಾಕ್... ತಪ್ಪೇನು?

ದಸರಾ ನಮ್ಮ ನಾಡಹಬ್ಬ, ಅದು ಧರ್ಮಾತೀತ ಮತ್ತು ಜಾತ್ಯಾತೀತ ಹಬ್ಬ, ಈ ಹಬ್ಬವನ್ನು ಇಂತವರೇ ಉದ್ಘಾಟನೆ ಮಾಡಬೇಕೆಂಬುದೇನಿಲ್ಲ. ಈ ನಾಡಿನ ಹೆಮ್ಮೆಯ ಸಾಹಸಿಗಳು ಯಾರೇ ಆದರೂ ಉದ್ಘಾಟಿಸಬಹುದು. ನಾಡಹಬ್ಬ ದಸರಾವನ್ನು ಎಲ್ಲಾ ಧರ್ಮದವರು ಆಚರಿಸುತ್ತಾರೆ. ಈ ವರ್ಷ ದಸರಾ ಉದ್ಘಾಟನೆಗೆ ಬುಕರ್ ಪ್ರಶಸ್ತಿ ವಿಜೇತೆ, ಖ್ಯಾತ ಸಾಹಿತಿ ಭಾನು ಮುಸ್ತಾಕ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಈಗಾಗಲೇ ಘೋಸಿಸಿದೆ. ಇದರಲ್ಲಿ ತಪ್ಪೇನಿದೆ? ಕೆಲವರು ಬಾನು ಅವರನ್ನು ದಸರಾ ಉದ್ಘಾಟನೆಗೆ ಆಮಂತ್ರಿಸಬಾರದಿತ್ತು ಎಂದು ಬಹಿರಂಗವಾಗಿಯೇ ಟೀಕಿಸುತ್ತಿದ್ದಾರೆ!

ಬಾನು ಮುಸ್ತಾಕ್ ಓರ್ವ ಮುಸಲ್ಮಾನ್ ಮಹಿಳೆ ಎಂಬ ಕಾರಣಕ್ಕೆ ದ್ವೇಷ ಮಾಡಿದರೆ ಹೇಗೆ? ನಮ್ಮ ದೇಶದ ಕೀರ್ತಿಯನ್ನು ಜಗತ್ತಿನ ಉದ್ದಗಲಕ್ಕೂ ಪಸರಿಸಿದ ವಿಜ್ಞಾನಿ ಅಬ್ದುಲ್ ಕಲಾಂ ಮುಸ್ಲಿಂ ಅಲ್ಲವೇ? ಗಡಿನಾಡ ಗಾಂಧಿ ಖಾನ್ ಅಬ್ದುಲ್ ಗಫರ್ ಖಾನ್ ಮುಸ್ಲಿಂ ಅಲ್ಲವೇ? ಅವರನ್ನು ಯಾರಾದರೂ ದ್ವೇಷಿಸಲು ಸಾಧ್ಯವೇ?

ಈ ಹಿಂದೆ ಕವಿ ನಿಸಾರ್ ಅಹ್ಮದ್ ಅವರಿಂದ ದಸರಾ ಉದ್ಘಾಟನೆ ಮಾಡಿಸಲಾಗಿತ್ತು. ಆಗ ಇಲ್ಲದ ಕ್ಯಾತೆ ಹೀಗೇಕೆ? ಏನೋಪ್ಪ, ಕೆಲವರ ನಡವಳಿಕೆ ವಿಚಿತ್ರವಾಗಿದೆ! ಟೀಕಾಕಾರರ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿರೋ ಸಿದ್ದರಾಮಯ್ಯ ಅವರು, ಧರ್ಮಾಂಧರು ಮಾತ್ರ ಭಾನುಮುಸ್ತಾಕ್ ಹೆಸರನ್ನು ವಿರೋಧಿಸುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದು ಸರಿಯಾಗಿಯೇ ಇದೆ!

ದಸರಾ ನಮ್ಮ ಸಾಂಸ್ಕೃತಿಕ ಧರ್ಮಾತೀತ, ಜಾತ್ಯಾತೀತ ನಾಡ ಹಬ್ಬವಾಗಿದೆ. ಹಿಂದೆ ಟಿಪ್ಪು, ಹೈದರಾಲಿ ಕೂಡ ನಮ್ಮ ಮಹಾರಾಜರೊಂದಿಗೆ ದಸರಾ ಆಚರಿಸಿದ್ದಾರೆ. ಮೈಸೂರಿನ ದಿವಾನರಾದ ಮಿರ್ಜಾ ಇಸ್ಮಾಯಿಲ್ ಕೂಡ ದಸರಾ ಮುನ್ನಡೆಸಿದ್ದಾರೆ. ಭಾನು ಮುಸ್ತಾಕ್ ಅವರನ್ನು ದಸರಾ ಉದ್ಘಾಟನೆಗೆ ಕರೆದಿರುವುದಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವವರಿಗೆ ಇತಿಹಾಸ ಗೊತ್ತಿಲ್ಲವೆನ್ನಿಸುತ್ತದೆ.



ಅವರು ಇತಿಹಾಸ ತಿಳಿದು ಮಾತನಾಡಿದರೆ ಅದಕ್ಕೊಂದು ಅರ್ಥ ಬರಬಹುದೇನೋ. ಈ ಹಿನ್ನಲೆಯಲ್ಲಿಯೇ ಸಿಎಂ ಸಿದ್ದರಾಮಯ್ಯ ಅವರು, ಬಿಜೆಪಿಯವರು ಎಲ್ಲದರಲ್ಲೂ ರಾಜಕೀಯ ಮಾಡುತ್ತಾರೆ. ನಾನೇ ಭಾನುಮುಸ್ತಾಕ್ ಹೆಸರನ್ನು ಆಯ್ಕೆ ಮಾಡಿದೆ. ಬೆರಳೆಣಿಕೆ ಕನ್ನಡಿಗರಿಗಷ್ಟೇ ಮಾತ್ರ ಬೂಕರ್ ಪ್ರಶಸ್ತಿ ಬಂದಿದೆ. ಹಾಗಾಗಿ ಭಾನುಮುಸ್ತಾಕ್ ಅವರನ್ನು ದಸರಾ ಉದ್ಘಾಟನೆಗೆ ಕರೆದಿದ್ದೇವೆ ಎಂದು ಸಮರ್ಥಿಸಿಕೊಂಡಿದ್ದಾರೆ.

ದನದ ಮಾಂಸ ತಿನ್ನುವವರನ್ನು ದಸರಾ ಉದ್ಘಾಟನೆಗೆ ಕರೆಯಲಾಗಿದೆ ಎಂಬ ಪ್ರತಿಪಕ್ಷ ನಾಯಕ ಆರ್. ಅಶೋಕ್ ಅವರ ಹೇಳಿಕೆ ಯಾಕೋ ವಿಚಿತ್ರವಾಗಿದೆ.ಹಾಗಾದರೆ, ನಮ್ಮಲ್ಲಿ ದನದ ಮಾಂಸ ತಿನ್ನುವ ಕೋಟ್ಯಂತರ ಜನರಿದ್ದಾರಲ್ಲ...! ಅವರೆಲ್ಲ ದಸರಾ ಆಚರಿಸಬಾರದೇ? ಚಾಮುಂಡಿ ಸನ್ನಿಧಿಗೆ ಬಂದು ಆಶೀರ್ವಾದ ಪಡೆಯಬಾರದೆ? ಇಷ್ಟಕ್ಕೂ ಉದ್ಘಾಟಕರು ದೇವರ ಸನ್ನಿಧಿಗೆ ಪೂಜೆ-ಪುನಸ್ಕಾರ ಮಾಡುವುದಿಲ್ಲ. ಕ್ಯಾಂಡಲ್ ಹಚ್ಚಿ ಅವರ ಪಾಡಿಗೆ ಹೊರಡುತ್ತಾರೆ!

ಆರ್. ಅಶೋಕ್ ಅವರು ಭಾನು ಮುಸ್ತಾಕ್ ಕನ್ನಡಾಂಭೆಯ ಬಗ್ಗೆ ಹಗುರವಾಗಿ ಮಾತಾಡಿದ್ದರು ಎಂದು ಆರೋಪಿಸಿದ್ದರು. ಕನ್ನಡ ಬಾವುಟದಲ್ಲಿ ಕೇಸರಿ ಮತ್ತು ಬಿಳಿ ಬಣ್ಣವಿದೆ... ನಮಗೆಲ್ಲಿ ಜಾಗ? ಹಸಿರು ಬಣ್ಣವಿಲ್ಲವಲ್ಲಾ... ಅಂತ ತಮಾಷೆ ಮಾಡಿದ್ದನ್ನೇ ದೊಡ್ಡ ವಿವಾದ ಮಾಡಲು ಯತ್ನಿಸಿದ್ದರು! ಬಾನು ಎಂದೋ ನೀಡಿರುವ ಹೇಳಿಕೆಗೂ ಈಗ ದಸರಾ ಉದ್ಘಾಟನೆಗೂ ಏನು ಸಂಬಂಧ? ಬಿಜೆಪಿಯುವರು ಕುಂಟು ನೆಪ ಹುಡುಕುತ್ತಿದ್ದಾರೆ! ಯಾವೊತ್ತೋ ಏನೋ ಹೇಳಿರುವುದನ್ನು ದಸರಾ ಉದ್ಘಾಟನೆಗೆ ಲಿಂಕ್ ಮಾಡುವುದು ಸರಿಯಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿರುವುದು ಸೂಕ್ತವೇ ಆಗಿದೆ.



ಸಾಹಿತಿ ಭಾನುಮುಸ್ತಾಕ್ ಅವರ ಕೃತಿಯನ್ನು ಇಂಗ್ಲಿಷ್‌ಗೆ ಅನುವಾದ ಮಾಡಿರುವ ದೀಪಾ ಭಸ್ತಿ ಅವರನ್ನು ದಸರಾ ಉದ್ಘಾಟನೆಗೆ ಕರೆಯಬೇಕಿತ್ತು ಎಂಬ ಬಿಜೆಪಿ ಹೇಳಿಕೆಗೂ ಆಕ್ರೋಶ ವ್ಯಕ್ತಪಡಿಸಿರುವ ಮುಖ್ಯಮಂತ್ರಿಗಳು, ಇಬ್ಬರನ್ನು ದಸರಾ ಉದ್ಘಾಟನೆಗೆ ಕರೆಯಲು ಸಾಧ್ಯವೇ ಎಂದು ಪ್ರಶ್ನಿಸಿ,ಈ ಹಿಂದೆಯೇ ದೀಪಾ ಭಸ್ತಿ ಹಾಗೂ ಭಾನು ಮುಸ್ತಾಕ್ ಇಬ್ಬರಿಗೂ ರಾಜ್ಯಸರ್ಕಾರವು ಗೌರವಿಸಿ ತಲಾ 10 ಲಕ್ಷ ರೂ.ಗಳ ಬಹುಮಾನವನ್ನು ನೀಡಿದೆ ಎಂಬುದನ್ನು ಪುನರ್ ಉಚ್ಚರಿಸಿದ್ದಾರೆ.

ಇನ್ನೊಂದು ಗಮನಿಯ ಅಂಶವೇನೆಂದರೆ, ಧರ್ಮಸ್ಥಳದಲ್ಲಿ ಬಿಜೆಪಿ ನಡೆಸಿರುವ 'ಧರ್ಮ' ಸಮಾವೇಶ ಯಾತ್ರೆಯೂ ರಾಜಕಾರಣವೆ. ಸತ್ಯ ಹೊರಬರಬೇಕು ಎನ್ನುವ ಕಾರಣಕ್ಕೆ ನಾವು ಎಸ್‌ಐಟಿ ರಚನೆ ಮಾಡಿದೆವು. ಎಸ್‌ಐಟಿ ರಚನೆಯನ್ನು ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗಡೆಯವರು ಕೂಡ ಸ್ವಾಗತಿಸಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಇಷ್ಟಕ್ಕೂ ಇದರಲ್ಲಿ ರಾಜಕೀಯ ಮಾಡುವಂಥದ್ದು ಏನಿದೆ?

ಯಾರೋ ಬಂದು ಧರ್ಮಸ್ಥಳ ದಲ್ಲಿ ಅಕ್ರಮ ನಡೆದಿದೆ ಎಂದು ಹೇಳಿದರೆ ಅಲ್ಲಿನ ಪಾವಿತ್ರ್ಯತೆ ಅಳಿಸಿ ಹೋಗುವುದಿಲ್ಲ. ಸೌಜನ್ಯ ಎಂಬ ಮುಗ್ದ ಬಾಲಕಿಯ ದುರ್ಮರಣ ಸಂಭವಿಸಿದೆ. ಆಗಿನ ಪೊಲೀಸರು ಈ ಬಗ್ಗೆ ಸರಿಯಾಗಿ ತನಿಖೆ ಮಾಡಿದ್ರೆ ಆರೋಪಿಗಳು ಎಂದೋ ಜೈಲು ಸೇರಿರುತ್ತಿದ್ದರು. ಈವಾಗ ಧರ್ಮಸ್ಥಳ ಹೊತ್ತಿ ಉರಿಯುತ್ತಿರಲಿಲ್ಲ ಅಲ್ಲವೇ.

ಈಗ ಎದ್ದಿದೆಯಲ್ಲ ಬುರುಡೆ ಪ್ರಕರಣ... ಇದರ ತನಿಖೆಯೂ ನಡೆಯುತ್ತಿದೆ. ಷಡ್ಯಂತ್ರ ನಡೆದಿದ್ರೆ ಆರೋಪಿಗಳು ಸಿಕ್ಕಿ ಬೀಳುತ್ತಾರೆ, ಅವರಿಗೆ ಶಿಕ್ಷೆ ಕೂಡ ಆಗುತ್ತದೆ. ಅದೇ ರೀತಿ ಸೌಜನ್ಯ ಕೇಸ್ ಕೂಡ ತನಿಖೆ ಆಗಬೇಕು. ಕೊಲೆಪಾತಕರು ಯಾರೇ ಆಗಿದ್ರೂ ಸರಿಯೇ. ಅವರನ್ನು ಬಂಧಿಸಿ ಈ ಪ್ರಕರಣಚಿಒಂದು ತಾರ್ಕಿಕ ಅಂತ್ಯ ಕಾಣಬೇಕು. ಏನಂತೀರಿ....


**-ಸಂ.**

2 ☜

ಕ್ಷೇತ್ರದಿಂದ ಸ್ಪರ್ಧಿಸಿ, ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಸೋಲುಂಡಿದ್ದರು. ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ, ಹಿರಿಯ ವಕೀಲರಾದ ಪ್ರೊ. ರವಿವರ್ಮ ಕುಮಾರ್ ಅವರ ಕಾರ್ಯಕ್ರಮದಲ್ಲಿ ಅಂದಿನ ಸೋಲನ್ನು ಪ್ರಸ್ತಾವಿಸಿದ್ದರು. ಆ ಚುನಾವಣೆಯಲ್ಲಿ ಸಿದ್ದರಾಮಯ್ಯ, ಬಸವರಾಜ ಪಾಟೀಲ್ ಅನ್ವರಿ ವಿರುದ್ಧ ಸುಮಾರು ಹನ್ನೊಂದು ಸಾವಿರ ಮತಗಳಿಂದ ಸೋತಿದ್ದರು. ಇದನ್ನು ಮೋಸ ಎಂದು ಮೊನ್ನಿನ ಒಂದು ಕಾರ್ಯಕ್ರಮದಲ್ಲಿ ಸಿಎಂ ಸಿದ್ದು ಪ್ರಸ್ತಾಪಿಸಿದ್ದರು. ರಾಹುಲ್ ಗಾಂಧಿಯವರ ವೋಟ್ ಚೋರಿ ಪ್ರತಿಭಟನೆಯ ವೇಳೆ, ಸಿದ್ದರಾಮಯ್ಯನವರ ಈ ಆರೋಪವು ಕಾಂಗ್ರೆಸ್ ಪಾರ್ಟಿಗೆ ತೀರ್ವ ಮುಜುಗರ ತಂದಿದ್ದು ಸುಳ್ಳಲ್ಲ.

**ಚಾಮುಂಡಿ ಬೆಟ್ಟ ಹಿಂದೂಗಳದ್ದಲ್ಲ!**


ಸಂಘದ ಗೀತೆಗೆ ಕ್ಷಮೆಯಾಚಿಸುವ ವೇಳೆ, ಡಿಸಿಎಂ ಡಿಕೆ ಶಿವಕುಮಾರ್ ಇನ್ನೊಂದು ಚರ್ಚಾರ್ಹ ವಿಷಯವನ್ನು ಪ್ರಸ್ತಾವಪಿಸಿದರು. ಅದು ಚಾಮುಂಡಿ ಬೆಟ್ಟ, ಹಿಂದೂಗಳ ಆಸ್ತಿಯಲ್ಲ... ಸಾರ್ವಜನಿಕ ಆಸ್ತಿ... ಎನ್ನುವ ಹೇಳಿಕೆಯನ್ನು ನೀಡಿದ್ದು! ಈ ಹೇಳಿಕೆಯನ್ನು ಅವರು ಎಣ್ಣೆ ಏಟಿನಲ್ಲಿ ನೀಡಿದರೋ ಅಥವಾ ಸಿದ್ದರಾಮಯ್ಯ ಖುಷಿ ಪಡಲಿ ಅಂತ ಹೇಳಿದ್ದೋ ಗೊತ್ತಿಲ್ಲ! ಇದು ಮತ್ತೆ ರಾಜ್ಯವ್ಯಾಪಿ ವಿವಾದಕ್ಕೆ ಕಾರಣವಾಯಿತು. ಇದೊಂದು ದುರಂತದ ಹೇಳಿಕೆ ಎಂದು ಮೈಸೂರು ರಾಜಮನೆತನದ ಪ್ರಮೋದಾ ದೇವಿ ಬೇಸರ ವ್ಯಕ್ತ ಪಡಿಸಿದರು. ಒಟ್ಟಾರೆ ಡಿಸಿಎಂ ಶಿವಕುಮಾರ್ ಅವರ ಈ ಹೇಳಿಕೆ ತೀವ್ರ ಟೀಕೆಗೆ ಗುರಿಯಾಯಿತು. ದಸರಾ ಉದ್ಘಾಟನೆಗೆ ಲೇಖಕಿ /ಬುಕರ್ ಪ್ರಶಸ್ತಿ ವಿಜೇತೆ ಬಾನು ಮುಸ್ತಾಕ್ ಅವರನ್ನು ಆಮಂತ್ರಿಸಿರುವುದಕ್ಕೆ ಬಿಜೆಪಿ ವಿರೋಧ ವ್ಯಕ್ತ ಪಡಿಸುತ್ತಿರುವ ಹೊತ್ತಿನಲ್ಲಿಯೇ ಡಿಕೆಶಿ ಅವರ ಹೇಳಿಕೆ ಬೆಂಕಿಗೆ ತುಪ್ಪ ಸುರಿದಂತಾಗಿರುವುದು ಸತ್ಯ.







# ಅಭಿಮಾನ್ ಸ್ಟುಡಿಯೋ ಸರ್ಕಾರದ ವಶಕ್ಕೆ... ವಿಷ್ಣುವರ್ಧನ್ ಸಮಾಧಿ ವಿವಾದಕ್ಕೆ ತಾರ್ಕಿಕ ಅಂತ್ಯ?!



ಡಾ. ರಾಜ್‌ಕುಮಾರ್ ಅವರಂತೆ ಚಂದನವನದ ಮತ್ತೊಬ್ಬ ಶ್ರೇಷ್ಠ ನಟರೆಂದರೆ, ಅದು ನಿಸ್ಸಂಶಯವಾಗಿ ಡಾ. ವಿಷ್ಣುವರ್ಧನ್! ಡಿಸೆಂಬರ್ 30,2009 ಅವರು ವಿಷ್ಣುಪಾದ ಸೇರಿದ ಕರಾಳ ದಿವಸ. ಶೂಟಿಂಗ್‌ಗಾಗಿ ಮೈಸೂರಿಗೆ ಹೋಗಿದ್ದ ವಿಷ್ಣುವರ್ಧನ್ ಅವರು, ಅಲ್ಲಿನ ಕಿಂಗ್ಸ್ ಕೋರ್ಟ್ ಹೋಟೆಲ್‌ನಲ್ಲಿ ವಿಶ್ರಮಿಸಿರುವಾಗಲೇ ಹೃದಯಘಾತಕ್ಕೀಡಾಗಿ ಹೋಗಿಬಿಟ್ರು. ಈ ಡಿಸೆಂಬರ್ 30ಕ್ಕೆ 16 ವರ್ಷ ಅವರು ಹೋಗಿ. ವಿಪರ್ಯಾಸ ಏನೆಂದರೆ, ಅವರ ಸಮಾಧಿ ವಿವಾದ ಇಂದಿಗೂ ನಡೆಯುತ್ತಲೇ ಇದೆ!

ನಿಮುಗೆಲ್ಲ ತಿಳಿದಂತೆ, ವಿಷ್ಣುವರ್ಧನ್ ಅವರ ಕಳೇಬರವನ್ನು ಸುಟ್ಟು ಹಾಕಿದ್ದು ಹಿರಿಯ ನಟ ಬಾಲಕೃಷ್ಣ ಅವರ ಅಭಿಮಾನ್ ಸ್ಟುಡಿಯೋ ಅಂಗಳದಲ್ಲಿ, ಮೊದಲೇ ಅದು ವಿವಾಧಿತ ಹಾಗೂ ಶಾಪಗ್ರಸ್ತ ಸ್ಥಳ! ಕುಮಾರಸ್ವಾಮಿ ಅವರೋ ಅಂಬರೀಷ್ ಅವರೋ ಹೇಳಿದರು ಅಂತ ಭಾರತಿ ಅವರು ಹಿಂದೆ ಮುಂದೆ ಯೋಚಿಸದೆ ಅಭಿಮಾನ್ ಸ್ಟುಡಿಯೋದಲ್ಲಿ ಮಣ್ಣು ಮಾಡಿಬಿಟ್ಟರು. ಇವತ್ತು ಪರದಾಡ್ತಾ ಇರೋದು ಯಾರು? ಕುಮ್ಮಿನೂ ಅಲ್ಲ, ಅಂಬಿ ಮೊದಲೇ ಇಲ್ಲಾ!

ಭಾರತಿ ಅವರಂತೂ ಮೈಸೂರು ಕಡೆ ಸರಿ ಸುಮಾರು 7 ಎಕರೆ ಭೂಮಿ ಮಂಜೂರು ಮಾಡಿಸಿಕೊಂಡು, ಸಿದ್ದರಾಮಯ್ಯನ ತಲೆಗೆ ಅರಳೆಣ್ಣೆ ಹಚ್ಚಿ ಸರ್ಕಾರದಿಂದ ಹತ್ತು ಕೋಟಿ ಹಣವನ್ನೂ ಬಿಡುಗಡೆ ಮಾಡಿಸಿಕೊಂಡು ಅಲ್ಲಿ ಸ್ಮಾರಕ ನಿರ್ಮಿಸಿ ಹಾಯಾಗಿದ್ದು ಬಿಟ್ಟಿದ್ದಾರೆ! ಭಸ್ಮ ಸುರಿದ ಜಾಗವೆಲ್ಲ ಸಮಾಧಿ ಆಗುವುದಾದರೆ...?! ಏನ್ಮಾಡೋದು ಇಲ್ಲಿ ಕೇಸ್ ಇದೆಯಲ್ಲ... ಎನ್ನುವುದು ಕೇವಲ ಜಾರಿಕೆಯ ಉತ್ತರವಾಗುತ್ತದೆ. ಈ ಜಾಗದಲ್ಲಿ ವಿವಾದ ಇದ್ದದ್ದು ಅವತ್ತು ಗೊತ್ತಿರಲಿಲ್ಲವೇ?! ಅಭಿಮಾನ್ ಸ್ಟುಡಿಯೋ ಮೊದಲೇ ಶಾಪಗ್ರಸ್ತ ಸ್ಥಳ. ಅದು ನಿಂತುಹೋಗಿ ಗಿಡ ಮರ ಬೆಳೆದುಕೊಂಡು ಅದೆಷ್ಟೋ ವರ್ಷ ಉರುಳಿದ್ದವು.

**✍ ಹೆಚ್.ಕೆ. ಮಹದೇವ್**

ಬಾಲಣ್ಣ ಒಡನಾಡಿಯೇ ಆಗಿದ್ದ ಭಾರತಿ ಅವರಿಗೆ ಇದು ಗೊತ್ತಿರಲಿಲ್ಲವೇ? ವಾಸ್ತವವದಲ್ಲಿ, ವಿಷ್ಣುವರ್ಧನ್ ಅವರ ಮಣ್ಣಿನ ಕಾರ್ಯ ನಡೆದ ಅಭಿಮಾನ್ ಸ್ಟುಡಿಯೋ ಅಂಗಳವೆ ಅವರ ನಿಜ ಸಮಾಧಿ. ಸ್ಮಾರಕ ಅಂತಾದ್ರೆ, ಇಲ್ಲಿಯೇ ಆಗಬೇಕು.

ಮಾನ್ಯ ನ್ಯಾಯಾಲಯಕ್ಕೆ ವಾಸ್ತವಾಂಶ ತಿಳಿಸಿ ಸರ್ಕಾರ ಸರಿಯಾಗಿ ಕ್ರಮ ಜರುಗಿಸಿದ್ರೆ ಹತ್ತು ಕುಂಟೆ ಅಲ್ಲ, ಇಡೀ ಸ್ಟುಡಿಯೋ ಜಪ್ತಿ ಹೊಡೆಯಬಹುದಿತ್ತು! ರಾಜ್‌ಕುಮಾರ್, ಅಂಬರೀಷ್ ಅವರಿಗೆ ನೀಡಿದ ಮನ್ನಣೆ ಯನ್ನು ಅದೇಕೋ ಏನೋ ವಿಷ್ಣುವರ್ಧನ್ ಅವರಿಗೆ ನೀಡದೆ ಹೋಯ್ತು ಸರ್ಕಾರ!



ಬಿ. ಶ್ರೀನಿವಾಸ್

ಹಿರಿಯ ನಟ ಬಾಲಕೃಷ್ಣ ಮೂಲತಃ ತಿರುಮಕೂಡಲು ನರಸೀಪುರದವರು. ಆದರೆ ಅವರ ಕುಟುಂಬ ವಾಸವಿದ್ದದ್ದು ಹಾಸನದಲ್ಲಿ, ಮುಂದೆ ಬದುಕು ಕಟ್ಟಿಕೊಂಡದ್ದು ಬೆಂಗಳೂರಿನಲ್ಲಿ. ಅಭಿಮಾನ್ ಸ್ಟುಡಿಯೋ ಬಾಲಣ್ಣನವರ ಕನಸಿನ ಕೂಸು. ರಾಜ್‌ಕುಮಾರ್ ಅವರನ್ನು ಹಾಕಿಕೊಂಡು ರಣಧೀರ ಕಂಠೀರವ ಸಿನಿಮಾ ನಿರ್ಮಿಸಿದ್ದ(ಪಾಲುದಾರಿಕೆ) ಬಾಲಣ್ಣ, ಅದರಿಂದ ಬಂದ ದುಡ್ಡಿನಲ್ಲಿ ಬದುಕಿಗೊಂದು ದಾರಿ ಮಾಡಿಕೊಳ್ಳಲು ನಿರ್ಧರಿಸಿ, ಅಂದಿನ ಸರ್ಕಾರಕ್ಕೆ ಅರ್ಜಿ ಸಲ್ಲಿಸಿ 20 ಎಕರೆ ಭೂಮಿ ಮಂಜೂರು ಮಾಡಿಸಿಕೊಂಡು ಅಭಿಮಾನ್ ಸ್ಟುಡಿಯೋ ಕಟ್ಟಿದ್ದರು ಬಾಲಣ್ಣ, ಆವತ್ತಿಗೆ ಕಗ್ಗಾಡು ಅದು. ಇಲ್ಲಿ ಸಿಟಿಯೊಳಗಿದ್ದ ಕಂಠೀರವ ಸ್ಟುಡಿಯೋ ಬಿಟ್ಟು ಅಲ್ಲಿಗೆ ಯಾರೂ ಹೋಗಲಿಲ್ಲ! ಮುಖ್ಯವಾಗಿ, ಬಾಲಣ್ಣನ ಅಣ್ಣ ರಾಜಣ್ಣನೇ ಹೋಗಲಿಲ್ಲ!!



ಇನ್ನು...?! ಹೀಗಾಗಿ, ಅಭಿಮಾನ್ ಅನಾಥವಾಗಿ ಮುಳ್ಳಿನ ಗಿಡ ಬೆಳೆದುಕೊಂಡು ನರಿಗಳ ಅವಾಸ ಸ್ಥಾನವಾಯಿತು. ಬಾಲಣ್ಣನ ಹಿರೇ ಮಗ ಬಿ. ಶ್ರೀನಿವಾಸ್ ದಿಗ್ಗಜ ನಿರ್ದೇಶಕ ವಿಜಯಾರೆಡ್ಡಿ(ವಿಜಯ್) ಅವರ ಬಳಿ ಸಹ ನಿರ್ದೇಶಕನಾಗಿದ್ದ. ಈತ ಅವರ ಬಳಿ ಕೆಲಸ ಕಲಿತು ಉದ್ದಾರವಾಗುವ ಬದಲಿಗೆ, ಬಿಸಿಲು ಬೆಳದಿಂಗಳು ಚಿತ್ರದಲ್ಲಿ ಸಾಕ್ಷಾತ್ ಬೆಳದಿಂಗಳಂತೆ ಹೊಳೆಯುತ್ತಿದ್ದ ನಟಿ ಸುಧಾ ಚಂದ್ರನ್ ಅವರನ್ನು ಕ್ಯಾಚ್ ಹಾಕೊಂಡು ಲವ್ ಮಾಡತೊಡಗಿದ! ಮುಂದೆ ಆಕೆಯನ್ನೇ ಮದುವೆ ಕೂಡ ಆದ. ಸುಧಾ ಶ್ರೇಷ್ಠ ಕಲಾವಿದೆ. ರಾಷ್ಟ್ರ ಪ್ರಶಸ್ತಿ ವಿಜೇತ ನೃತ್ಯಗಾರ್ತಿ. ಆಕೆಗೆ ಒಂದು ಕಾಲು ಊನವಿದ್ದರೂ ಇಡೀ ರಾಷ್ಟ್ರ ನಿಬ್ಬೆರಾಗಾಗೋ ಹಾಗೆ ಭರತ ನಾಟ್ಯ ಆಡುತ್ತಿದ್ದರು! ಅಂಥ ಸೊಸೆಯನ್ನು ಪಡೆದಿದ್ದಕ್ಕೆ ಬಾಲಣ್ಣ ನಿಜಕ್ಕೂ ಹೆಮ್ಮೆ ಪಟ್ಟಿದ್ದರು. ಮಾವ ಅಂದ್ರೆ ಸೊಸೆಗೂ ಅಪಾರ ಗೌರವಿತ್ತು. ಅಭಿಮಾನ್ ಸ್ಟುಡಿಯೋ ಚೇತರಿಸಿಕೊಳ್ಳಲಿಕ್ಕೆ ಸುಧಾ ಚಂದ್ರನ್ ತುಂಬಾ ಶ್ರಮಪಟ್ಟರು. ಸ್ವಂತ ಗಂಡನಿಂದಲೇ, ಕುಟುಂಬದಿಂದಲೇ ಬೆಂಬಲ ಸಿಗದೆ ನಿಟ್ಟುಸಿರು ಬಿಟ್ಟು, ಗಂಡನಿಗೂ ಸೋಡಾ ಚೀಟಿ ಕೊಟ್ಟು ಅಂದ್ರಕ್ಕೆ ಹೊರಟುಹೋದರು ಸುಧಾ. ಆದರೆ, ಹಾಗೆ ಹೋಗುವ ಮುನ್ನ ಮಾವ,ಅದ್ಭುತ ಕಲಾವಿದ ಬಾಲಕೃಷ್ಣ ಅವರ ನೆನಪಿನಲ್ಲಿ, ಕಲಾಭಿಮಾನಿ ಅಂತೊಂದು ಸಿನಿಮಾ ನಿರ್ಮಿಸಿ ಹೋಗಿದ್ದರು ಸುಧಾ ಚಂದ್ರನ್!



ಗೀತಾಬಾಲಿ



ಸುಧಾ

ಇನ್ನು, ಬಾಲಣ್ಣನ ಮಕ್ಕಳ ಬಗ್ಗೆ ಹೇಳಬೇಕು ಅಂದ್ರೆ, ಇವರು ಅಪ್ಪನ ಕನಸಿನ ಕೂಸು ಅಭಿಮಾನ್ ಸ್ಟುಡಿಯೋ ಜಾಗವನ್ನು ಪೀಸ್ ಪೀಸ್ ಆಗಿ ಕತ್ತರಿಸಿ ಮಾರಿಕೊಂಡು ತಿನ್ನಲು ಕುಡಿಯಲು ನಿಂತುಬಿಟ್ರು!! ಬಾಲಣ್ಣನ ಹಿರಿಯ ಮಗ ಗಣೇಶ್ ತೀರಿಕೊಂಡು ಬಹಳ ವರ್ಷಗಳೇ ಆಗಿವೆ. ಕಿರಿಯ ಮಗ


☞ 5

## ಕುಚಿಕ್ಕೂ ಸಿಂಗ್ ಬಾಬು ಕೊಟ್ಟ ಹೊಡೆತ?!

60ರ ದಶಕದಲ್ಲಿ ಬಾಲಕೃಷ್ಣ ಅವರಿಗೆ ಸ್ಟುಡಿಯೋ ನಿರ್ಮಾಣದ ಉದ್ದೇಶಕ್ಕಾಗಿ ಸರ್ಕಾರದಿಂದ 20 ಎಕರೆ ಭೂಮಿ ನೀಡಲಾಗಿತ್ತು. ನಿಯಮಗಳ ಪ್ರಕಾರ, ಮುಂದಿನ 20 ವರ್ಷಗಳವರೆಗೆ ಆ ಭೂಮಿಯನ್ನು ಯಾರಿಗೂ ಪರಭಾರೆ ಮಾಡುವಂತಿಲ್ಲ! ಆದರೆ, ಅದರಲ್ಲಿ 10 ಎಕರೆಯನ್ನು ಬಾಲಕೃಷ್ಣ ಅವರ ಮಕ್ಕಳು, ಮೊಮ್ಮಕ್ಕಳು ಯಾವಾಗಲೋ ಮಾರಾಟ ಮಾಡಿಕೊಂಡಿದ್ದಾರೆ!! ಅದಕ್ಕೆ ಅವರು ಕೊಟ್ಟಿರುವ ಕಾರಣ, ಅಭಿಮಾನ್ ಸ್ಟುಡಿಯೋ ಕಟ್ಟಲು ಹಣ ಬೇಕಾಗಿದ್ದರಿಂದ ಮಾರಾಟ ಮಾಡಿರುವುದಾಗಿ ತಿಳಿಸಿದ್ದಾರೆ. ಇದನ್ನು ಸರ್ಕಾರ ಅಥವಾ ಕೋರ್ಟ್ ಒಪ್ಪುವುದೇ?

ಸರ್ಕಾರ ಇದೀಗ ಉಳಿದ ಎಂಟತ್ತು ಎಕರೆ ಜಾಗವನ್ನು, ಸ್ಟುಡಿಯೋ ಉದ್ದೇಶಕ್ಕೆ ಜಮೀನು ನೀಡುವಾಗ ವಿಧಿಸಲಾಗಿದ್ದ ಷರತ್ತುಗಳನ್ನು ಉಲ್ಲಂಘಿಸಿದ್ದಕ್ಕೆ ದಂಡದ ರೂಪವಾಗಿ ಮುಟ್ಟುಗೋಲು ಹಾಕಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಬಾಲಣ್ಣ ಮಕ್ಕಳು ಅಭಿಮಾನ್ ಸ್ಟುಡಿಯೋದ ಜಾಗವನ್ನು ಮಾರಾಟ ಮಾಡಿ, ಅದರಿಂದ ಬಂದ ಹಣವನ್ನು ಅಭಿಮಾನ್ ಸ್ಟುಡಿಯೋದ ಅಭಿವೃದ್ಧಿಗೆ ಬಳಸಿಲ್ಲವಾದ್ದರಿಂದ ಅದೂ ಸಹ ನಿಯಮಗಳ ಉಲ್ಲಂಘನೆಯ ಪಟ್ಟಿಗೆ ಸೇರುತ್ತದೆ. ಆದ್ದರಿಂದ ಉಳಿಕೆ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲು ತೀರ್ಮಾನಿಸಲಾಗಿದೆ. ಒಂದು ಮೂಲದ ಪ್ರಕಾರ, ಸ್ಟುಡಿಯೋ ಉದ್ದೇಶಕ್ಕೆ ಮಂಜೂರು ಮಾಡಲಾಗಿದ್ದ ಎಲ್ಲಾ 20 ಎಕರೆ ಜಾಗವನ್ನು ಮುಟ್ಟುಗೋಲು ಹಾಕಿಕೊಳ್ಳಲು ನಿರ್ಧರಿಸಲಾಗಿದೆ! ಹೀಗಾಗಿ, ಈಗ ಅಭಿಮಾನ್ ಸ್ಟುಡಿಯೋ ಜಾಗ ಮಾರಿದವರು ಮತ್ತು ಕೊಂಡವರ ಸ್ಥಿತಿ ಅಯೋಮಯವಾಗಿದೆ,! ಅಂದಹಾಗೆ,

ಅಭಿಮಾನ್ ಸ್ಟುಡಿಯೋವನ್ನು ನಿರ್ಮಾಣ ಮಾಡಲು ಬಾಲಕೃಷ್ಣ ಅವರಿಗೆ 1965ರಲ್ಲಿ ಕೆಂಗೇರಿ ಹೋಬಳಿಯ ಮೈಲಸಂದ್ರದ ಬಳಿ 20 ಎಕರೆ ಭೂಮಿಯನ್ನು ಎರಡು ಹಂತಗಳಲ್ಲಿ ನೀಡಿತ್ತು. ಕನ್ನಡ ಚಿತ್ರರಂಗವು ಕನ್ನಡ ಚಿತ್ರ ತಯಾರಿಕೆಗಾಗಿ ಮದ್ರಾಸ್ ಮೇಲೆ ಅವಲಂಬನೆಯಾಗುವುದನ್ನು ಬಿಟ್ಟು ಸ್ವತಂತ್ರವಾಗಿ ನೆಲೆಯೂರುವಂತೆ ಮಾಡುವ ಮಹದಾಸೆಯೊಂದಿಗೆ ಬಾಲಕೃಷ್ಣ ಅವರು ಅಭಿಮಾನ್ ಸ್ಟುಡಿಯೋವನ್ನು ನಿರ್ಮಿಸಲು ಮುಂದಾಗಿದ್ದರು.



ರಾಜೇಂದ್ರ ಸಿಂಗ್ ಬಾಬು

ಆದರೆ, ಅವರ ಕನಸು ಸಂಪೂರ್ಣವಾಗಿ ನನಸಾಗಲಿಲ್ಲ, ವಿಷ್ಣುವರ್ಧನ್ ಅವರು ಬಾಲಕೃಷ್ಣ ಅವರು ಕಟ್ಟಿದ್ದ ಅಭಿಮಾನ್ ಸ್ಟುಡಿಯೋ ಬಗ್ಗೆ ವಿಶೇಷ ಆಸಕ್ತಿ ತಳೆದಿದ್ದರು. ಕನ್ನಡ ಚಿತ್ರರಂಗಕ್ಕೆ ಸ್ಟುಡಿಯೋ ಕಟ್ಟುವ ತೀರ್ಮಾನವನ್ನು ಬಾಲಕೃಷ್ಣ ಅವರು ಕೈಗೊಂಡಿದ್ದು, ಕಷ್ಟಪಟ್ಟು ಸ್ಟುಡಿಯೋ ಕಟ್ಟಿದ್ದನ್ನು ಅವರು ಹೆಮ್ಮೆಯಿಂದ ಸ್ಮರಿಸುತ್ತಿದ್ದರು. ಅಭಿಮಾನ್ ಸ್ಟುಡಿಯೋದ ಶಂಕುಸ್ಥಾಪನೆ ವೇಳೆ ನಡೆದ ಹೋಮದಲ್ಲಿ ವಿಷ್ಣುವರ್ಧನ್ ಭಾಗವಹಿಸಿದ್ದ ಫೋಟೋವೊಂದು ಸಾಮಾಜಿಕ ಜಾಲತಾಣಗಳಲ್ಲಿ ಇಂದಿಗೂ ಹರಿದಾಡುತ್ತಿರುವುದನ್ನು ನೀವು ಗಮನಿಸಬಹುದು. ಕಾಕತಾಳಿಯವೋ ಏನೋ ಎಂಬಂತೆ, ವಿಷ್ಣುವರ್ಧನ್ ಅವರು ನಿಧನರಾದಾಗ ಇದೇ ಅಭಿಮಾನ್ ಸ್ಟುಡಿಯೋದಲ್ಲಿ ಅವರ ಅಂತಿಮ ಕಾರ್ಯ ನೆರವೇರಿತ್ತು!

ಈ ಸ್ಟುಡಿಯೋ ಪ್ರಕರಣವು 2004ರಿಂದಲೂ ಕೋರ್ಟ್‌ನಲ್ಲಿದೆ. ಸರ್ಕಾರ ನೀಡಿದ್ದ 20 ಎಕರೆ ಭೂಮಿಯನ್ನು 20 ವರ್ಷಗಳವರೆಗೆ ಪರಭಾರೆ ಮಾಡದಂತೆ ನಿಯಮ ವಿಧಿಸಿದ್ದರೂ ಸ್ಟುಡಿಯೋ ನಿರ್ಮಾಣಕ್ಕಾಗಿ ಭೂಮಿ ಮಾರಾಟ ಮಾಡಿದ ಆರೋಪಗಳು ಬಾಲಕೃಷ್ಣ ಅವರ ಮಕ್ಕಳ ಮೇಲಿದೆ. 2002ರಲ್ಲಿ 10 ಎಕರೆ ಮಾರಾಟವಾಗಿ 10 ಎಕರೆ ಉಳಿದುಕೊಂಡಿದೆ ಎಂದು ಹೇಳಲಾಗಿತ್ತು. ಆದರೆ, 10 ಎಕರೆಯಲ್ಲ, 8 ಎಕರೆ ಉಳಿದಿದೆ ಎಂಬ ಮಾಹಿತಿ ಓಡಾಡುತ್ತಿದೆ!

ಈಗ, ವಿಷ್ಣುವರ್ಧನ್ ಸಮಾಧಿ ತೆರವು ವಿವಾದ ಮುಗಿಲು ಮುಟ್ಟಿರೋ ಈ ಸಂದರ್ಭದಲ್ಲಿಯೇ ಈ ಭೂಮಿಯನ್ನು ಸರ್ಕಾರ ತನ್ನ ವಶಕ್ಕೆ ಹಿಂಪಡೆದು ಆದೇಶ ಹೊರಡಿಸಿದೆ! ಗಮನಿಯ ಸಂಗತಿ ಏನೆಂದರೆ, ವಿಷ್ಣುವರ್ಧನ್ ಸಮಾಧಿನ ನೆಲಸಮವಾದ ಕೂಡಲೇ ಅವರ ಕೂಚಿಕ್ಕು ಗೆಳೆಯ ಎಸ್.ವಿ. ರಾಜೇಂದ್ರ ಸಿಂಗ್ ಬಾಬು ಅಭಿಮಾನ್ ಸ್ಟುಡಿಯೋ ಬಗ್ಗೆ, ಬಾಲಣ್ಣ ಮಕ್ಕಳ ಅವ್ಯವಹಾರದ ಬಗ್ಗೆ ಕೋರ್ಟ್ ಮೊರೆ ಹೋಗಿದ್ದರು!

4 ☞


ಇಲ್ಲೇ ಮರು ಸ್ಥಾಪನೆ?

ಬಿ. ಶ್ರೀನಿವಾಸ್ ಸುಪುತ್ರ ಬಿ.ಎಸ್ . ಕಾರ್ತಿಕ್ ಬಲೇ ಕಿಲಾಡಿ. ಈತ ಬಿಜೆಪಿಯ ಪ್ರಭಾವಿ ಮುಖಂಡರೊಬ್ಬರ ಆಶೀರ್ವಾದ ಪಡೆದು ಇದ್ದ ಬದ್ದ ಜಾಗವನ್ನೆಲ್ಲ ಮಾರಿಕೊಂಡ ಎಂಬ ಆರೋಪವಿದೆ! ಈ ಕಾರ್ತಿಕ್ ರಾಘವೇಂದ್ರ ಎಂಬುವರಿಗೆ ಸುಮಾರು 10 ಎಕರೆ ಜಾಗ ಮಾರಿದ್ದಾನೆ ಎನ್ನಲಾಗಿದೆ. ಇನ್ನು ಅಲ್ಲಿ ಉಳಿದಿರೋದು 8- 10 ಎಕರೆ ಮಾತ್ರ!

ಇಲ್ಲೇ ನಟ ವಿಷ್ಣುವರ್ಧನ್ ಅಂತ್ಯ ಸಂಸ್ಕಾರ ಮಾಡಲಾಗಿತ್ತು. ಇತ್ತೀಚಿಗೆ ರಾತ್ರೋ ರಾತ್ರಿ ಸಮಾಧಿಯನ್ನು ಹೊಡೆದು ಗುರ್ತೆ ಇಲ್ಲದಂತೆ ಮಾಡಲಾಗಿದೆ! ಇದರಿಂದ ವಿಷ್ಣು ವರ್ಧನ್ ಅವರ ಅಭಿಮಾನಿಗಳು ರೊಚ್ಚಿ ಗೆದ್ದು, ಮುಖ್ಯವಾಗಿ ವಿಷ್ಣುವರ್ಧನ್ ಅವರ ಕುಚಿಕ್ಕೂ ಗೆಳೆಯ ರಾಜೇಂದ್ರ ಸಿಂಗ್ ಬಾಬು ಕೆಂಡಾ ಮಂಡಲರಾಗಿ ಕೋರ್ಟ್ ಮೊರೆ ಹೋಗಿದ್ದಾರೆ!

ಇಂತಹ ಸಂದರ್ಭದಲ್ಲಿಯೇ ರಾಜ್ಯ ಸರ್ಕಾರವು ಅಭಿಮಾನ್ ಸ್ಟುಡಿಯೋ ನಿರ್ಮಾಣಕ್ಕಾಗಿ ನಟ ಬಾಲಕೃಷ್ಣ ಅವರ ಕುಟುಂಬಕ್ಕೆ ನೀಡಿದ್ದ ಎಲ್ಲ 20 ಎಕರೆ ಜಾಗವನ್ನು ಈಗ ಅಧಿಕೃತವಾಗಿ ಮುಟ್ಟುಗೋಲು ಹಾಕಿಕೊಂಡಿದೆ! ಬಾಲಕೃಷ್ಣ ಅವರ ಮೊಮ್ಮಗ ಕಾರ್ತಿಕ್‌ಗೆ ಈಗ ಅಭಿಮಾನ್ ಸ್ಟುಡಿಯೋ ಜಾಗದ ಮೇಲೆ ಯಾವುದೇ ಹಕ್ಕು, ಅಧಿಕಾರ ಇಲ್ಲ... ಇದೇ ಜಾಗದಲ್ಲಿ ವಿಷ್ಣುವರ್ಧನ್ ಸ್ಮಾರಕ ನಿರ್ಮಿಸಲು 10 ಗುಂಟೆ ಜಾಗ ನೀಡಲು ಬಾಲಕೃಷ್ಣ ಅವರ ಕುಟುಂಬ ನಿರಾಕರಿಸಿತ್ತು!



ಈಗ ಅಭಿಮಾನ್ ಸ್ಟುಡಿಯೋ ಜಾಗವನ್ನು ಅರಣ್ಯ ಭೂಮಿ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಅಧಿಕೃತ ಆದೇಶ ಹೊರಡಿಸಿದ್ದಾರೆ. ಎಲ್ಲ 20 ಎಕರೆ ಜಾಗವನ್ನು ಅರಣ್ಯ ಭೂಮಿ ಎಂದು ರಾಜ್ಯ ಸರ್ಕಾರ ತನ್ನ ವಶಕ್ಕೆ ಪಡೆದಿದೆ. ನಟ ಬಾಲಕೃಷ್ಣ ಅವರು ರಾಜ್ಯ ಸರ್ಕಾರದಿಂದ 20 ಎಕರೆ ಭೂಮಿಯನ್ನು 20 ವರ್ಷಗಳಿಗೆ ಲೀಸ್‌ಗೆ ಪಡೆದಿದ್ದರು. ನಂತರ ಅದನ್ನು ಕಂದಾಯ ಇಲಾಖೆಯು ಸ್ಟುಡಿಯೋ ನಿರ್ಮಾಣಕ್ಕಾಗಿ ಬಾಲಕೃಷ್ಣ ಅವರಿಗೆ ನೀಡಿತ್ತು. ಆದರೇ, ನಿಗದಿತ ಕಾಲಮಿತಿಯಲ್ಲಿ ಆ ಜಾಗದಲ್ಲಿ ಸ್ಟುಡಿಯೋವನ್ನು ನಿರ್ಮಾಣ ಮಾಡಿಲ್ಲ, ಹಾಗೂ 20 ವರ್ಷ ಯಾರಿಗೂ ಮಾರುವಂತಿಲ್ಲ ಎಂಬ ಷರತ್ತು ಸೈಡ್‌ಗಿಟ್ಟು, ಚೂರು ಚೂರೇ ಮಾರಿಕೊಂಡಿದ್ದರು.

20 ಎಕರೆ ಪೈಕಿ 10 ಎಕರೆ ಜಾಗವನ್ನು ಅವರ ಮೊಮ್ಮಗ ಬಿ ಎಸ್ ಕಾರ್ತಿಕ್, ರಾಘವೇಂದ್ರ ಎಂಬುವರಿಗೆ ಪ್ರತಿ ಎಕರೆ ಭೂಮಿಯನ್ನು 1 ಕೋಟಿ 37 ಲಕ್ಷ ರೂ.ಗೆ ಮಾರಾಟ ಮಾಡಿದ್ದಾನೆ. ಹೀಗಾಗಿ ನಿಯಮ ಉಲ್ಲಂಘನೆಯ, ಷರತ್ತಿನ ಉಲಂಘನೆಯ ಕಾರಣದಿಂದ ಎಲ್ಲ 20 ಎಕರೆ ಜಾಗವನ್ನು ಜಿಲ್ಲಾಡಳಿತ ಹಾಗೂ ರಾಜ್ಯ ಸರ್ಕಾರ ತನ್ನ ವಶಕ್ಕೆ ಪಡೆದಿದೆ. ಬಾಲಕೃಷ್ಣ ಅವರಿಗೆ ನೀಡಿದ್ದ 20 ಮೀಸಲು ಅರಣ್ಯ ಪ್ರದೇಶವನ್ನು ಅನಧಿಕೃತವಾಗಿ ಮಾರಾಟ ಮಾಡಿದ್ದಾರೆ. ಈಗ ರಾಜ್ಯ ಸರ್ಕಾರ ಮಾರಾಟ ಮಾಡಿದ್ದ ಜಾಗದ ಜೊತೆಗೆ ಉಳಿದ ಜಾಗವನ್ನು... ಎಲ್ಲ 20 ಎಕರೆ ಜಾಗವನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದೆ!



ಅಸಲಿಗೆ, ಬಾಲಣ್ಣ ಕಾನೂನು ಬದ್ದವಾಗಿ ಈ ಭೂಮಿಯನ್ನು ಪಡೆದಿರಲೇ ಇಲ್ಲ! ಸರ್ಕಾರ ಲೀಸ್‌ಗೆ ನೀಡಿದ್ದ ಷರತ್ತುಗಳನ್ನು ನಟ ಬಾಲಕೃಷ್ಣ ಮತ್ತವರ ಕುಟುಂಬ ಪಾಲಿಸುತ್ತಿರಲಿಲ್ಲ! ಮೊಮ್ಮಗ ಕಾರ್ತಿಕ್ ಗೆ ಜಮೀನು ಮಾರಾಟ ಮಾಡುವ ಹಕ್ಕೇ ಇರಲಿಲ್ಲ! ಆದರೂ, ಮಾರಾಟ ಮಾಡಿದ್ದಾರೆ. ಕೋಟಿ ಕೋಟಿ ನುಂಗಿ ನೀರು ಕುಡಿದಿದ್ದಾರೆ!

ಈಗ ಕಾರ್ತಿಕ್ ನಿಂದ ಜಮೀನು ಖರೀದಿಸಿದವರು ಈಗ ಇಂಗು ತಿಂದ ಮಂಗನಂತೆ ಆಗಿದ್ದಾರೆ! ರಾಜ್ಯ ಸರ್ಕಾರದ ಈ ನಿರ್ಧಾರ ಹಾಗೂ ಮುಟ್ಟುಗೋಲು ಕ್ರಮವನ್ನು ಪ್ರಶ್ನಿಸಿ ಬಾಲಕೃಷ್ಣ ಕುಟುಂಬ, (ಮೊಮ್ಮಗ ಕಾರ್ತಿಕ್) ಕೋರ್ಟ್ ಮೆಟ್ಟಿಲೇರಬಹುದು. ಬಟ್, ರಾಜ್ಯ ಸರ್ಕಾರ ಕೋರ್ಟ್‌ನಲ್ಲಿ ತನ್ನ ತೀರ್ಮಾನವನ್ನು ಸಮರ್ಥಿಸಿಕೊಳ್ಳಬಹುದು!



ರಾಜ್ಯ ಸರ್ಕಾರವು, ಬಾಲಕೃಷ್ಣ ಕುಟುಂಬವು ನಿಯಮ ಹಾಗೂ ಷರತ್ತುಗಳನ್ನು ಉಲಂಘಿಸಿ ಜಾಗವನ್ನು ಮಾರಾಟ ಮಾಡಿದೆ, ಜೊತೆಗೆ ಷರತ್ತು ಹಾಗೂ ನಿಯಮದಂತೆ ಈ ಜಾಗದಲ್ಲಿ ಸ್ಟುಡಿಯೋ ನಿರ್ಮಾಣ ಮಾಡಿಲ್ಲ, ಲೀಸ್‌ಗೆ ಪಡೆದಿದ್ದ 20 ವರ್ಷದ ಅವಧಿಯೂ ಮುಗಿದಿದೆ... ಎಂದು ವಿವರಿಸಿ ವಿವಾದಿತ ಜಾಗವು ಅರಣ್ಯ ಭೂಮಿ ಎಂದು ಮನವರಿಕೆ ಮಾಡಿ ಕೊಡಬಹುದು! ಹೀಗಾಗಿ ಕಾನೂನು ಹೋರಾಟದಲ್ಲಿ ನಟ ಬಾಲಕೃಷ್ಣ ಮಕ್ಕಳು, ಮೊಮ್ಮಕ್ಕಳಿಗೆ ಹಿನ್ನಡೆಯಾಗುವ ಸಾಧ್ಯತೆಯೇ ಹೆಚ್ಚಾಗಿದೆ!! ☯

# ಸ್ಮಾರಕ ತೆರವುಗೊಳಿಸಿದ್ದು ಹೇಗೆ?

ಅಭಿಮಾನ್ ಸ್ಟುಡಿಯೋ ಆವರಣದಲ್ಲಿದ್ದ ವಿಷ್ಣುವರ್ಧನ್ ಅವರ ಸ್ಮಾರಕವನ್ನು ರಾತ್ರೋರಾತ್ರಿ ನೆಲಸಮಗೊಳಿಸಿದ್ದರಿಂದ ಅವರ ಅಭಿಮಾನಿ ಬಳಗದಿಂದ ಸಾಕಷ್ಟು ವಿರೋಧ ವ್ಯಕ್ತವಾಗಿತ್ತು. ಈ ಮಧ್ಯೆ, ವಿಷ್ಣು ಸ್ಮಾರಕವನ್ನು ರಾಜ್ಯ ಹೈಕೋರ್ಟ್ ಆದೇಶದಂತೆ ತೆರವುಗೊಳಿಸಲಾಗಿದೆ ಎಂದು ತಿಳಿದು ಬಂದಿತ್ತು. ಹಾಗಾದರೆ, ಸ್ಮಾರಕ ತೆರವಿಗೆ ಕೋರಿ ನ್ಯಾಯಾಲಯದ ಮೊರೆ ಹೋದವರು ಯಾರು, ಹೈಕೋರ್ಟ್ ಯಾವಾಗ ಆದೇಶ ಮಾಡಿತ್ತು, ಆ ಆದೇಶದಲ್ಲೇನಿತ್ತು ಎಂಬ ಪ್ರಶ್ನೆಗಳಿಗೆ ಇಲ್ಲಿದೆ ಉತ್ತರ.

ಅಭಿಮಾನ್ ಸ್ಟುಡಿಯೋ ಆವರಣದಲ್ಲಿರುವ ಅನಧಿಕೃತ ಸ್ಮಾರಕವನ್ನು ತೆರವುಗೊಳಿಸುವಂತೆ ಕೋರಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದವರು ಅಭಿಮಾನ್ ಸ್ಟುಡಿಯೋ ಮೂಲ ಮಾಲೀಕರಾದ ಹಿರಿಯ ನಟ ಬಾಲಕೃಷ್ಣ ಅವರ ಮೊಮ್ಮ ಬಿ.ಎಸ್. ಕಾರ್ತಿಕ್! ಮೊದಲಿಗೆ, ಸ್ಟುಡಿಯೋ ಆವರಣದಲ್ಲಿರುವ ಸ್ಮಾರಕ ತೆರವುಗೊಳಿಸುವಂತೆ ಕೋರಿ 2024ರ ಡಿಸೆಂಬರ್ 13ರಂದು ಬೆಂಗಳೂರು ನಗರ ವಿಶೇಷ ಜಿಲ್ಲಾಧಿಕಾರಿಗೆ ಕಾರ್ತಿಕ್ ಮನವಿ ಸಲ್ಲಿಸಿದ್ದರು. ಆದರೆ, ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ 2025ರ ಜನವರಿ 9ರಂದು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು.

### ಹೈಕೋರ್ಟ್ ಆದೇಶವೇನು?

ಅರ್ಜಿ ಕುರಿತು ಜನವರಿ 13ರಂದು ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಮೈಸೂರಿನಲ್ಲಿ ಡಾ. ವಿಷ್ಣುವರ್ಧನ್ ಅವರ ಸ್ಮಾರಕ ನಿರ್ಮಿಸಲು ಸರಕಾರ ನಿರ್ಧರಿಸಿದ್ದು, ಈಗಾಗಲೇ ಅಲ್ಲಿ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ. ಹೀಗಿರುವಾಗ, ವಿವಾದಿತ ಜಾಗದಲ್ಲಿ ಕಟ್ಟಡ/ಸ್ಮಾರಕವಿರುವುದು ಅಪ್ರಸ್ತುತವೆನಿಸಲಿದೆ. ಆದ್ದರಿಂದ, ವಿವಾದಿತ ಭೂಮಿಯಲ್ಲಿ ಯಾವುದೇ ಕಟ್ಟಡಗಳನ್ನು ನಿರ್ಮಿಸಿದ್ದರೆ, ಅದನ್ನು ಎರಡು ತಿಂಗಳ ಒಳಗೆ ತೆರವುಗೊಳಿಸಬೇಕು ಎಂದು ಬೆಂಗಳೂರು ನಗರ ವಿಶೇಷ ಜಿಲ್ಲಾಧಿಕಾರಿಗೆ ನಿರ್ದೇಶಿಸಿತ್ತು.

ಒಂದು ವೇಳೆ, ನ್ಯಾಯಾಲಯದ ಆದೇಶದಂತೆ ವಿಶೇಷ ಜಿಲ್ಲಾಧಿಕಾರಿಗಳು ತೆರವುಗೊಳಿಸದಿದ್ದರೆ, ಅರ್ಜಿದಾರರೇ ತೆರವು ಕಾರ್ಯ ನಡೆಸಬಹುದು. ಅಂತಹ ಸಂದರ್ಭದಲ್ಲಿ ಅನಧಿಕೃತ ಕಟ್ಟಡದ ತೆರವು ಹಾಗೂ ಕಟ್ಟಡ ತ್ಯಾಜ್ಯ ಸಾಗಣೆಗೆ ತಗಲುವ ವೆಚ್ಚವನ್ನು ಬೆಂಗಳೂರು ನಗರ ವಿಶೇಷ ಜಿಲ್ಲಾಧಿಕಾರಿ ಹಾಗೂ ಸರಕಾರವೇ ಭರಿಸಬೇಕು ಎಂದು ನಿರ್ದೇಶಿಸಿ, ಅರ್ಜಿಯನ್ನು ಇತ್ಯರ್ಥಪಡಿಸಿತ್ತು.

ನ್ಯಾಯಾಲಯದ ಆದೇಶದಂತೆ ಎರಡು ತಿಂಗಳಲ್ಲಿ ಸ್ಮಾರಕ ಸ್ಥಳವನ್ನು ತೆರವು ಮಾಡದ ಕಾರಣ, ಕಳೆದ ಗುರುವಾರ ರಾತ್ರಿ ಪೊಲೀಸರ ಸಮ್ಮುಖದಲ್ಲಿ ನಮ್ಮ ಕಕ್ಷಿದಾರರೇ ತೆರವು ಮಾಡಿದ್ದಾರೆ ಎಂದು ಬಿ.ಎಸ್. ಕಾರ್ತಿಕ್ ಪರ ವಕೀಲರಾದ ವಿ. ಕಾರ್ತಿಕ್ ಮಾಹಿತಿ ನೀಡಿದ್ದರು.

### ಪಿಐಎಲ್ ವಜಾಗೊಳಿಸಿದ್ದ ಹೈಕೋರ್ಟ್!

ಡಾ. ವಿಷ್ಣುವರ್ಧನ್ ಸ್ಮಾರಕ ಭವನ ನಿರ್ಮಾಣಕ್ಕಾಗಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ಮೈಲಸಂದ್ರ ಗ್ರಾಮದ ಸರ್ವೇ ಸಂಖ್ಯೆ 68ರಲ್ಲಿ (ಹಳೇ ಸರ್ವೇ ಸಂಖ್ಯೆ 26) 10 ಗುಂಟೆ ಜಾಗ ಮಂಜೂರು ಮಾಡಲು ಸರಕಾರ ಹಾಗೂ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ನಿರ್ದೇಶಿಸುವಂತೆ ಕೋರಿ ವಿಷ್ಣುಸೇನಾ ಸಂಘಟನೆ, ಡಾ. ವಿಷ್ಣುವರ್ಧನ್ ಪುಣ್ಯಭೂಮಿ ಟ್ರಸ್ಟ್, ಸಿ.ಸಿ. ಶ್ರೀಧರ್ ಸೇರಿ 7 ಮಂದಿ 2023ರಲ್ಲಿ ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ, ವಿಷ್ಣುವರ್ಧನ್ ಅವರ ಸ್ಮಾರಕವನ್ನು ಬೆಂಗಳೂರಿನಿಂದ ಮೈಸೂರಿಗೆ ಸ್ಥಳಾಂತರಿಸಲು 2020ರ ಜನವರಿ 10ರಂದು ಸರಕಾರ ಹೊರಡಿಸಿದ್ದ ಆದೇಶ ಹಾಗೂ ಮೈಸೂರಿನಲ್ಲಿ 8 ಕೋಟಿ ರೂ. ವೆಚ್ಚದಲ್ಲಿ ಸ್ಮಾರಕ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸುವ ವಿಚಾರಗಳನ್ನು ಗಮನಿಸಿತ್ತಲ್ಲದೆ, ಚಿತ್ರತಾರೆಯೊಬ್ಬರಿಗೆ ಸ್ಮಾರಕ ನಿರ್ಮಾಣ ಮಾಡಬೇಕೆಂಬ ಮನವಿಯು ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಸ್ತು ವಿಷಯವಲ್ಲ ಎಂದು ಅಭಿಪ್ರಾಯಪಟ್ಟು, 2024ರ ಜೂನ್ 4ರಂದು ಪಿಐಎಲ್ ವಜಾಗೊಳಿಸಿತ್ತು. ವಿಭಾಗೀಯ ನ್ಯಾಯಪೀಠದ ಈ ಆದೇಶವನ್ನು ವಿಷ್ಣುವರ್ಧನ್ ಸ್ಮಾರಕ ತೆರವಿಗೆ ಹೊರಡಿಸಿರುವ ಆದೇಶದಲ್ಲಿ ಏಕಸದಸ್ಯ ನ್ಯಾಯಪೀಠ ಉಲ್ಲೇಖಿಸಿರುವುದನ್ನು ಗಮನಿಸಬಹುದು! ☯

# ಸುದೀಪ್ ಅವಸರ ಪಟ್ಟರಾ?



ಅಭಿಮಾನ್ ಸ್ಟುಡಿಯೋದಲ್ಲಿದ್ದ ವಿಷ್ಣುವರ್ಧನ್ ಅವರ ಸಮಾಧಿಯನ್ನು ಬಾಲಣ್ಣನ ಮೊಮ್ಮಗ ಕಾರ್ತಿಕ್ ಒಡೆದು ಹಾಕಿದ್ದ ದಿವಸ ದಾದಾ ಅಭಿಮಾನಿಗಳ ಆಕ್ರೋಶ ಮುಗಿಲು ಮುಟ್ಟಿತ್ತು. ಕಿಚ್ಚ ಸುದೀಪ್ ಕೂಡಾ ಉರಿದು ಬಿದ್ದು, ಅವರನ್ನು ಬೇಡಿದ್ದು ಸಾಕು...ನಾವು ಏನು ಬೇಕೋ ಅದನ್ನು ಮಾಡೋಣ ಎಂದಿದ್ದರು! ಯಾರ ಸಹಾಯವೂ ಬೇಡ, ತಾವೇ ಜಾಗ ಖರೀದಿ ಮಾಡಿ ಸ್ಮಾರಕ ನಿರ್ಮಿಸೋಣ ಎಂದು ಕೆಂಗೇರಿಯಲ್ಲೇ ಅರ್ಧ ಎಕರೆ ಜಾಗ ಖರೀದಿ ಮಾಡಿದ್ದರು! ಇದನ್ನು ವಿಷ್ಣುವರ್ಧನ್ ಅವರ ಇನ್ನೊಬ್ಬ ಅಪ್ಪಟ ಅಭಿಮಾನಿ ವೀರಕಪುತ್ರ ಶ್ರೀನಿವಾಸ್ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದರು.ಅಲ್ಲದೆ, ಸದ್ಯದಲ್ಲೇ ಇಲ್ಲಿ ಎತ್ತರದ ಪ್ರತಿಮೆ ನಿಲ್ಲಿಸಿ ವಿಷ್ಣುಜಿ ಸ್ಮಾರಕ ನಿರ್ಮಿಸುತ್ತೇವೆ.

ಕಿಚ್ಚ ಸುದೀಪ್ ಒಪ್ಪಿದರೆ ಅವರ ಹುಟ್ಟು ಹಬ್ಬವಾದ ಸೆಪ್ಟೆಂಬರ್ 2ರಂದೇ ಸ್ಮಾರಕಕ್ಕೆ ಅಡಿಗಲ್ಲು ಹಾಕಲಿದ್ದೇವೆ. ಸ್ಮಾರಕದ ಮಾದರಿ ಈಗಾಗಲೇ ತಯಾರಾಗುತ್ತಿದೆ ಎಂದಿದ್ದರು ಕೂಡ. ಇದು ಅಭಿಮಾನಿಗಳಿಗೆ ನಿಜಕ್ಕೂ ಸಿಹಿ ಸುದ್ದಿಯಾಗಿತ್ತು. ಇದೀಗ, ಇನ್ನೊಂದು ಸಿಹಿ ಸುದ್ದಿ ಬಂತು, ಅಭಿಮಾನ್ ಸ್ಟುಡಿಯೋ ಸರ್ಕಾರದ ವಶಕ್ಕೆ!! ☯



ಕರ್ನಾಟಕ ವಿಧಾನ ಪರಿಷತ್‌ಗೆ ಕಡೆಗೂ ನಾಲ್ವರ ಹೆಸರು ಅಂತಿಮಗೊಂಡಿದೆ. ಜಕ್ಕಪ್ಪ, ಆರತಿ ಕೃಷ್ಣ, ರಮೇಶ್‌ಬಾಬು ಹಾಗೂ ಪತ್ರಕರ್ತ ಶಿವಕುಮಾರ್‌ರನ್ನು ನಾಮ ನಿರ್ದೇಶನ ಮಾಡಲು ಕಾಂಗ್ರೆಸ್ ಹೈಕಮ್ಯಾಂಡ್ ಒಪ್ಪಿಗೆ ನೀಡಿದೆ. ಮೊದಲ ಪಟ್ಟಿಯಲ್ಲಿದ್ದ ದಲಿತ ಹೋರಾಟಗಾರ ಡಿ.ಜಿ. ಸಾಗರ್, ಪತ್ರಕರ್ತ ದಿನೇಶ್ ಅಮೀನು ಮಟ್ಟು ಅವರಿಗೆ ಸ್ಥಾನ ಸಿಕ್ಕಿಲ್ಲ!!



# ವಿಧಾನ ಪರಿಷತ್ ನಾಮಕರಣಕೆ ಹೈಕಮ್ಯಾಂಡ್ ಹೈಡ್ರಾಮಾ!

✍ ಮಹದೇವ್ ಕೆಂಪಯ್ಯ

ಕರ್ನಾಟಕ ರಾಜ್ಯ ವಿಧಾನ ಪರಿಷತ್‌ಗೆ ತೀವ್ರ ಹಗ್ಗಜಗ್ಗಾಟದ ನಡುವೆಯೂ ನಾಲ್ವರ ನಾಮನಿರ್ದೇಶನಕ್ಕೆ ಕಾಂಗ್ರೆಸ್ ಹೈಕಮ್ಯಾಂಡ್‌ನಿಂದ ಒಪ್ಪಿಗೆ ಸಿಕ್ಕಿದೆ. ಹುಬ್ಬಳ್ಳಿ ಧಾರವಾಡದ ಕಾಂಗ್ರೆಸ್ ಪಕ್ಷದ ದಲಿತ ಮುಖಂಡ ಜಕ್ಕಪ್ಪನವರನ್ನು ವಿಧಾನ ಪರಿಷತ್‌ಗೆ ನಾಮ ನಿರ್ದೇಶನ ಮಾಡಲು ಕಾಂಗ್ರೆಸ್ ಹೈಕಮ್ಯಾಂಡ್ ಒಪ್ಪಿಗೆ ನೀಡಿದೆ.

ಇನ್ನೂ, ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಕ್ಷೇತ್ರದ ಕಾಂಗ್ರೆಸ್ ನಾಯಕಿ ಆರತಿ ಕೃಷ್ಣರನ್ನು ವಿಧಾನ ಪರಿಷತ್ ಗೆ ನಾಮ ನಿರ್ದೇಶನ ಮಾಡಲು ಕಾಂಗ್ರೆಸ್ ಹೈಕಮ್ಯಾಂಡ್ ಒಪ್ಪಿಗೆ ನೀಡಿದೆ. ಜೊತೆಗೆ ಕಾಂಗ್ರೆಸ್ ಮಾಧ್ಯಮ ವಕ್ತಾರ ರಮೇಶ್‌ಬಾಬುಗೆ ಕಾಂಗ್ರೆಸ್ ಪಕ್ಷದಿಂದ ವಿಧಾನ ಪರಿಷತ್ ನಾಮನಿರ್ದೇಶನ ಮಾಡಲಾಗುತ್ತಿದೆ.

ಮೈಸೂರಿನ ಇಂಗ್ಲೀಷ್ ಪತ್ರಕರ್ತ ಶಿವಕುಮಾರ್ ರನ್ನು ವಿಧಾನ ಪರಿಷತ್‌ಗೆ ನಾಮ ನಿರ್ದೇಶನ ಮಾಡಲಾಗುತ್ತಿದೆ. ಜಕ್ಕಪ್ಪ ಮತ್ತು ಆರತಿ ಕೃಷ್ಣ ಕಾಂಗ್ರೆಸ್ ಪಕ್ಷದ ಹೈಕಮ್ಯಾಂಡ್ ಕೋಟಾದ ಅಭ್ಯರ್ಥಿಗಳಾಗಿ ಆಯ್ಕೆಯಾಗಿದ್ದರೇ, ಮುಖ್ಯಮಂತ್ರಿಗಳ ಕೋಟಾದಿಂದ ರಮೇಶ್ ಬಾಬು ಮತ್ತು ಪತ್ರಕರ್ತ ಶಿವಕುಮಾರ್ ಆಯ್ಕೆಯಾಗಿದ್ದಾರೆ! ಜಕ್ಕಪ್ಪ ಮತ್ತು ಪತ್ರಕರ್ತ ಶಿವಕುಮಾರ್ ದಲಿತ ಬಲಗೈ ಸಮುದಾಯದವರು. ಶಿವಕುಮಾರ್ ಸದ್ಯ ಮೈಸೂರಿನಲ್ಲಿ ಇಂಗ್ಲೀಷ್ ದಿನಪತ್ರಿಕೆಯೊಂದರ ಹಿರಿಯ ಪತ್ರಕರ್ತರಾಗಿದ್ದಾರೆ.

ಆರತಿ ಕೃಷ್ಣ ಒಕ್ಕಲಿಗ ಸಮುದಾಯದವರಾಗಿದ್ದು,









ಮಾಜಿ ಸಚಿವ ಬೇಗಾನೆ ರಾಮಯ್ಯನವರ ಮಗಳು ಎಂಬುದು ಗಮನೀಯ ಸಂಗತಿ.ಆರತಿ ಕೃಷ್ಣ ಅವರು ಸದ್ಯ ಅನಿವಾಸಿ ಭಾರತೀಯ ಸೆಲ್ ಉಪಾಧ್ಯಕ್ಷೆಯಾಗಿದ್ದಾರೆ. ಇನ್ನೂ ರಮೇಶ್‌ಬಾಬು ಕಾಂಗ್ರೆಸ್ ಪಕ್ಷದ ಮಾಧ್ಯಮ ವಿಭಾಗದ ಮುಖ್ಯಸ್ಥರಾಗಿದ್ದಾರೆ. ಅವರು ಈ ಹಿಂದೆ ಜೆಡಿಎಸ್ ಪಕ್ಷದಲ್ಲಿದ್ದು ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ ಗೆ ಆಯ್ಕೆಯಾಗಿದ್ದರು. ಬಳಿಕ ಜೆಡಿಎಸ್ ತ್ಯಜಿಸಿ ಕಾಂಗ್ರೆಸ್ ಪಕ್ಷ ಸೇರಿದ್ದರು. ವೃತ್ತಿಯಲ್ಲಿ ವಕೀಲರಾಗಿರುವ ರಮೇಶ್ ಬಾಬು ಓಬಿಸಿ ಸಮುದಾಯದವರು. ಮೂಲತಃ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ನಿವಾಸಿಗಳು. ವಿಧಾನ ಪರಿಷತ್ ನಾಮ ನಿರ್ದೇಶನ ಪ್ರಕ್ರಿಯೆ ಶುರುವಾದಾಗ ಈ ಮೊದಲು ಕಾಂಗ್ರೆಸ್ ಹೈ ಕಮ್ಯಾಂಡ್ ದಲಿತ ಹೋರಾಟಗಾರ ಡಿ.ಜಿ. ಸಾಗರ್ ಮತ್ತು ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಅವರ ಹೆಸರುಗಳನ್ನು ಅಂತಿಮಗೊಳಿಸಿತ್ತು. ಆ ಪಟ್ಟಿಗೆ ವಿರೋಧ ವ್ಯಕ್ತವಾದ ಬಳಿಕ ಆ ಪಟ್ಟಿಯನ್ನು ತಡೆ ಹಿಡಿಯಲಾಗಿತ್ತು. ಈಗ ಅಂತಿಮವಾಗಿ ಪಟ್ಟಿಯಲ್ಲಿ ಡಿ.ಜಿ. ಸಾಗರ್ ಮತ್ತು ದಿನೇಶ್ ಅಮೀನುಮಟ್ಟು ಅವರ ಬದಲು ಜಕ್ಕಪ್ಪ ಹಾಗೂ ಪತ್ರಕರ್ತ ಶಿವಕುಮಾರ್ ಸ್ಥಾನ ಪಡೆದುಕೊಂಡಿದ್ದಾರೆ!

ಚಿಂತಕರ ಚಾವಡಿ ಎಂದೇ ಖ್ಯಾತಿವೆತ್ತ ವಿಧಾನ ಪರಿಷತ್‌ಗೆ ನಾಲ್ವರ ಹೆಸರು ಸಿದ್ದಪಡಿಸೋ ಕಾರ್ಯ ತಿಂಗಳ ಹಿಂದೆಯೇ ಶುರುವಾಗಿತ್ತು. ಸಿಎಂ ಸಿದ್ದರಾಮಯ್ಯ, ತಮ್ಮ ಪ್ರೀತಿ ಪಾತ್ರರನ್ನು ಆಯ್ಕೆ ಮಾಡಿ ಹೈ ಕಮ್ಯಾಂಡ್ ಕಳುಹಿಸಿದ್ದರು. ಆದರೆ, ಆ ಪಟ್ಟಿಗೆ ಬ್ರೇಕ್ ಬಿದ್ದಿತ್ತು! ಇದು ಯಾರ ಚಿತಾವಣೆಯಿಂದ ನಡೆದಿರಬಹುದು? ಎಂಬುದೇ ಕುತೂಹಲಕಾರಿಯಾಗಿತ್ತು! ತಮ್ಮ ಪಟ್ಟಿಗೆ ಬ್ರೇಕ್ ಬಿದ್ದಾಗ ತಕ್ಷಣ ದಿಲ್ಲಿಗೆ ಹೋಗಿದ್ದ ಸಿಎಂ ಸಿದ್ಧರಾಮಯ್ಯ ಕಾಂಗ್ರೆಸ್ ವರಿಷ್ಟರ ವಿರುದ್ಧ ಫುಲ್ ಗರಂ ಆಗಿದ್ದರು.ತಾವಿಡುವ ಹೆಜ್ಜೆಗಳಿಗೆ ವರಿಷ್ಟರು ಪದೇ ಪದೇ ಅಡ್ಡಗಾಲು ಹಾಕುತ್ತಿದ್ದಾರೆ ಎಂಬುದೇ ಅವರ ಸಿಟ್ಟಿಗೆ ಕಾರಣವಾಗಿತ್ತು.

ಇಸವಿ 2013ರಲ್ಲಿ ಅವರು ಮೊದಲು ಮುಖ್ಯಮಂತ್ರಿಯಾಗಿದ್ದಾಗ ದಿಲ್ಲಿ ನಾಯಕರು ಅವರ ತಂಟೆಗೆ ಬರುತ್ತಿರಲಿಲ್ಲವಂತೆ. ಅದೇ ರೀತಿ ಇಲ್ಲಿ ಕೆಪಿಸಿಸಿ ಅಧ್ಯಕ್ಷರಾದವರೂ ಕೂಡ ಅವರಿಗೆ ಕಿರಿಕಿರಿ ಮಾಡುತ್ತಿರಲಿಲ್ಲವಂತೆ. ಕಾರಣ? ಅವತ್ತು ಎಐಸಿಸಿ ಅಧ್ಯಕ್ಷರಾಗಿದ್ದ ಸೋನಿಯಾ ಗಾಂಧಿ ಅವರಿಗೆ ಕರ್ನಾಟಕದ ರಾಜಕಾರಣವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಅನಿವಾರ್ಯತೆ ಇರಲಿಲ್ಲ!

ರಾಷ್ಟ್ರಮಟ್ಟದಲ್ಲಿ ಪಕ್ಷದ ಹಿತ ರಕ್ಷಿಸಲು ಕರ್ನಾಟಕದಿಂದ ಅವರೇನು ಬಯಸುತ್ತಿದ್ದರೋ?ಅದಕ್ಕೆ ಕೊರತೆಯಾಗದಂತೆ ಸಿ ಎಂ ಸಿದ್ದರಾಮಯ್ಯ ನೋಡಿಕೊಳ್ಳುತ್ತಿದ್ದರು. ಇದೇ ರೀತಿ ಕರ್ನಾಟಕದಲ್ಲಿ ಪಕ್ಷದ ಅಧ್ಯಕ್ಷರಾಗಿದ್ದ ಡಾ.ಜಿ. ಪರಮೇಶ್ವರ್ ಸಹ ತಪ್ಪಿಯೂ ಸಿದ್ಧರಾಮಯ್ಯ ಅವರ ದಾರಿಗೆ ಅಡ್ಡಿ ಮಾಡುತ್ತಿರಲಿಲ್ಲ, ಪರಮೇಶ್ವರ್ ಅವರಿಗೆ ಅವತ್ತು ಸಿಎಂ ಆಗುವ ಅವಕಾಶ ಕೈ ತಪ್ಪಿ ಹೋಗಿದ್ದಕ್ಕೆ ನೋವೇನೋ ಇತ್ತು. ವಿಧಾನಸಭಾ ಚುನಾವಣೆಯಲ್ಲಿ ಸ್ವಪಕ್ಷೀಯರೇ ಗ್ಯಾಂಗ್ ಅಪ್ ಆಗಿ ತಮ್ಮನ್ನು ಸೋಲಿಸಿದರು ಎಂಬ ಸಿಟ್ಟಿತ್ತು ಅವರಿಗೆ. ಆದರೆ ಆ ಸಿಟ್ಟನ್ನು ಬಹಿರಂಗವಾಗಿ ತೋರಿಸಿಕೊಳ್ಳದ ಪರಮೇಶ್ವರ್, ತಮಗೆ ತೀರಾ ಕಿರಿಕಿರಿಯಾದಾಗ ಮಾತ್ರ ದಿಲ್ಲಿಗೆ ಹೋಗುತ್ತಿದ್ದರು.

ಸೋನಿಯಾರನ್ನೋ ಅಥವಾ ಇತರ ನಾಯಕರನ್ನೋ ಭೇಟಿಯಾಗಿ ತಮ್ಮ ಸೋಲಿಗೆ ಕಾರಣವೇನು?ಎಂಬುದನ್ನು ಅವರಿಗೆ ವಿವರಿಸಿ ತಮಗೆ ತಾವೇ ಸಮಾಧಾನ ಪಟ್ಟುಕೊಳ್ಳುತ್ತಿದ್ದರು! ಅಂಥ ಸಂದರ್ಭದಲ್ಲೇ ಸೋನಿಯಾಗಾಂಧಿ ಅವರು ಪರಮೇಶ್ವರ್ ಅವರನ್ನು ಸಮಾಧಾನಿಸಿ 'ನೀವು ಡಿಸಿಎಂ ಆಗುವಂತೆ ನೋಡಿಕೊಳ್ಳುತ್ತೇನೆ' ಅಂತ ಸಮಾಧಾನಿಸಿದ್ದರಂತೆ. ಆದರೆ ಸೋನಿಯಾಗಾಂಧಿ ಹೀಗೆ ಸಮಾಧಾನಿಸಿದರೂ ಅವತ್ತು ರಾಜ್ಯ ಕಾಂಗ್ರೆಸ್ ಉಸ್ತುವಾರಿಗೆ ಅಂತ ಬಂದ ದಿಗ್ವಿಜಯ್ ಸಿಂಗ್ ಅವರು ಕೆಲವು ದಿನ ಪರಮೇಶ್ವರ್ ಜತೆ ತಾರಮ್ಮಯ್ಯ ಆಡಿದ್ದರು ಎಂಬುದು ಗುಟ್ಟಾಗೇನು ಉಳಿದಿಲ್ಲ!

ಆದರೆ ಅಂತಿಮವಾಗಿ ಸಿಎಂ ಸಿದ್ಧರಾಮಯ್ಯ ಅವರಿಗಿರುವ ಪವರ್ ನೋಡಿ ಅವರ ಕ್ಯಾಂಪಿನಲ್ಲೇ ಸೆಟ್ಲಾದರು. ಅಷ್ಟೇ ಅಲ್ಲ, ಪರಮೇಶ್ವರ್ ಅವರನ್ನು ಡಿಸಿಎಂ ಮಾಡಿದರೆ ಸಿದ್ಧರಾಮಯ್ಯ ಅವರೆದುರು ಮತ್ತೊಂದು ಪವರ್ ಸೆಂಟರ್ ಮೇಲೆದ್ದು ನಿಲ್ಲಲು ಅವಕಾಶ ಮಾಡಿಕೊಟ್ಟಂತಾಗುತ್ತದೆ ಅಂತ ಮೇಡಂಗೆ ರಿಪೋರ್ಟು ಕೊಟ್ಟು ಪರಮೇಶ್ವರ್ ತಣ್ಣಗಾಗುವಂತೆ ಮಾಡಿದ್ದರು ಕೂಡ!

ಅವತ್ತು ಎಐಸಿಸಿ ಮಟ್ಟದಲ್ಲಾಗಲೀ, ಕೆಪಿಸಿಸಿ ಮಟ್ಟದಲ್ಲಾಗಲೀ ಸಿದ್ದರಾಮಯ್ಯ ವಿರುದ್ಧ ಪವರ್ ಸೆಂಟರುಗಳು ತಲೆ ಎತ್ತಲೇ ಇಲ್ಲಾ. ಆದರೆ 2023 ರಲ್ಲಿ ಎರಡನೇ ಸಲ ಮುಖ್ಯಮಂತ್ರಿಯಾದ ನಂತರ ಸಿದ್ಧರಾಮಯ್ಯ ಅವರ ಆಡಳಿತವು ಸಿಂಗಲ್ ವಿಂಡೋ ಏಜೆನ್ಸಿ ಅಗಿ ಉಳಿದಿಲ್ಲ ಎಂಬುದು ನೋಟ್ ದಿಸ್ ಪಾಯಿಂಟ್...! ಯಾಕೆಂದರೆ ಕೆಪಿಸಿಸಿ ಅಧ್ಯಕ್ಷರಾಗಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ, ಎಐಸಿಸಿ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕರ್ನಾಟಕದ ರಾಜಕಾರಣದ ಮೇಲೆ ಬಿಗಿ ಹಿಡಿತ ಬೇಕೇ ಬೇಕು. ಈ ನಡುವೆ ಡಿ.ಕೆ. ಶಿವಕುಮಾರ್ ನವೆಂಬರ್ ಹೊತ್ತಿಗೆ ಮುಖ್ಯಮಂತ್ರಿ ಹುದ್ದೆಗೇರುವ ತವಕದಲ್ಲಿದ್ದರೆ, ಖರ್ಗೆ ಅವರಿಗೆ ತಾವು ಎಐಸಿಸಿ ಅಧ್ಯಕ್ಷರಾಗಿರುವಾಗ ಕರ್ನಾಟಕದಲ್ಲಿರುವ ಕಾಂಗ್ರೆಸ್ ಕೋಟೆ ಮಗುಚಿ ಬೀಳಬಾರದು ಎಂಬ ಪೊಸೆಸಿವ್‌ನೆಸ್ ಇದ್ದೇ ಇದೆ! ಅಷ್ಟೇ ಅಲ್ಲ, ಪರಿಸ್ಥಿತಿ ಬಿಗಡಾಯಿಸುವ ಲಕ್ಷಣ ಕಂಡರೆ ತಾವೇ ಸಿಎಂ ಆಗಿ ಕುಳಿತುಕೊಳ್ಳುವ ಮನಸ್ಸೂ ಖರ್ಗೆ ಅವರಿಗಿದೆ!

ಹೀಗಾಗಿ ಸಿದ್ಧರಾಮಯ್ಯ ಇಡುವ ಪ್ರತಿ ಹೆಜ್ಜೆಗಳ ಮೇಲೆ ಡಿಕೆಶಿ ಮತ್ತು ಖರ್ಗೆ ಸಾಹೇಬ್ರು ಹದ್ದುಗಣ್ಣಿಟ್ಟಿದ್ದಾರೆ.! ಹಾಗೆಯೇ ಈ ಹೆಜ್ಜೆಗಳಲ್ಲಿ ಸ್ವಲ್ಪ ವ್ಯತ್ಯಾಸ ಕಂಡರೂ ಡಿಕೆಶಿ ನೇರವಾಗಿ ದಿಲ್ಲಿಗೆ ದೂರು ಒಯ್ಯುತ್ತಾರೆ. ಖರ್ಗೆ ಇದಕ್ಕೆ ಮದ್ದು ಕೊಡಲು ಮುಂದಾಗುತ್ತಾರೆ. ಈ ಹಿಂದೆ ಸಿದ್ದು ಆಪ್ತರು ನಡೆಸಲು ಉದ್ದೇಶಿಸಿದ್ದ ದಲಿತ ಸಮಾವೇಶಕ್ಕೆ ಬ್ರೇಕ್ ಬಿದ್ದಿದ್ದರಿಂದ ಹಿಡಿದು ಸಿದ್ದರಾಮಯ್ಯ ಅವರ ಮಹತ್ವಾಕಾಂಕ್ಷೆಯ ಜಾತಿಗಣತಿಗೆ ಬ್ರೇಕ್ ಬೀಳುವ ತನಕ ಹಲವು ಎಪಿಸೋಡುಗಳ ಹಿಂದೆ ನಡೆದಿದ್ದು ಇದೇ ಕತೆ ಮತ್ತು ವ್ಯಥೆ! ಆದರೆ ಇತ್ತೀಚಿನ ತನಕ ಇದೆಲ್ಲವನ್ನೂ ಸಹಿಸಿಕೊಂಡಿದ್ದ ಸಿದ್ಧರಾಮಯ್ಯ ಮೊನ್ನೆ ತಾವು ಕಳುಹಿಸಿದ್ದ ಎಮ್ಮೆಲ್ಸಿ ಪಟ್ಟಿಗೆ ಬ್ರೇಕ್ ಬಿದ್ದಾಗ ಮಾತ್ರ ಕುದ್ದು ಹೋಗಿದ್ದರು. ಅವರು ವಿಧಾನಪರಿಷತ್ತಿನ ನಾಲ್ಕು ನಾಮನಿರ್ದೇಶಿತ ಸ್ಥಾನಗಳಿಗೆ ಡಿ.ಜಿ. ಸಾಗರ್, ದಿನೇಶ್ ಅಮಿನ್ ಮಟ್ಟು, ರಮೇಶ್ ಬಾಬು ಮತ್ತು ಆರತಿಕೃಷ್ಣ ಅವರ ಹೆಸರುಗಳನ್ನು ಅಂತಿಮಗೊಳಿಸಿದ್ದರಲ್ಲ? ಈ ಹೆಸರುಗಳಿದ್ದ ಪಟ್ಟಿಯನ್ನು ದಿಲ್ಲಿಗೆ ಕಳುಹಿಸಿ ಒಪ್ಪಿಗೆ ನೀಡುವಂತೆ ಅವರು ವರಿಷ್ಟರನ್ನು ಕೋರಿದ್ದರು.

ಕುತೂಹಲದ ಸಂಗತಿ ಎಂದರೆ ಈ ಹೆಸರುಗಳನ್ನು ಪರಿಶೀಲಿಸಿದ ಕಾಂಗ್ರೆಸ್ ಹೈಕಮಾಂಡ್ ಮೊದಲಿಗೆ ಯಾವ ತಕರಾರೂ ಮಾಡದೆ ಒಪ್ಪಿಗೆ ಸೂಚಿಸಿತ್ತು. ಸ್ವತ: ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರೇ ಸಹಿ ಹಾಕಿದ ಒಪ್ಪಿಗೆ ಪತ್ರವೂ ಸಿದ್ದು ಕೈಗೆ ತಲುಪಿತ್ತು. ಯಾವಾಗ ಪತ್ರ ತಮ್ಮ ಕೈ ಸೇರಿತೋ? ಸಿಎಂ ಸಿದ್ಧರಾಮಯ್ಯ ನವರು ಆ ಹೆಸರುಗಳನ್ನು ಅನುಮೋದಿಸುವಂತೆ ರಾಜ್ಯಪಾಲರಿಗೆ ಶಿಫಾರಸು ಮಾಡಿದ್ದರು. ಆದರೆ ರಾಜ್ಯಪಾಲರಿಗೆ ಪಟ್ಟಿ ರವಾನೆಯಾದ ಕೆಲವೇ ನಿಮಿಷಗಳಲ್ಲಿ ದಿಲ್ಲಿಯಿಂದ ಫೋನು ಮಾಡಿರುವ ರಣದೀಪ್ ಸಿಂಗ್ ಹಾಗೂ ಸುರ್ಜೇವಾಲರು – 'ಎಮ್ಮೆಲ್ಸಿಗಳ ಪಟ್ಟಿಯನ್ನು ತಡ್ಹೊಡಿಯಿರಿ.ಯಾಕೆಂದರೆ ಎರಡು ಹೆಸರುಗಳ ಬಗ್ಗೆ ಇನ್ನೂ ಚರ್ಚಿಸುವುದಿದೆ' ಅಂತ ಮೆಸೇಜು ಕೊಟ್ಟಿದ್ದರಂತೆ! ಯಾವಾಗ ಅವರು ಇಂಥ ಮೆಸೇಜು ಕೊಟ್ಟರೋ? ಆಗ ಸಿದ್ಧರಾಮಯ್ಯ ಅವರ ಮೈ ಉರಿದು ಹೋಗಿದೆ. ತಕ್ಷಣ ದಿಲ್ಲಿ ವರಿಷ್ಟರಿಗೆ ಕರೆ ಮಾಡಿ, 'ಅಲ್ರೀ, ನಾಲ್ಕು ಹೆಸರುಗಳಿದ್ದ ಪಟ್ಟಿಯನ್ನು ನಾನು ನಿಮಗೆ ಕಳಿಸಿಕೊಟ್ಟಿದ್ದಾಯಿತು.ಅದಕ್ಕೆ ಒಪ್ಪಿಗೆ ಸೂಚಿಸಿ ಸ್ವತ: ಎಐಸಿಸಿ ಅಧ್ಯಕ್ಷ ಖರ್ಗೆ ಅವರೇ ನನಗೆ ಪತ್ರ ಕಳಿಸಿದ್ದಾಯಿತು. ಈಗ ಪಟ್ಟಿ ರಾಜ್ಯಪಾಲರ ಒಪ್ಪಿಗೆಗೆ ಹೋಗಿರುವಾಗ್ ಇದೇನು ನಿಮ್ಮ ತಕರಾರು?' ಅಂತ ಸಿದ್ಧರಾಮಯ್ಯ ಗುಡುಗಿದ್ದಾರೆ.

ಅವತ್ತು ಸಿದ್ಧರಾಮಯ್ಯ ಅವರ ಅಸಮಾಧಾನವನ್ನು ಅರ್ಥ ಮಾಡಿಕೊಂಡ ಸುರ್ಜೇವಾಲ ತಕ್ಷಣ ನಡೆದ ಕಿತಾಪತಿ ಬಗ್ಗೆ ವಿವರಿಸದೆ, 'ಇದು ಮೇಡಂ ಸೂಚನೆ... ನಿಮಗೆ ತಿಳಿಸಿದ್ದೇನೆ. ಇನ್ನೂ ಬೇಕೆಂದರೆ ನೀವು ದಿಲ್ಲಿಗೆ





ಬಂದು ಮಾತನಾಡಬಹುದು' ಎಂದದು ತೇಪೆ ಹಾಕಿದ್ದರು! ಇದಾದ ಕೂಡಲೇ ದಿಲ್ಲಿಗೆ ತೆರಳಿದ ಸಿದ್ಧರಾಮಯ್ಯ ಅವರು ಮಲ್ಲಿಕಾರ್ಜುನ ಖರ್ಗೆ,ಸುರ್ಜೇವಾಲ ಮತ್ತು ಕೆ.ಸಿ. ವೇಣುಗೋಪಾಲ್ ಅವರ ಮುಂದೆ ನೇರವಾಗಿಯೇ ತಮ್ಮ ಆಕ್ರೋಶ ಹೊರಹಾಕಿದ್ದರು.

'ನೋಡ್ರೀ... ನಾನು ಡಿ.ಜಿ. ಸಾಗರ್, ದಿನೇಶ್ ಅಮಿನ್ ಮಟ್ಟು ಮತ್ತು ರಮೇಶ್ ಬಾಬು ಅವರ ಹೆಸರುಗಳನ್ನು ಅಂತಿಮಗೊಳಿಸುವಾಗ ಅವರನ್ನು ಕರೆಸಿ ಮಾತನಾಡಿದ್ದೇನೆ. ಎಮ್ಮೆಲ್ಸಿಗಳಾಗಲು ರೆಡಿ ಇರಿ ಅಂತ ಹೇಳಿ

☞ 12

# ರೀಲ್ಸ್ ರಾಣಿ ವನಜಾಕ್ಷಿ ಕಿಲ್ಸ್!

# ಸಹಜೀವನ ನಡೆಸುತ್ತಿದ್ದವನೇ ಸಜೀವ ದಹನ ಮಾಡಿದನಲ್ಲ!

**25ರ ವಿಧವೆ 'ರೀಲ್ಸ್ ರಾಣಿ' ವನಜಾಕ್ಷಿ 52ರ ವಿಠಲ್‌ನ ಜೊತೆ ಸಹಜೀವನ ನಡೆಸುತ್ತಾ ಇರುವಾಗ, ಮರಿಯಪ್ಪ ಎಂಬ ಕಾಮುಕ ವನಜಾಕ್ಷಿಯನ್ನು ಲಪಟಾಯಿಸಿಕೊಂಡು ಇಬ್ಬರ ಮಧ್ಯೆ 'ಮುಸುಕಿನ ಗುದ್ದಾಟ' ತಂದಿಟ್ಟ! ಇದರ ಪರಿಣಾಮವೇ ಪ್ರೇಮ ವಂಚಿತ ವಿಠ್ಠಲ ವನಜಾಕ್ಷಿಯನ್ನು ನಡುಬೀದಿಯಲ್ಲಿ ಅಟ್ಟಾಡಿಸಿಕೊಂಡು ಪೆಟ್ರೋಲ್ ಎರಚಿ ಸುಟ್ಟದ್ದು!! ಸದ್ಯ ; ಹುಳಿಮಾವು ಪೊಲೀಸ್ ಇನ್ಸ್‌ಪೆಕ್ಟರ್ ಕುಮಾರಸ್ವಾಮಿ ಅವರು ಆರೋಪಿ ವಿಠಲ್‌ನನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ!!!**



✍ ಹೆಚ್.ಕೆ. ಮಹದೇವ್


ಇದೊಂದು ದಾರುಣ ಘಟನೆ ಬನ್ನೇರುಘಟ್ಟ ರಸ್ತೆಯ ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟಿಸಿದೆ. ಗೊಟ್ಟಿಗೆರೆ ಸಮೀಪದ ಕೆಂಭತ್ತಹಳ್ಳಿಯ ವಿಧವೆ ವನಜಾಕ್ಷಿ (25) ತನ್ನೊಂದಿಗೆ ಸಹಜೀವನ ನಡೆಸುತ್ತಿದ್ದ 'ನಲ್ಲ'ನಿಂದಲೇ ಸಜೀವ ದಹನವಾಗಿ ಉಸಿರು ಚೆಲ್ಲಿದ್ದಾಳೆ! ವನಜಾಕ್ಷಿಗೆ ಈಗಿನ್ನೂ 25ರ ಹರೆಯ. ಕೆಂಭತ್ತಹಳ್ಳಿಯವಳಾದ ಅವಳನ್ನು ಮಧು ಎಂಬಾತ ಮದುವೆಯಾಗಿದ್ದ. ವನಜಿ ಅವನನ್ನು ಬಿಟ್ಟು ಮೂರು ವರ್ಷ ಆಗಿತ್ತು. ಪಾಪಿ ಗಂಡನಿಗೆ ಇತ್ತೀಚೆಗೆ ಟಿ.ಬಿ. ಅಟ್ಯಾಕ್ ಆಗಿ ತೀರಿಕೊಂಡಿದ್ದ. ಇವರಿಗೆ 9 ವರ್ಷದ ಒಬ್ಬ ಮಗನಿದ್ದಾನೆ. ವನಜಿಗೆ 'ರೀಲ್ಸ್' ಹುಚ್ಚು ಅತಿಯಾಗಿತ್ತು. ಹಳೆಯ/ಹೊಸ ಇಂಪಾದ ಹಾಡುಗಳಿಗೆ ರೀಲ್ಸ್ ಮಾಡುತ್ತಾ ಹಾಯಾಗಿದ್ದಳು. ಇಂಥವಳಿಗೆ ಗಂಟು ಬಿದ್ದವನು ಮಳೆನಲ್ಲಸಂದ್ರದ ಕ್ಯಾಬ್ ಡ್ರೈವರ್ ವಿಠ್ಠಲ್!

### ಇಬ್ಬರು ಹೆಂಡಿರ ಪಾಪಿ ಗಂಡ!!

ಅವನಿಗೆ ಇಬ್ಬರು ಹೆಂಡಿರಿದ್ದು ಮೊದಲ ಪತ್ನಿ ತೀರಿಕೊಂಡ ಬಳಿಕ ಎರಡನೇ ವಿವಾಹವಾಗಿದ್ದ. ಅದೇಕೋ ಏನೋ, ಈ ಎರಡನೇ ಹೆಂಡತಿಯೂ ವಿಠ್ಠಲನಿಗೆ ಕೈಕೊಟ್ಟು ಯಾವನೊಂದಿಗೆ 'ಠಾ' ಅಂದಿದ್ದಳು! ಒಬ್ಬಂಟಿಯಾಗಿ ನರಳುತ್ತಿದ್ದ ವಿಠ್ಠಲನಿಗೆ ರೀಲ್ಸ್ ರಾಣಿ ವನಜಾಕ್ಷಿ ಸಿಂಕ್ ಆಗಿದ್ದು, ಇಬ್ಬರೂ ಒಂದೊಳ್ಳೆ ಗೂಡು ಸೇರಿಕೊಂಡು ಸಂತಸವಾಗಿ 'ಸಹ ಜೀವನ' (ಲಿವಿಂಗ್ ಟುಗೆದರ್) ನಡೆಸುತ್ತಿದ್ದರು. 4-5



ಡಿಸಿಪಿ ಎಂ. ನಾರಾಯಣ



ಇನ್ಸ್‌ಪೆಕ್ಟರ್ ಕುಮಾರಸ್ವಾಮಿ

ವರ್ಷ ಯಾವ ತೊಂದರೆಯೂ ಇರಲಿಲ್ಲ. ಕ್ಯಾಬ್ ಡ್ರೈವರ್ ವಿಠ್ಠಲ 52 ತುಂಬಿದ್ದರೂ 27ರ ವನಜಾಕ್ಷಿಯನ್ನು ಚೆನ್ನಾಗಿಯೇ ಮೆಂಟೈನ್ ಮಾಡಿಕೊಂಡಿದ್ದ. ಆದರೆ ಅವನ ಕರ್ಮ ಏನಿತ್ತೋ... ಮರಿಯಪ್ಪ ಎಂಬ ಕಾಮುಕ ಅವರಿಬ್ಬರ ಮಧ್ಯೆ ತೂರಿಕೊಂಡು ಅವನ ಆಶಿಕಿಯನ್ನು ತಾನು ಕಸಿದುಕೊಂಡಿದ್ದ!

### ಸಮಂದೂರು ಮನ್ಮಥ!

ಈ ಮರಿಯಪ್ಪ ಬೇರಾರೂ ಅಲ್ಲ. ವನಜಾಕ್ಷಿಯ ಹತ್ತಿರದ ಸಂಬಂಧಿ. ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ನಿಪುಣನಾಗಿರುವ ಮರಿಯಪ್ಪ, ಆನೇಕಲ್ ತಾಲ್ಲೂಕಿನ ಭೂ ಪ್ರದೇಶಗಳ ಕಡತ ಎತ್ತಿ, ನಕಲಿ ದಾಖಲೆ ಸೃಷ್ಟಿಸುವುದರಲ್ಲಿ ಎತ್ತಿದ ಕೈ ಅಂತ ಆ ಭಾಗದ ಜನ ಹೇಳುತ್ತಾರೆ! ತಾನು 'ಕರವೇ' (ಶಿವರಾಮೇಗೌಡ ಬಣ) ಮುಖಂಡ ಎಂದು ಹೇಳಿಕೊಂಡು ತಿರುಗುತ್ತಾನೆ. ರಿಯಲ್ ಎಸ್ಟೇಟ್‌ನಲ್ಲಿ ದೋಖಾ ಮಾಡ್ತಾ ಲಕ್ಷಾಂತರ ಹಣ ಸಂಪಾದಿಸಿರೋ ಮರಿಯಪ್ಪನಿಗೆ ಊರ ತುಂಬಾ ಹೆಂಡ್ತೀರು-ಮಿಂಡ್ತೀರು ಎಂದು ಜನ ಹೇಳುತ್ತಾರೆ! ಹೀಗಾಗಿಯೇ, ಇವನನ್ನು 'ಮನ್ಮಥ' ಎಂಬ ಅಡ್ಡ ಹೆಸರಿನಿಂದ ಕರೆಯುತ್ತಾರೆ. ಒಂದು ಮೂಲದ ಪ್ರಕಾರ; ಸಮಂದೂರಿನ ಈ ಮರಿಯಪ್ಪನಿಗೆ ಎಂಟನೇ ಉಪ-ಪತ್ನಿ ಈ ವನಜಾಕ್ಷಿ! ಸಿನಿಮಾ ತಾರೆಯರ ತವರು ಗಾಂಧಿ ನಗರದಲ್ಲೂ ಒಬ್ಬಳನ್ನು ರೂಂ ಮಾಡಿ ಇರಿಸಿದ್ದಾನಂತೆ ಈ ರತಿ ರಸಿಕ ಮರಿಯಪ್ಪ!



ಮರಿಯಪ್ಪ

50ರ ಆಸುಪಾಸಿನ ಈ ವ್ಯಕ್ತಿ ವನಜಾಕ್ಷಿಯನ್ನು ಅಟಕಾಯಿಸಿಕೊಂಡು ಹಣದಾಸೆ ತೋರಿಸಿ ಅಡ್ಜೆಸ್ಟ್ ಮಾಡಿಕೊಂಡಿದ್ದಾನೆ! (ವನಜಾಕ್ಷಿಯ ಸೋದರಿಯರಾದ ರಾಜೇಶ್ವರಿ, ಆಶಾ ಹಣದಾಸೆಗಾಗಿ ಸ್ವಂತ ತಂಗಿಯನ್ನು ಮರಿಯಪ್ಪನಿಗೆ... ಎಂದು ಅಲ್ಲಿನ ಜನ ಶಪಿಸುತ್ತಾರೆ!) ಇವನು ಸಿಕ್ಕ ಬಳಿಕ ವನಜಿ ವಿಠ್ಠಲನಿಗೆ ಕೈ ಕೊಟ್ಟಿದ್ದಾಳೆ! ಇದರಿಂದ ವಿಠ್ಠಲನಿಗೆ ಹುಚ್ಚೇ ಹಿಡಿದಿರಬೇಕು. ಮೊದಲೇ ಸ್ವಂತ ಪತ್ನಿಯಿಂದಲೇ ವಂಚಿಸಲ್ಪಟ್ಟವನು ಸುಮ್ಮನಿರುತ್ತಾನಾ? ವಂಚಕಿ ವನಜಾಕ್ಷಿಗೆ ಮತ್ತು ಮರಿಯಪ್ಪನಿಗೆ ಒಂದು ಗತಿ ಕಾಣಿಸಲು ನಿರ್ಧರಿಸಿ ಬೆನ್ನತ್ತಿದ್ದಾನೆ. ಮೊನ್ನೆ ಆಕೆ ಮರಿಯಪ್ಪನೊಡನೆ ಅವನ ಸ್ಯಾಂಟ್ರೊ ಕಾರ್ (ಕೆಎ-05 ಎಂಬಿ-1585)ನಲ್ಲಿ ಬಸವನಪುರದ ಕಡೆ ಹೊರಟಿದ್ದಾಗ, ಎಲೆಕ್ಟ್ರಾನಿಕ್ ಸಿಟಿ-ಹೊಮ್ಮದೇವನಹಳ್ಳಿ ಮುಖ್ಯರಸ್ತೆಯಲ್ಲೇ ಅವರ ಕಾರ್‌ಅನ್ನು ನೋಡಿ, ತನ್ನ ಕಾರ್‌ನಲ್ಲಿ ಹಿಂಬಾಲಿಸಿದ್ದಾನೆ. ಒಂದು ಸಿಗ್ನಲ್‌ನಲ್ಲಿ ಬಿಎಂಟಿಸಿ ಬಸ್ ಹಿಂದೆ ನಿಂತ ಕಾರ್‌ನ ಬಳಿ ಓಡಿದವನೇ, ಮರಿಯಪ್ಪ-ವನಜಾಕ್ಷಿ ಇಬ್ಬರನ್ನೂ ಸಜೀವವಾಗಿ ಸುಟ್ಟು ಹಾಕುವ ಇರಾದೆಯಿಂದ, ಆ ಕಾರ್‌ನ ಮೇಲೆ ಪೆಟ್ರೋಲ್ ಎರಚಿದ್ದಾನೆ!

### ಅವನು ಎಸ್ಕೇಪ್, ಇವಳು ಸಿಕ್ಕಿಬಿದ್ಲು!

ವಿಠ್ಠಲನ ರೌದ್ರಾವತಾರ ಕಂಡು, ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡ ಕಿಲಾಡಿ ಮನ್ಮಥ ಮರಿಯಪ್ಪ ಕಾರ್‌ನಿಂದ ಇಳಿದು ಎತ್ತಲೋ ಓಡಿಬಿಟ್ಟಿದ್ದಾನೆ. ವನಜಿಯೂ ಕೂಡ ಬಾಗಿಲು ತೆರೆದು ಹೊರಗೆ ಓಡಿದ್ದಾಳೆ. ಆಕೆಯನ್ನು ಹಿಂಬಾಲಿಸಿದ ವಿಠಲ ಅವಳು ಓಡಲಾರದೆ ಧೊಪ್ಪನೆ ನೆಲಕ್ಕೆ ಬಿದ್ದಾಗ, ಅವಳ ಅಂದದ ಮುಖ ಹಾಗೂ ಮೈಮೇಲೆ ಪೆಟ್ರೋಲ್ ಸುರಿದು ಲೈಟರ್‌ನಿಂದ ಬೆಂಕಿ ಹಚ್ಚಿದ್ದಾನೆ! ವನಜಾಕ್ಷಿ ಕಿರುಚಾಡ್ತಾ ಬಿದ್ದಿರುವಾಗ ಇವನಿಗೂ ಬೆಂಕಿ ತಾಕಿದ್ದು, ಶರ್ಟ್ ಅನ್ನು ಕಿತ್ತೆಸೆದು ಪ್ರಾಣಾಪಾಯದಿಂದ ಪಾರಾಗಿ ತನ್ನ ಕಾರ್ ಎತ್ತಿಕೊಂಡು ಅಲ್ಲಿಂದ ಗಾಯಬ್ ಆಗಿದ್ದಾನೆ.

## ಸಮಂದೂರು 'ಮನ್ಮಥ' ಮರಿಯಪ್ಪನಿಗೆ ಅದೆಷ್ಟು ಹೆಂಡಿರು?!

ನಂತರ ತನ್ನೊಡನೆ ಸಹಜೀವನ ನಡೆಸಿದವನಿಂದಲೇ ಸಜೀವ ದಹನವಾಗಿ ಬಿದ್ದಿದ್ದ ವನಜಾಕ್ಷಿಯನ್ನು ಮರಿಯಪ್ಪನೇ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಿ ಅಡ್ಮಿಟ್ ಮಾಡಿದ್ದ. ನಂತರ ಅಲ್ಲಿಂದ ಸೆಂಟ್ ಜಾನ್ಸ್ ಆಸ್ಪತ್ರೆಗೆ ಸೇರಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ವನಜಾಕ್ಷಿ ನಿನ್ನೆ 01-09-2025ರಂದು ತೀರಿಕೊಂಡಳು! ರೀಲ್ಸ್ ರಾಣಿ ವನಜಾಕ್ಷಿಯನ್ನು ಅವಳ ತವರು ಕುಟುಂಬ ದೂರವೇ ಇಟ್ಟಿತ್ತು. ಸತ್ತ ಮೇಲೆ ಇನ್ನೇನಿದೆ? ಬಂಧು ಬಳಗವೆಲ್ಲಾ ಸೇರಿಕೊಂಡು ಅಂತಿಮ ಕಾರ್ಯ ನೆರವೇರಿಸಿದ್ದಾರೆ. ಈಗ ಅಪ್ಪ ಅಮ್ಮ ಇಬ್ಬರೂ ಇಲ್ಲದ 9 ವರ್ಷದ ಆ ಕಂದನನ್ನು ತವರು ಮನೆಯವರೇ ಸಲಹಬೇಕಿದೆ.



ಆರೋಪಿ ಕ್ಯಾಬ್ ಡ್ರೈವರ್ ವಿಠಲ

ವನಜಿಯ ಸಖ ಸಮಂದೂರು ಮರಿಯಪ್ಪನೇ ದೂರು ದಾಖಲಿಸಿದ್ದು, ತಾನು ವನಜಾಕ್ಷಿಯ ಸಂಬಂಧಿಕ, ಅವರ ಕುಟುಂಬಕ್ಕೆ ಸಹಾಯ ಮಾಡಲು ಕಾರಿನಲ್ಲಿ ಓಡಾಡುತ್ತಿದ್ದೆ. ಅವನ್ಯಾರೋ ಬಂದು ಹೀಗೆ ಮಾಡಿಬಿಟ್ಟ... ಅಂತೆಲ್ಲಾ ದೂರಿನಲ್ಲಿ ಕಾರಿಕೊಂಡಿದ್ದಾನೆ. ಗಮನೀಯ ಅಂಶವೇನೆಂದರೆ ತನ್ನ ಹೆಸರು ಮುನಿಯಪ್ಪ ಎಂದು ಹೇಳಿಕೊಂಡಿದ್ದಾನೆ. ಈತ ಆನೇಕಲ್ ತಾಲ್ಲೂಕಿನಲ್ಲಿ ಮರಿಯಪ್ಪ(ಮನ್ಮಥ) ಎಂದೇ ಫೇಮಸ್! ಸದ್ಯ, ಮರಿಯಪ್ಪ ಅಲಿಯಾಸ್ ಮುನಿಯಪ್ಪನ ದೂರನ್ನು ಆಧರಿಸಿ ಹುಳಿಮಾವು ಪೊಲೀಸರು, ಕ್ಯಾಬ್ ಡ್ರೈವರ್ ವಿಠಲ್‌ನನ್ನು ಅರೆಸ್ಟ್ ಮಾಡಿ ವಿಚಾರಣೆ ನಡೆಸುತ್ತಿದ್ದಾರೆ. ಈ ವಿಠಲ ಜೈಲಿನಿಂದ ಹೊರ ಬಂದ ಬಳಿಕ ಮರಿಯಪ್ಪನ ಮುಗಿಸದೇ ಬಿಡಲಾರ ಎಂದು ಆನೇಕಲ್ ಜನ ಮಾತನಾಡಿಕೊಳ್ಳುತ್ತಿದ್ದಾರೆ. ಈ ಮರಿಯಪ್ಪನು ಹಣವಂತನಾಗಿರುವುದರಿಂದ ವಿಠಲನಿಗೆ ಒಂದು ಗತಿ ಕಾಣಿಸುತ್ತಾನೆ ಎಂದೂ ಮಾತನಾಡಿಕೊಳ್ಳುತ್ತಿದ್ದಾರೆ. ಯಾವುದಕ್ಕೂ ಪೊಲೀಸರು ಇವರಿಬ್ಬರ ಮೇಲೆ ಒಂದು ಕಣ್ಣಿಡಬೇಕಿದೆ. ಅಂದಹಾಗೆ ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ಡಿಸಿಪಿ ಎಂ. ನಾರಾಯಣ ಅವರ ಮಾರ್ಗ ದರ್ಶನದಲ್ಲಿ ಎಸಿಪಿ ಸತೀಶ್ ಅವರ ನೇತೃತ್ವದಲ್ಲಿ ಪಿಐ ಕುಮಾರಸ್ವಾಮಿ ಅವರು ಈ ಪ್ರಕರಣದ ತನಿಖೆ ಮುಂದುವರೆಸಿರುತ್ತಾರೆ. ☯



ಮರಿಯಪ್ಪನ ಕಾರ್ ಹಿಂಬಾಲಿಸಿರುವ ವಿಠಲನ ಕಾರು



ಪೆಟ್ರೋಲ್‌ನಿಂದ ಸುಟ್ಟು ಹೋಗಿರುವ ರೀಲ್ಸ್ ವನಜಾಕ್ಷಿ

# ಚನ್ನಪಟ್ಟಣ ಎಂ.ಕೆ. ದೊಡ್ಡಿ ಪೊಲೀಸ್ ಠಾಣೆಯಲ್ಲಿ ಲಾಕಪ್ ಡೆತ್?!

**ಬೆಂ. ದಕ್ಷಿಣ**

✍ ಶಾಂತರಾಜು ಜಿ. ಕಲ್ಲಹಳ್ಳಿ



ರಮೇಶ್ ಬದುಕಿದ್ದಾಗ

ಬೆಂಗಳೂರು ದಕ್ಷಿಣ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಎಂ.ಕೆ. ದೊಡ್ಡಿ ಪೊಲೀಸ್ ಠಾಣೆಯಲ್ಲಿ ಚನ್ನಪಟ್ಟಣದ ಬೊಮ್ಮನಾಯಕನಹಳ್ಳಿ ಗ್ರಾಮದ ದೇವಸ್ಥಾನದ ಕಳ್ಳತನ ಪ್ರಕರಣದಲ್ಲಿ ಮಂಡ್ಯ ಜಿಲ್ಲೆಯ ಮದ್ದೂರಿನ ದುಂಡನಹಳ್ಳಿ ಗ್ರಾಮದ ನಿವಾಸಿಗಳಾದ ಸುಮಾರು 59 ವರ್ಷದ ರಮೇಶ್, ಈತನ ಮಗ ಮಂಜ ಮತ್ತು ಮತ್ತೋರ್ವನನ್ನು ಬಂಧಿಸಲಾಗಿತ್ತು . ಈ ಪೊಲೀಸ್ ಠಾಣೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ರಮೇಶ್‌ನ ಶವ ಪತ್ತೆಯಾಗಿದ್ದು, ಆತನೇ ನೇಣಿಗೆ ಶರಣಾದನಾ ಅಥವಾ ಪೊಲೀಸರ ಹೊಡೆತಕ್ಕೆ ಬಲಿಯಾದನಾ ಎನ್ನುವ ಅನುಮಾನ ಈ ಪ್ರಕರಣದಲ್ಲಿ ಮೂಡಿದೆ. ಮೃತ ಆಕ್ರೋಶ ರಮೇಶ್ ಕುಟುಂಬಸ್ಥರು ಇದು ಲಾಕಪ್ ಡೆತ್ ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.



ಸಾರ್ವಜನಿಕ ಆಸ್ಪತ್ರೆಯಲ್ಲಿ ರಮೇಶ್ ಶವ

**ಏನಿದು ಪ್ರಕರಣ...?**

ಚನ್ನಪಟ್ಟಣದ ದೇವಾಲಯವೊಂದರಲ್ಲಿ ಕಳ್ಳತನ ಪ್ರಕರಣದ ಸಂಬಂಧ, ಮದ್ದೂರು ತಾಲ್ಲೂಕಿನ ಕೆಸ್ತೂರು ಬಳಿಯ ದುಂಡನಹಳ್ಳಿ ಗ್ರಾಮದ ಆರೋಪಿಗಳಾದ ರಮೇಶ್ ಮತ್ತು ಆತನ ಮಗ ಮಂಜು, ಮತ್ತೊಬ್ಬ ವೆಂಕಟೇಶ್ ಅಲಿಯಾಸ್ ಹನಿ ಎಂಬುವರನ್ನು ಎಂ.ಕೆ. ದೊಡ್ಡಿ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ವಿಚಾರಣೆಗಾಗಿ ಪೊಲೀಸ್ ಠಾಣೆಗೆ ಕರೆತಂದಿದ್ದರೆಂದು ತಿಳಿದು ಬಂದಿದೆ. ಅಂದು ಆಗಸ್ಟ್ 20 ಬುಧವಾರ ಮುಂಜಾನೆ ಆರೋಪಿ ರಮೇಶ್ ಶೌಚಾಲಯಕ್ಕೆ ಹೋಗಿದ್ದ ಸಂದರ್ಭದಲ್ಲಿ ಆತ ಶೌಚಾಲಯದ ಒಳಗೆ ನೇಣು ಹಾಕಿಕೊಂಡು ನರಳಾಡುತ್ತಿದ್ದ ಶಬ್ದವನ್ನು ಕೇಳಿ ಕರ್ತವ್ಯದಲ್ಲಿದ್ದ ಪೊಲೀಸರು ಆತನ ಜೀವ ಉಳಿಸಲು ತಕ್ಷಣ ಚನ್ನಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಲು ಮುಂದಾದಾಗ ಆರೋಪಿ ರಮೇಶ್ ಕೊನೆಯುಸಿರೆಳೆದಿರುವುದು ಕಂಡು ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಚನ್ನಪಟ್ಟಣ ನ್ಯಾಯಾಲಯದ ಹಿರಿಯ ಸಿವಿಲ್ ನ್ಯಾಯಾಧೀಶರಾದ ವೆಂಕಟೇಶಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸಗೌಡ, ಡಿವೈಎಸ್ಪಿ ಗಿರಿರವರು ನಗರದ ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ನ್ಯಾಯಾಲಯದ ಹಿರಿಯ ಸಿವಿಲ್ ನ್ಯಾಯಾಧೀಶರಾದ ವೆಂಕಟೇಶಪ್ಪ ಅವರ ಸಮ್ಮುಖದಲ್ಲಿ ಸುಮಾರು 5 ಗಂಟೆಗಳ ಕಾಲ ವೈದ್ಯರು ಶವಪರೀಕ್ಷೆ ನಡೆಸಿದರು. ಎಂ.ಕೆ. ದೊಡ್ಡಿ ಪೊಲೀಸರು ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಶವವನ್ನು ವಾರಸುದಾರರಿಗೆ ಹಸ್ತಾಂತರಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

**ಈ ಪ್ರಕರಣವನ್ನು ಸಿಐಡಿ ತನಿಖೆಗೆ ನೀಡಿದೆ : ಎಸ್ಪಿ ಶ್ರೀನಿವಾಸಗೌಡ**

ಬೆಂಗಳೂರು ದಕ್ಷಿಣ ಜಿಲ್ಲೆ (ಈ ಹಿಂದೆ ರಾಮನಗರ)ಯ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸಗೌಡರವರು ಎಂ.ಕೆ. ದೊಡ್ಡಿ ಪೊಲೀಸ್ ಠಾಣೆ ಮತ್ತು ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರ ಚನ್ನಪಟ್ಟಣ ಡಿವೈಎಸ್ಪಿ ಕಛೇರಿಯಲ್ಲಿ ಸುದ್ದಿಗಾರರೊಂದಿಗೆ ಈ ಪ್ರಕರಣ ಕುರಿತು ಮಾತನಾಡಿ, ಮೃತ ವ್ಯಕ್ತಿ ರಮೇಶ್ ಮತ್ತು ಆತನ ಮಗ ಮಂಜು ಹಾಗೂ ಮತ್ತೋರ್ವ ಆರೋಪಿ ವೆಂಕಟೇಶ್ ಅಲಿಯಾಸ್ ಹನಿ ಸೇರಿದಂತೆ ಮೂವರನ್ನು ಕಳ್ಳತನ ಪ್ರಕರಣದ ಸಂಬಂಧ ಬಂಧಿಸಿ, ಆಗಸ್ಟ್ 18ರ ಸೋಮವಾರದಂದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಹೆಚ್ಚಿನ ವಿಚಾರಣೆಗಾಗಿ ಎಂ.ಕೆ. ದೊಡ್ಡಿ ಪೊಲೀಸರು ಈ ಮೂವರು ಆರೋಪಿಗಳನ್ನು ಮೂರು ದಿನ ವಿಚಾರಣೆಗಾಗಿ ವಶಕ್ಕೆ ಪಡೆದಿದ್ದು, ಮತ್ತೆ ಆಗಸ್ಟ್ 20ರ ಬುಧವಾರದಂದು ನ್ಯಾಯಾಲಯಕ್ಕೆ ಹಾಜರುಪಡಿಸುವ ಹಿನ್ನೆಲೆಯಲ್ಲಿ ಆಗಸ್ಟ್ 19ರ ಮಂಗಳವಾರ ರಾತ್ರಿ ಚನ್ನಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರಿಂದ ಆರೋಪಿಗಳ ವೈದ್ಯಕೀಯ ಪರೀಕ್ಷೆ ಮಾಡಿಸಲಾಗಿರುತ್ತದೆ. ಆ ಸಂದರ್ಭದಲ್ಲಿ ಯಾವುದೇ ರೀತಿಯ ಕಾಯಿಲೆ, ಆರೋಗ್ಯ ಸಮಸ್ಯೆ ಇಲ್ಲದೇ ಆರೋಗ್ಯವಾಗಿರುತ್ತಾರೆ ಎಂದು ವೈದ್ಯಾಧಿಕಾರಿಗಳು ಸ್ಪಷ್ಟಪಡಿಸಿರುತ್ತಾರೆ. ಕರ್ತವ್ಯನಿರತ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಎಲ್ಲಾ ರೀತಿಯ ಮುಂಜಾಗ್ರತೆಯನ್ನು ಕೈಗೊಂಡಿದ್ದರೂ ಆಗಸ್ಟ್ 20ರ ಬುಧವಾರದಂದು ಮುಂಜಾನೆ ಆರೋಪಿ ರಮೇಶ್ ಪೊಲೀಸ್ ಠಾಣೆಯ ಸೆಲ್‌ನ ಶೌಚಾಲಯಕ್ಕೆ ಹೋಗಿದ್ದ ಸಂದರ್ಭದಲ್ಲಿ ರಮೇಶ್ ಬಹಳ ಸಮಯವಾದರೂ ಹೊರಗಡೆ ಬಾರದ ಕಾರಣ ಕರ್ತವ್ಯದಲ್ಲಿದ್ದ ಪೊಲೀಸರು ಹೋಗಿ ನೋಡಲಾಗಿ ಆತ ಶೌಚಾಲಯದ ಕಂಬಿಗೆ ನೇಣು ಹಾಕಿಕೊಂಡು ನರಳಾಡುತ್ತಿರುವುದನ್ನು ಕಂಡು, ರಮೇಶ್‌ನ ಜೀವ ಉಳಿಸಲು ಪೊಲೀಸರು ತಕ್ಷಣ ನಗರದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ಪೊಲೀಸರು ತಕ್ಷಣ ನಗರದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಲು ಮುಂದಾದಾಗ ಆತ ಕೊನೆಯುಸಿರೆಳೆದಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸಗೌಡರವರು ಹೇಳಿದ್ದು, ಮತ್ತೆ ಈ ಪ್ರಕರಣ ಸಂಬಂಧ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ಡಿವೈಎಸ್ಪಿ ಶ್ರೀನಿವಾಸ್‌ರವರ ನೇತೃತ್ವದಲ್ಲಿ ತನಿಖೆ ನಡೆಸಲಾಗುವುದು, ಜೊತೆಗೆ ಈ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಿದೆ, ಮುಂದೆ ಜಿಲ್ಲೆಯಲ್ಲಿ ಈ ರೀತಿ ಆಗದಂತೆ ಎಚ್ಚರಿಕೆ ವಹಿಸಲಾಗುವುದು ಎಂದು ತಿಳಿಸಿದ್ದಾರೆ.



ಎಸ್ಪಿ ಎಸ್. ಶ್ರೀನಿವಾಸಗೌಡ



ಎಎಸ್ಪಿ ರಾಮಚಂದ್ರಯ್ಯ



ಸಿಪಿಐ ಪ್ರಕಾಶ್



ಪಿಎಸ್‌ಐ ಸಹನಾ ಪಾಟೀಲ್


**ಮೃತನ ಮಗ ಮಂಜು 8 ಪ್ರಕರಣಗಳಲ್ಲಿ ಆರೋಪಿ!**

ಎಂ.ಕೆ. ದೊಡ್ಡಿ ಪೊಲೀಸ್ ಠಾಣೆಯಲ್ಲಿ ಆತ್ಮಹತ್ಯೆನೋ ಅಥವಾ ಲಾಕಪ್‌ಡೆತ್ ಆಗಿರುವ ರಮೇಶ್ ವಿರುದ್ಧ ಇದೇ ಮೊದಲ ಕಳ್ಳತನದ ಪ್ರಕರಣವಾಗಿದ್ದು, ಈತನ ಮಗ ಆರೋಪಿ ಮಂಜು ಎಂಬುವವನು ಎಂಟು ಪ್ರಕರಣಗಳಲ್ಲಿ ಭಾಗಿಯಾಗಿದ್ದಾನೆ ಎನ್ನಲಾಗಿದೆ, ಅಲ್ಲದೆ ಈತ ಕಳ್ಳತನ ಮಾಡಿದ್ದ ಪದಾರ್ಥಗಳನ್ನು ತಮ್ಮ ತಂದೆ ರಮೇಶ್‌ನ ಮೂಲಕ ಮಾರಾಟ ಮಾಡುತ್ತಿದ್ದನಂತೆ. ಇದೇ ನಿಟ್ಟಿನಲ್ಲಿ ಇವರ ಮನೆಯಲ್ಲಿ ಚಿನ್ನದ ತಾಳಿಗಳು, ದೀಪಾಲೆಕಂಬ, ಸಿಲಿಂಡರ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎನ್ನಲಾಗಿದೆ. ಈ ತಂದೆ ಮಗ ಇಬ್ಬರನ್ನು ಹೆಚ್ಚುವರಿ ವಿಚಾರಣೆಗೆ ಪಡೆದಿದ್ದ ಪೊಲೀಸರು ಮಂಗಳವಾರ ರಾತ್ರಿ ಮಾಹಿತಿ ಪಡೆದ ವೇಳೆ ಮೃತ ರಮೇಶ್ ಊಟದ ನಂತರ ಪೊಲೀಸರಿಗೆ ಮತ್ತೊಂದು ಪ್ರಕರಣದ ಮಾಹಿತಿ ನೀಡುವುದಾಗಿ ತಿಳಿಸಿದ್ದನಂತೆ. ಆದರೆ ಅಪ್ಪ ಮಗನನ್ನು ಠಾಣೆಯಲ್ಲಿ ಒಂದೇ ಸೆಲ್‌ನಲ್ಲಿ ಇಟ್ಟಿದ್ದ ವೇಳೆ ಅಪ್ಪ ಮಗನ ನಡುವೆ ಯಾವುದೋ ವಿಚಾರಕ್ಕೆ ಜಗಳ ನಡೆದಿತ್ತಂತೆ. ರಮೇಶ್ ಸತ್ಯ ಹೇಳದಂತೆ ಮಗ ತಡೆದಿರುವ ಬಗ್ಗೆ ಅನುಮಾನ ವ್ಯಕ್ತವಾಗಿದೆ. ಈ ಬಗ್ಗೆ ಠಾಣೆಯಲ್ಲಿನ ಸಿಸಿಟಿವಿಯಲ್ಲಿ ಸಹ ದಾಖಲಾಗಿದ್ದು, ಜಿಲ್ಲಾ ಎಸ್ಪಿರವರು ಇದರ ದಾಖಲೆ ಪಡೆದಿದ್ದಾರೆ ಎನ್ನಲಾಗಿದೆ. ಈವರೆಗೆ ಪೊಲೀಸ್ ಠಾಣೆ ಮೆಟ್ಟಿಲೇರದ ಮೃತ ರಮೇಶ್ ಈ ಪ್ರಕರಣದಲ್ಲಿ ಜೈಲಿಗೆ ಹೋಗಬೇಕೆಂಬ ಮಾನಸಿಕ ಖಿನ್ನತೆಗೋ ಅಥವಾ ಸತ್ಯ ಹೇಳದಂತೆ ಮಗ ಬೈದಾಡಿ ಮಾತನಾಡಿ ಜಗಳ ಮಾಡಿದ್ದರಿಂದನೋ ಮನನೊಂದು ರಮೇಶ್ ಆತ್ಮಹತ್ಯೆ ಮಾಡಿಕೊಂಡಿದ್ದಾರಾ ಎಂಬ ಅನುಮಾನವಿದ್ದು, ಇದಕ್ಕೆ


☞12




ಇದೇ ಠಾಣೆಯಲ್ಲಿ ಲಾಕಪ್ ಡೆತ್ ಆರೋಪ....



ಡಿವೈಎಸ್ಪಿ ಶ್ರೀಗಿರಿ



ಡಿವೈಎಸ್ಪಿ ಬಿ.ಎನ್. ಶ್ರೀನಿವಾಸ್



ಪೊಲೀಸ್ ಠಾಣೆ ಮುಂದೆ ಬಂದೋಬಸ್ತ್



ಎಎಸ್ಪಿ ರಾಮಚಂದ್ರಯ್ಯ ಭೇಟಿ



ಡಿವೈಎಸ್ಪಿ ಗಿರಿ, ಶ್ರೀನಿವಾಸ್‌ರ ಮುಂದೆ ನ್ಯಾಯ ಕೇಳುತ್ತಿರುವುದು

# ಹುಷಾರ್... ಬ್ಲಾಕ್‌ಮೇಲ್ ಮಾಡೋ ನಕಲಿ ಪತ್ರಕರ್ತರಿದ್ದಾರೆ!

**ಸೋಷಿಯಲ್ ಮೀಡಿಯಾ ಮುನ್ನಲೆಗೆ ಬಂದ ನಂತರ ಅದರಲ್ಲೂ ಯೂಟ್ಯೂಬ್‌ನಲ್ಲಿ ನ್ಯೂಸ್ ಚಾನಲ್ ಗಳನ್ನು ಸುಲಭವಾಗಿ ಸೃಷ್ಟಿ ಮಾಡಲು ಅವಕಾಶವಿರುವುದರಿಂದ ಬಹುತೇಕರು ಚಾನಲ್‌ಗಳನ್ನು ಸೃಷ್ಟಿ ಮಾಡಿಕೊಂಡು ಅದರಲ್ಲಿ ಹಗಲು ರಾತ್ರಿ ಎನ್ನದೆ ಹೊಸ ವಿಚಾರಗಳನ್ನು ಹಾಕುತ್ತಾ ಬದುಕು ಕಟ್ಟಿಕೊಂಡಿದ್ದಾರೆ. ಆದರೆ ಇನ್ನು ಕೆಲವರು ನ್ಯೂಸ್ ಚಾನಲ್‌ಗಳ ಹೆಸರಲ್ಲಿ ಬ್ಲಾಕ್‌ಮೇಲ್ ಮಾಡಿ ಹಣ ಪೀಕುವ ಕೆಲಸಕ್ಕೆ ಮುಂದಾಗುತ್ತಿರುವುದು ಬೇಸರದ ಸಂಗತಿಯಾಗಿದೆ. ಈಗಾಗಲೇ ಇಂತಹ ಬ್ಲಾಕ್ ಮೇಲ್ ಪತ್ರಕರ್ತರಿಂದ ನೈಜ ಕಾರ್ಯನಿರತ ಪತ್ರಕರ್ತರಿಗೆ ಮುಜುಗರ ತರುವಂತಾಗಿದೆ.**


ಹರೀಶ


ಪ್ರತಾಪ್

**ಮೈಸೂರು**
✍ಬಿ.ಎಂ. ಲವಕುಮಾರ್

ಒಂದು ಕಾಲದಲ್ಲಿ ಗಲ್ಲಿಗೊಬ್ಬರು ಟ್ಯಾಬ್ಲಾಯ್ಡ್ ಪತ್ರಿಕೆಯನ್ನು ನಡೆಸುತ್ತಿದ್ದರು. ಅವತ್ತು ಜನಪ್ರಿಯವಾಗಿದ್ದ ಟ್ಯಾಬ್ಲಾಯ್ಡ್ ಪತ್ರಿಕೆಗಳ ಟೈಟಲ್‌ನ್ನೇ ಹೋಲುವಂತೆ ಅಲ್ಪ ಸ್ವಲ್ಪ ಬದಲಾವಣೆ ಮಾಡಿಕೊಂಡು ಅದರ ಹೆಸರಿನಲ್ಲಿ ರೋಲ್‌ಕಾಲ್ ಮಾಡುತ್ತಿದ್ದವರಿಗೇನು ಕೊರತೆಯಿರಲಿಲ್ಲ. ಇಂತಹವರು ಸೃಷ್ಟಿಸಿದ ಅನಾಹುತಗಳಿಗೆ ಲೆಕ್ಕವೇ ಇಲ್ಲ. ಭ್ರಷ್ಟಾಚಾರಿಗಳನ್ನು ಹುಡುಕಿ ಹೆದರಿಸಿ ಅವರಿಂದಲೇ ಹಣ ವಸೂಲಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಕೆಲವರು ಸಿಕ್ಕಿ ಬಿದ್ದು ಬಣ್ಣ ಬಯಲಾದರೆ ಮತ್ತೆ ಕೆಲವರು ಸಿಕ್ಕಿ ಬೀಳದಂತೆ ಜಾಣ್ಮೆಯಿಂದ ತಪ್ಪಿಸಿಕೊಂಡವರು ಇಲ್ಲದಿಲ್ಲ.

ಟ್ಯಾಬ್ಲಾಯ್ಡ್ ಜಮಾನ ಮುಗಿದ ಬಳಿಕ ಯೂಟ್ಯೂಬ್‌ನಲ್ಲಿ ಚಾನೆಲ್‌ಗಳನ್ನು ಆರಂಭಿಸಿ ಅದರ ಮೂಲಕ ಸ್ಟಿಂಗ್ ಆಪರೇಷನ್ ನೆಪದಲ್ಲಿ ಹಣ ವಸೂಲಿ ದಂಧೆಗಿಳಿದವರ ಸಂಖ್ಯೆ ಹೆಚ್ಚಾಗುತ್ತಿದೆ. ಇವರು ನಿಜ ಹೇಳಬೇಕೆಂದರೆ ಪತ್ರಕರ್ತರೇ ಅಲ್ಲ, ಇವರಿಗೆ ಕಾರ್ಯ




ನಿರತ ಪತ್ರಕರ್ತರ ಸಂಘದಿಂದ ಸದಸ್ಯತ್ವವಾಗಲೀ, ಇನ್ನ್ಯಾವುದೇ ರೀತಿಯ ಮಾನ್ಯತೆಗಳಾಗಲೀ ಇರುವುದಿಲ್ಲ. ಇವರ ಜಾಯಮಾನವೇ ಹೆದರಿಸಿ ಬೆದರಿಸಿ ಡೀಲ್ ಮಾಡುವುದೇ ಆಗಿರುತ್ತದೆ. ಇವರು ಒಂಥರಾ ಸ್ವಘೋಷಿತ ಪತ್ರಕರ್ತರಾಗಿರುತ್ತಾರೆ.

ಇವತ್ತು ಯಾರು ಬೇಕಾದರೂ ಪತ್ರಕರ್ತರಾಗಬಹುದು ಎಂಬ ಸ್ಥಿತಿಗೆ ಬಂದು ನಿಂತಿದೆ. ಹೀಗಾಗಿ ಪತ್ರಕರ್ತರಿಗೆ ಇರಬೇಕಾದ ಯಾವುದೇ ಅರ್ಹತೆಯ ಅಗತ್ಯವಿಲ್ಲ. ತಮ್ಮದೇ ಆದ ಪತ್ರಿಕೆ ಅಥವಾ ಯೂಟ್ಯೂಬ್ ನಲ್ಲಿ ಚಾನಲ್, ವೆಬ್ ಸೈಟ್ ಮಾಡಿಕೊಂಡು ಅದರ ಮೂಲಕವೇ ಅಧಿಕಾರಿಗಳನ್ನು ಬೆದರಿಸಿ, ರಾಜಕಾರಣಿಗಳ ಮುಂದೆ ಕೈಕಟ್ಟಿಕೊಂಡು ನಿಂತೋ ಇನ್ನಿತರ ವಾಮ ಮಾರ್ಗದಿಂದ ಹಣವನ್ನು ಸಂಪಾದಿಸಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಈಗಾಗಲೇ ಹಲವರು ಸಿಕ್ಕಿ ಹಾಕಿಕೊಂಡು ನಾಯಿಗೆ ಹೊಡೆದಂತೆ ಹೊಡೆಸಿಕೊಂಡರೆ, ಮತ್ತೆ ಕೆಲವರು ಜೈಲಿಗೂ ಹೋಗಿ ಮುದ್ದೆ ಮುರಿದಿದ್ದಾರೆ.

ವಂಚಕರಿಗೆ ದಂಧೆ ಮಾಡಲು ಇದೊಂದು ಸುಲಭ ದಾರಿಯಾಗಿದೆ. ಹೀಗಾಗಿ ಕೆಲವರು ತಮ್ಮದೇ ಹಾದಿಯ ಮೂಲಕ ಬದುಕು ಕಟ್ಟಿಕೊಂಡಿದ್ದಾರೆ. ಶ್ರಮಪಟ್ಟು ದುಡಿಯುವ ಬದಲು ಅಡ್ಡದಾರಿಗಳನ್ನು ಹಿಡಿಯುತ್ತಿದ್ದಾರೆ. ಇದು ನ್ಯಾಯ, ನಿಷ್ಠೆಯಿಂದ ಕಾರ್ಯ ನಿರ್ವಹಿಸುವ ನೈಜ ಪತ್ರಕರ್ತರಿಗೆ ಕಂಟಕವಾಗಿ ಪರಿಣಮಿಸುತ್ತಿದೆ. ಇದರಿಂದ ಪತ್ರಕರ್ತರನ್ನು ಒಂದೇ ತಕ್ಕಡಿಯಲ್ಲಿಟ್ಟು ನೋಡುವ ಪರಿಸ್ಥಿತಿ ಬಂದೊದಗಿದೆ. ಇನ್ನು ಸೋಷಿಯಲ್ ಮೀಡಿಯಾಗಳ ಮೂಲಕ ಯಾರನ್ನೂ ಬೇಕಾದರೂ ವಾಚಾಮ ಗೋಚರವಾಗಿ ಬಯ್ಯುವ, ಕೆಟ್ಟದಾಗಿ ನಿಂದಿಸುವ, ಅಶ್ಲೀಲ ಕಮೆಂಟ್‌ಗಳನ್ನು ಮಾಡುವುದು ಸುಲಭವಾಗಿದೆ.

ಇದು ಬಹಳಷ್ಟು ಜನರ ವ್ಯಕ್ತಿತ್ವಕ್ಕೆ ಧಕ್ಕೆ ತರುವಂತಾಗಿದೆ. ಆದರೆ ಇಲ್ಲಿ ಏನನ್ನೂ ಮಾಡಲು ಸಾಧ್ಯವಾಗದ ಕಾರಣದಿಂದಾಗಿ ಮತ್ತು ಇಂತಹ ಕಮಂಗಿಗಳ ಬಗ್ಗೆ ಜನ ಕೂಡ ತಲೆಕೆಡಿಸಿಕೊಳ್ಳುವುದನ್ನು ಬಿಟ್ಟು ಬಿಟ್ಟಿದ್ದಾರೆ. ಆದರೂ ಏನಾದರೊಂದು ಮಾರ್ಗಸೂಚಿ, ನಿಯಮಗಳನ್ನು ಕಟ್ಟುನಿಟ್ಟಾಗಿ ತರದೆ ಹೋದರೆ ಮತ್ತು ನಕಲಿ ಮೇಲ್ ಐಡಿ ಕ್ರಿಯೇಟ್ ಮಾಡುವುದು, ಸೋಷಿಯಲ್ ಮೀಡಿಯಾಗಳಲ್ಲಿ ನಕಲಿ ಐಡಿಗಳನ್ನು ಕ್ರಿಯೇಟ್ ಮಾಡಿ ಸಿಕ್ಕಸಿಕ್ಕವರನ್ನು ಕೆಟ್ಟದಾಗಿ ನಿಂದಿಸುವುದು, ಕಮೆಂಟ್ ಮಾಡುವುದನ್ನೇ ಕಾಯಕ ಮಾಡಿಕೊಂಡು ವಿಕೃತ ಸಂತೋಷ ಪಡುವ ಗಿರಾಕಿಗಳಿಗೆ ಇತಿಶ್ರೀ ಹಾಡಲು ಸಾಧ್ಯವಿಲ್ಲದ ಪರಿಸ್ಥಿತಿಯಾಗಿದೆ.

ಈಗಾಗಲೇ ಸೋಷಿಯಲ್ ಮೀಡಿಯಾವನ್ನು ಗಬ್ಬೆಬ್ಬಿಸುವ ಮತ್ತು ಆ ಮೂಲಕವೇ ಬೇರೆಯವರ ಬದುಕಿಗೂ ಕುತ್ತು ತರುವ ಕೆಲಸಗಳು ಭರದಿಂದ ಸಾಗುತ್ತಿವೆ. ಇಲ್ಲಿ ಸುಳ್ಳುಗಳನ್ನು ಸತ್ಯ ಮಾಡುವ, ತೇಜೋವಧೆ ಮಾಡುವುದು ಹೆಚ್ಚುತ್ತಿದ್ದು, ಮುಂದಿನ ದಿನಗಳಲ್ಲಿ ಆಧಾರ್ ಕಾರ್ಡ್, ಫೋನ್ ನಂಬರ್, ಓಟಿಪಿ ಮುಂತಾದವುಗಳ ಆಧಾರದಲ್ಲಿ ಸೋಷಿಯಲ್ ಮೀಡಿಯಾಗಳು ಕೆಲಸ ನಿರ್ವಹಿಸುವಂತಾದರೆ ಒಳಿತಾಗಬಹುದು, ಜತೆಗೆ ಈಗ ಆಗುತ್ತಿರುವ ಅನಾಚಾರಗಳಿಗೂ ಕಡಿವಾಣ ಬೀಳಬಹುದೇನೋ?

ಸುಳ್ಳರು, ಕಳ್ಳರು, ವಂಚಕರು, ಭ್ರಷ್ಟಾಚಾರಿಗಳು ಎಲ್ಲ ರೀತಿಯ ಕ್ಷೇತ್ರವನ್ನೂ ಪ್ರವೇಶಿಸಿರುವುದರಿಂದ ಬಹುತೇಕ ಕ್ಷೇತ್ರಗಳು ಕಲುಷಿತವಾಗಿವೆ. ಇದಕ್ಕೆ ಪತ್ರಿಕೋದ್ಯಮವೂ ಹೊರತಾಗಿಲ್ಲ, ಇಲ್ಲಿ ಅಸಲಿಗಿಂತ ನಕಲಿಯೇ ಹೆಚ್ಚಾಗಿರುವ ಕಾರಣದಿಂದಾಗಿ ಜನರು ಯಾರನ್ನು ನಂಬಬೇಕು ಎಂದು ಗೊಂದಲಕ್ಕೀಡಾಗಿದ್ದಾರೆ. ಭ್ರಷ್ಟಾಚಾರಿಗಳು ಪತ್ರಿಕೋದ್ಯಮವನ್ನು ಬಳಸಿಕೊಂಡು ಬದುಕುವುದನ್ನು ಕಲಿತುಕೊಂಡಿದ್ದಾರೆ. ಅಷ್ಟೇ ಅಲ್ಲದೆ ಪತ್ರ ಕರ್ತರು ಎಂದು ಹೇಳಿಕೊಂಡು ಓಡಾಡುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಸೋಷಿಯಲ್ ಮೀಡಿಯಾವನ್ನೇ ಮೀಡಿಯಾ ಎಂದುಕೊಂಡು ಅಡ್ಡಾಡುವವರಿಗೆ ಕೊರತೆಯಿಲ್ಲ. ಮೊದಲೆಲ್ಲ ಪತ್ರಿಕೆಯಲ್ಲಿ ಕೆಲಸ ಮಾಡದೆ, ಜನಪ್ರಿಯ ಪತ್ರಿಕೆಗಳ ಹೆಸರು ಹೇಳಿಕೊಂಡು ಬ್ಲಾಕ್ ಮೇಲ್ ಮಾಡುವ ಪತ್ರಕರ್ತರಿದ್ದರು. ಅಂತಹವರು ಸುಲಭವಾಗಿ ಸಿಕ್ಕಿ




ಬೀಳುತ್ತಿದ್ದರು. ಆದರೆ ಈಗ ಅವರದ್ದೇ ಆದ ಸೋಷಿಯಲ್ ಮೀಡಿಯಾದಲ್ಲಿ ಚಾನಲ್ಲೋ, ವೆಬ್ ಸೈಟ್ ಮಾಡಿಕೊಂಡಿರುತ್ತಾರೆ. ಇನ್ನು ಕೆಲವರು ಸೋಷಿಯಲ್ ಮೀಡಿಯಾ ಮಾತ್ರವಲ್ಲದೆ, ಹುಣ್ಣಿಮೆಗೋ ಅಮಾವಾಸ್ಯೆಗೂ ಪೇಪರ್ ಪ್ರಿಂಟ್ ಹಾಕಿಕೊಂಡು ಅದನ್ನು ಕಂಕುಳಿನಲ್ಲಿ ಸಿಕ್ಕಿಸಿಕೊಂಡು ಅಧಿಕಾರಿಗಳನ್ನು ಇನ್ನಿತರರನ್ನು ಹುಡುಕಿ ಅವರ ಹೆದರಿಸಿ ಬೆದರಿಸಿ ಹಣಪೀಕುವ ದಂಧೆ ಮಾಡಿಕೊಂಡಿದ್ದಾರೆ.

ಮೀಡಿಯಾ ಹೆಸರಿನಲ್ಲಿ ವಸೂಲಿ ಮಾಡುವ ನಕಲಿ ವಂಚಕರು ಈಗೀಗ ಅಲ್ಲಲ್ಲಿ ಹೆಜ್ಜೆಗೊಬ್ಬರಂತೆ ಸಿಗುತ್ತಿದ್ದಾರೆ. ಕೆಲವರಷ್ಟೇ ಸಿಕ್ಕಿ ಬೀಳುತ್ತಿದ್ದಾರೆ. ಸಾಂಸ್ಕೃತಿಕನಗರಿ, ಸಣ್ಣಪತ್ರಿಕೆಗಳ ತವರು ಎಂದೆಲ್ಲ ಕರೆಯಿಸಿಕೊಳ್ಳುವ ಮೈಸೂರಿನಲ್ಲಿಯೂ ಇಂತಹ ಪ್ರಕರಣಗಳು ಬೆಳಕಿಗೆ ಬರುತ್ತಿವೆ. ಕೆಲವರು ಸಿಕ್ಕಿಬಿದ್ದಾಗ ಪ್ರಭಾವ ಬಳಸಿಯೋ, ಕೈಕಾಲು ಹಿಡಿದು ಬೆಳಕಿಗೆ ಬಾರದಂತೆ ನೋಡಿಕೊಂಡರೆ, ಇನ್ನು ಕೆಲವರು ತದಕಿಸಿಕೊಂಡಿದ್ದಾರೆ. ಮತ್ತೆ ಕೆಲವರು ಜೈಲಿಗೂ ಹೋಗಿ ಬಂದಿದ್ದಾರೆ. ಈ ನಡುವೆ ಆರ್‌ಟಿಐ ನ್ಯೂಸ್ ಪೇಪರ್ ಹೆಸರಿನಲ್ಲಿ ಅಧಿಕಾರಿಯೊಬ್ಬರಿಗೆ ಬ್ಲಾಕ್ ಮೇಲ್ ಮಾಡಿ 25 ಲಕ್ಷ ಹಣದ ಬೇಡಿಕೆಯಿಟ್ಟವರು ಪೊಲೀಸ್ ಅತಿಥಿಯಾಗಿದ್ದಾರೆ.

ಹರೀಶ್ ಅಲಿಯಾಸ್ ರಾಮು ಹಾಗೂ ಪ್ರತಾಪ್ ಎಂಬುವರೇ ಪೊಲೀಸ್ ಅತಿಥಿಯಾದವರು. ಈ ಪೈಕಿ ಪ್ರತಾಪ್ ಪೊಲೀಸ್ ಅತಿಥಿಯಾಗಿ ಕಂಬಿ ಎಣಿಸುತ್ತಿದ್ದರೆ ಮತ್ತೊಬ್ಬ ಹರೀಶ್ ಅಲಿಯಾಸ್ ರಾಮು ಎಸ್ಕೇಪ್ ಆಗಿದ್ದು, ಪೊಲೀಸರು ಆತನಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ. ಇಷ್ಟಕ್ಕೂ ಇವರಿಬ್ಬರು ಮಾಡಿದ್ದೇನು ಎಂಬುದನ್ನು ನೋಡಿದ್ದೇ ಆದರೆ ಮೈಸೂರಿನ ತಿಲಕ್ ನಗರದಲ್ಲಿರುವ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಕಚೇರಿಯ ಅಂಕಿತ ಅಧಿಕಾರಿ ಡಾ. ಕಾಂತರಾಜು ಎಂಬುವರಿಗೆ ಈ ಇಬ್ಬರು ಅಡ್ನಾಡಿಗಳು ನಾವು ಆರ್‌ಟಿಐ ಪೇಪರ್‌ನವರಾಗಿದ್ದು ನಿಮ್ಮ ಬಗ್ಗೆ ಸ್ಟಿಂಗ್ ಆಪರೇಷನ್ ಮಾಡಿದ್ದು, 25 ಲಕ್ಷ ಕೊಡದೆ ಹೋದರೆ ಅದನ್ನು ಮೀಡಿಯಾದಲ್ಲಿ ಹಾಕಿ ನಿಮ್ಮ ಮಾನ ಮರ್ಯಾದೆ ತೆಗೆಯುವುದಾಗಿ ಬ್ಲಾಕ್‌ಮೇಲ್ ಮಾಡಿದ್ದಾರೆ. ಅಷ್ಟಕ್ಕೆ ಸುಮ್ಮನಾಗದೆ ನೀವೇನಾದರೂ ಹಣ ಕೊಟ್ಟಿಲ್ಲಾಂದ್ರೆ ಆರೋಗ್ಯ ಸಚಿವರಿಗೆ, ಲೋಕಾಯುಕ್ತಕ್ಕೆ ದೂರು ನೀಡಿ ನಿಮ್ಮ ವಿರುದ್ಧ ಪ್ರತಿಭಟಿಸಿ ಮಾನಹಾನಿ ಮಾಡಿ ಕೊನೆಗೆ ಸಸ್ಪೆಂಡ್ ಮಾಡಿಸುವುದಾಗಿಯೂ ಬೆದರಿಕೆ ಹಾಕಿದ್ದಾರೆ.

ಹಾಗೆ ನೋಡಿದರೆ ಆರ್‌ಟಿಐ ನ್ಯೂಸ್ ಪೇಪರ್ ಹೆಸರಲ್ಲಿ ಬ್ಲಾಕ್‌ಮೇಲ್ ಮಾಡಿದ ಹರೀಶ್ ಹಾಗೂ ಪ್ರತಾಪ್ ಎಂಬ ಕಮಂಗಿಗಳು ಸಾಮಾನ್ಯದವರಲ್ಲ. ಇವರು ಸುಮಾರು ಮೂರು ತಿಂಗಳ ಹಿಂದೆಯೇ ಡಾ. ಕಾಂತರಾಜು ಅವರನ್ನ ಸಂಪರ್ಕಿಸಿ ನಿಮ್ಮ ಹಾಗೂ ನಿಮ್ಮ ಪತ್ನಿಯ ಚಲನವಲನಗಳನ್ನ ಸ್ಟಿಂಗ್ ಅಪರೇಷನ್ ಮಾಡಿ ವಿಡಿಯೋ ಮತ್ತು ದಾಖಲೆಗಳನ್ನ ಸಂಗ್ರಹಿಸಿದ್ದೇವೆ. ಮೈಸೂರಿನ ಸಿದ್ದಾರ್ಥ ನಗರದಲ್ಲಿರುವ ನಿಮ್ಮ ಮಡದಿಯ ಕ್ಲಿನಿಕ್ ನಲ್ಲಿ ಮಹಿಳಾ ರೋಗಿಗಳಿಗೆ ಪರೀಕ್ಷಿಸುವಾಗ ವಿಡಿಯೋಗಳನ್ನು ಮಾಡಿದ್ದೇವೆ. ನಿಮ್ಮ ಎಲ್ಲಾ ಕಾರ್ಯ ಚಟುವಟಿಕೆಗಳ ವಿವರ ನಮ್ಮ ಬಳಿ ಇದೆ. ಇವುಗಳನ್ನು ಮೀಡಿಯಾದಲ್ಲಿ ನಿರಂತರವಾಗಿ ಬಿತ್ತರಿಸುತ್ತೇವೆ.

ನಿಮ್ಮ ವಿರುದ್ಧ ಪ್ರತಿಭಟನೆ ಮಾಡುತ್ತೇವೆ, ಲೋಕಾಯುಕ್ತ ಕಚೇರಿಯಲ್ಲಿ ದೂರು ದಾಖಲಿಸುತ್ತೇವೆ, ಆರೋಗ್ಯ ಸಚಿವರಿಗೆ ದೂರು ನೀಡಿ ಸಸ್ಪೆಂಡ್ ಮಾಡಿಸುತ್ತೇವೆ. ನಿಮ್ಮ ಕುಟುಂಬ ಹಾಗೂ ರೋಗಿಗಳ ಮುಂದೆ




☞ 12

# ವಿಧಾನ ಪರಿಷತ್ ನಾಮಕರಣಕ್ಕೆ ಕಾಂಗ್ರೆಸ್ ಹೈಕಮ್ಯಾಂಡ್ ಹೈಡ್ರಾಮಾ!

6 ☜

ದ್ದೇನೆ. ಈಗ ಈ ಹೆಸರುಗಳಲ್ಲಿ ಒಂದು ಹೆಸರನ್ನು ತೆಗೆದು ಹಾಕಿದರೂ ನನಗೆ ಅವಮಾನವಾಗುತ್ತದೆ. ಪಟ್ಟಿಗೆ ಅನುಮತಿ ಕೊಟ್ಟ ಖರ್ಗೆಯವರಿಗೆ ಅವಮಾನವಾಗುತ್ತದೆ ಎಂದಿದ್ದರು.

ಆಗೆಲ್ಲ ಮಾತನಾಡಿದ ಸುರ್ಜೇವಾಲ, 'ಹಾಗಲ್ಲ ಸಿದ್ರಾಮಯ್ಯಾಜೀ. ಈಗ ಪಟ್ಟಿಯಲ್ಲಿರುವ ದಿನೇಶ್ ಅಮಿನ್ ಮಟ್ಟು ಅವರು ನಮ್ಮ ನಾಯಕಿ ಇಂದಿರಾಗಾಂಧಿ ಅವರನ್ನು ಬಹಳಷ್ಟು ಟೀಕಿಸಿ ಬರೆದಿದ್ದಾರೆ ಅಂತ ಕಂಪ್ಲೇಂಟಿದೆ... ಇದೇ ರೀತಿ ರಮೇಶ್ ಬಾಬು ಅವರು ಇತ್ತೀಚೆಗಷ್ಟೇ ಕಾಂಗ್ರೆಸ್ಸಿಗೆ ಬಂದವರಲ್ವೆ... ಹೀಗಾಗಿ,ಪಕ್ಷಕ್ಕಾಗಿ ದುಡಿದ ಸೀನಿಯರ್ಸ್‌ಗೆ ಚಾನ್ಸು ಕೊಡಿ' ಎಂಬ ಅಭಿಪ್ರಾಯ ವ್ಯಕ್ತವಾಗಿದೆ.... ಎಂದಿದ್ದರು! ಆದರೆ ಅದಕ್ಕೆ ಸೊಪ್ಪು ಹಾಕದ ಸಿದ್ದರಾಮಯ್ಯನವರು ಪತ್ರಕರ್ತರಾಗಿದ್ದಾಗ ದಿನೇಶ್ ಅಮೀನ್ ಮಟ್ಟು ಏನು ಬರೆದಿದ್ದರೋ?ಅದೀಗ ಮುಖ್ಯ ವಿಷಯವಲ್ಲ.... ಮುಖ್ಯವಾಗಿ ಹಾಗೇನಾದರೂ ಅವರು ಬರೆದಿದ್ದರೆ ಅದನ್ನವರು ಕಾಂಗ್ರೆಸ್ ಕಾರ್ಯಕರ್ತರಾಗಿ ಬರೆದಿಲ್ಲ... ಓರ್ವ ಪತ್ರಕರ್ತರಾಗಿ ಬರೆದಿರಬಹುದು...

ಕಳೆದ ಕೆಲ ವರ್ಷಗಳಿಂದ ಕೋಮುವಾದಿಗಳ ವಿರುದ್ಧ ನಾವು ನಡೆಸುತ್ತಿರುವ ಹೋರಾಟಕ್ಕೆ ಅವರು ಭುಜ್ ನೀಡಿದ್ದಾರೆ. ಹೀಗಾಗಿ ವಿಧಾನಪರಿಷತ್ತಿನಲ್ಲಿ ಅವರ ಸೇವೆ ನಮ್ಮ ಪಕ್ಷಕ್ಕೆ ಅಗತ್ಯವಿದೆ. ಇನ್ನು, ರಮೇಶ್ ಬಾಬು ಕೂಡಾ ನಮ್ಮ ಪಕ್ಷದ ಪರವಾಗಿ ಮಾಧ್ಯಮ ಸಮರಗೈಯುತ್ತ ಇಂತಹ ಹೋರಾಟಗಳಲ್ಲಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳುತ್ತಿದ್ದಾರೆ. ಅವರ ನೇಮಕಾತಿಯಿಂದ ಪಕ್ಷಕ್ಕೆ ಬಲ ಬರಲಿದೆ.... ಎಂಬಿತ್ಯಾದಿಯಾಗಿ ವಿವರಿಸಿ ಬಂದಿದ್ದರು! ಇಷ್ಟೆಲ್ಲಾ ಆಗಿದ್ದರೂ... ಈಗ ದಿನೇಶ್ ಅಮೀನ್ ಮಟ್ಟು, ಡಿ.ಜಿ ಸಾಗರ್ ಹೆಸರು ಕೈಬಿಟ್ಟು ಹೋಗಿದೆ! ಯಾರಿದ್ದಾರೆ ಇದರ ಹಿಂದೆ? ಸದರಿ ಎಮ್ಮೆಲ್ಸಿ ಪಟ್ಟಿಗೆ ದಿಲ್ಲಿ ವರಿಷ್ಟರು ಬ್ರೇಕ್ ಹಾಕಲು ಡಿಕೆಶಿ ಕಾರಣ ಎಂಬುದು ಸಿದ್ಧರಾಮಯ್ಯ ಅವರ ಅನುಮಾನ! ಹೀಗಾಗಿಯೇ ಅವರು ಡಿಕೆಶಿ ವಿರುದ್ಧ ಮುಗಿಬೀಳಲು ನಿರ್ಧರಿಸಿದ್ದಾರೆ... ಅದನ್ನು ಪ್ರತಿನಿತ್ಯವೂ ರಾಜ್ಯದ ಜನತೆ ಗಮನಿಸುತ್ತಿದೆ! ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಡಿಕೆಶಿ ಅವರನ್ನು ಕೆಳಗಿಳಿಸಿ ಅರಣ್ಯ ಸಚಿವ ಈಶ್ವರ ಖಂಡ್ರೆ ಇಲ್ಲವೇ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ನೇಮಕ ಮಾಡಿ ಅಂತ ದಿಲ್ಲಿ ನಾಯಕರಿಗೆ ಅವರು ಹೇಳಿ ಬಂದಿರುವುದೇ ಇದಕ್ಕೆ ಸಾಕ್ಷಿ!

ಯಾವಾಗ ಸಿದ್ಧರಾಮಯ್ಯ ಗರಂ ಆಗಿದ್ದಾರೆ ಅಂತ ಅರ್ಥವಾಯಿತೋ? ಅಲ್ಲಿಂದ ಮಲ್ಲಿಕಾರ್ಜುನ ಖರ್ಗೆ, ಸುರ್ಜೇವಾಲಾ, ಕೆ.ಸಿ. ವೇಣುಗೋಪಾಲ್ ಅವರೆಲ್ಲ ರಾಹುಲ್ ಗಾಂಧಿ ಅವರು ವಿದೇಶ್ ಪ್ರವಾಸದಲ್ಲಿದ್ದಾರೆ, ಅವರು ಬಂದ ಕೂಡಲೇ ನೀವು ಹೇಳಿದ ವಿಷಯವನ್ನು ಅವರ ಗಮನಕ್ಕೆ ತರುತ್ತೇವೆ ಅಂತ ಸಬೂಬು ಹೇಳಿ ಕೈ ತೊಳೆದುಕೊಂಡಿದ್ದಾರೆ. ಯಾವಾಗ ಈ ಎಲ್ಲ ಬೆಳವಣಿಗೆಗಳು ನಡೆದವೋ?ಇವು ಸಹಜವಾಗಿಯೇ ಸಿದ್ದು ಆಪ್ತರು ಕೆರಳುವಂತೆ ಮಾಡಿದೆ.ಹೀಗಾಗಿಯೇ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರು,ಪಕ್ಷದಲ್ಲಿ ಪವರ್ ಸೆಂಟರುಗಳು ಹೆಚ್ಚಾಗಿರುವುದರಿಂದ ಸಿದ್ದರಾಮಯ್ಯ ಅವರು ಈ ಹಿಂದಿನಂತಿಲ್ಲ......ಆದರೆ ಪರಿಸ್ಥಿತಿ ಹೀಗೆಯೇ ಇರುವುದಿಲ್ಲ....

ಸೆಪ್ಟೆಂಬರ್ ಹೊತ್ತಿಗೆ ಕ್ರಾಂತಿ ಖಚಿತ....ಅಂತ ಗುಡುಗಿದ್ದು! ಡಿಕೆಶಿ ಕೂಡ ರಾಜಣ್ಣನ ಮೇಲೆ ಒಂದು ಕಣ್ಣು ಇಟ್ಟೇ ಇದ್ದರು.ರಾಜಣ್ಣ ಪರಿಸ್ಥಿತಿ ಈಗೇನಾಗಿದೆಯೋ ಇದರ ಹಿಂದೆ ಡಿಕೆ ಇದ್ದೇ ಇರುತ್ತಾರೆ! ಹಾಗೆಯೇ,ಸಿಎಂ ಸಿದ್ಧರಾಮಯ್ಯ ಕೂಡಾ ದಿನದಿಂದ ದಿನಕ್ಕೆ ಡಿಕೆಶಿ ವಿಷಯದಲ್ಲಿ ಬಿಗುವಾಗುತ್ತಾ ನಡೆದಿರುವುದು ಸುಳ್ಳಲ್ಲ! ಅಧಿಕಾರ ಹಂಚಿಕೆಯ ವಿಷಯದಲ್ಲಿ ಡಿಕೆಶಿ ಹೇಗೆ ಫರ್ಮ್ ಆಗಿದ್ದಾರೊ? ಹಾಗೆಯೇ ಸಿಎಂ ಹುದ್ದೆ ಬಿಟ್ಟು ಕೊಡಬಾರದು ಎಂಬ ವಿಷಯದಲ್ಲಿ ಸಿದ್ದು ಕೂಡಾ ಅಷ್ಟೇ ಫರ್ಮ್ ಆಗಿದ್ದಾರೆ!!

ನಾಳೆ ಸೆಪ್ಟೆಂಬರ್ ಹೊತ್ತಿಗಲ್ಲವಾದರೂ ನವೆಂಬರ್ ಹೊತ್ತಿಗಲ್ ಕೈ ಪಾಳಯದಲ್ಲಿ ಕ್ರಾಂತಿಯಾಗೋದು ನಿಶ್ಚಿತ. ಇದನ್ನು ಊಹಿಸಿರುವ ಕಾರಣದಿಂದಲೇ ಕರ್ನಾಟಕಕ್ಕೆ ಬರಲು ಉತ್ಸುಕರಾಗಿರುವ ರಣದೀಪ್ ಸಿಂಗ್ ಮತ್ತು ಸುರ್ಜೇವಾಲ ಅವರು ಕರ್ನಾಟಕದಲ್ಲಿ ಪಕ್ಷವನ್ನು ಬಲಪಡಿಸಲು ಬೋರ್ಡು- ಕಾರ್ಪೋರೇಷನ್‌ಗಳ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸೋಣ ಎಂದಿದ್ದಾರಂತೆ. ಬಾಕಿ ಉಳಿದಿರುವ ಬೋರ್ಡು-ಕಾರ್ಪೋರೇಷನ್ನುಗಳಿಗೆ ಅಧ್ಯಕ್ಷ ಹುದ್ದೆ ಮಾತ್ರವಲ್ಲದೆ, ಸದಸ್ಯರನ್ನು ನೇಮಕ ಮಾಡುವುದು ಮತ್ತು ಎಲ್ಲ ಹಂತಗಳ ನೇಮಕಾತಿಯನ್ನು ಪೂರ್ಣಗೊಳಿಸಿದರೆ ನಾಲ್ಕು ಸಾವಿರ ಮಂದಿ ಕಾರ್ಯಕರ್ತರಿಗೆ ಬಲ ನೀಡಿದಂತಾಗುತ್ತದೆ ಎಂಬುದು ಸುರ್ಜೇವಾಲಾ ಯೋಜನೆ.

ಆದರೆ ಮೊದಲ ಕಂತಿನ ಬೋರ್ಡು-ಕಾರ್ಪೋರೇಷನ್‌ಗಳ ನೇಮಕಾತಿ ವಿಷಯದಲ್ಲಿ ಸುರ್ಜೇವಾಲಾ ಅವರ ಕೈ ಚಳಕವನ್ನು ಕಂಡಿರುವ ಸಿದ್ಧರಾಮಯ್ಯ ಆಪ್ತ ಸಚಿವರ ಪಡೆ ಇದೀಗ ಅವರಿಗೆ ಉಲ್ಟಾ ಹೊಡೆಯಲು ಸಜ್ಜಾಗಿದೆ! ಅರ್ಥಾತ್, ಬೋರ್ಡು-ಕಾರ್ಪೊರೇಷನ್ನುಗಳ ನೇಮಕಾತಿ ವಿಷಯದಲ್ಲಿ ನಮ್ಮ ಅಭಿಪ್ರಾಯ ಪಡೆಯದೆ ನೀವು ಮುಂದುವರಿಯುವಂತಿಲ್ಲ ಎಂದು ತಾಕೀತು ಮಾಡುವುದು ಸಿದ್ದು ಗ್ಯಾಂಗ್ ಯೋಜನೆ.

ಕೆಲ ಮೂಲಗಳ ಪ್ರಕಾರ, ಸುರ್ಜೇವಾಲಾ ಅವರ ಕೈ ಚಳಕ ಕೆಲಸ ಮಾಡಿದರೆ, ಡಿಕೆ ಮಾತು ಕೇಳಿಕೊಂಡು ಕಂಡ ಕಂಡವರನ್ನೆಲ್ಲ ಬೋರ್ಡು-ಕಾರ್ಪೊರೇಷನ್ನುಗಳಿಗೆ ತಂದು ಹಾಕಲು ಮುಂದಾದರೆ ವರಿಷ್ಟರಿಗೆ ಪತ್ರ ಮುಖೇನ ದೂರು ನೀಡುವುದು ಈ ಗ್ಯಾಂಗ್‌ನ ಲೆಕ್ಕಾಚಾರ! ಅಂದಹಾಗೆ, ಕೈ ಪಾಳಯದಲ್ಲಿ ಕೇಳಿ ಬರುತ್ತಿರುವ ಕ್ರಾಂತಿಯ ಮಾತು ಪ್ರತಿಪಕ್ಷ ಬಿಜೆಪಿಗೆ ಸಮಾಧಾನ ತಂದಿದೆಯಂತೆ.

ಯಾಕೆಂದರೆ ಇಂತಹ ಕ್ರಾಂತಿಗೆ ಅಧಿಕಾರ ಹಸ್ತಾಂತರದ ಮಾತೇ ಮೂಲವಾಗುವುದರಿಂದ ಏನೇ ಆದರೂ ನಮಗೇ ಲಾಭ ಎಂಬುದು ಬಿಜೆಪಿ ನಾಯಕರ ಲೆಕ್ಕಾಚಾರವಿರಬಹುದು! ಸಿಎಂ ಸಿದ್ದರಾಮಯ್ಯ ಮುಂದೆ ಸಿಎಂ ಹುದ್ದೆಯನ್ನು ಡಿಕೆಶಿಗೆ ಬಿಟ್ಟು ಕೊಟ್ಟರೂ ಮುಂದಿನ ವರ್ಷ ಏಪ್ರಿಲ್-ಮೇ ತಿಂಗಳಲ್ಲಿ ವಿಧಾನಸಭೆಗೆ ಮಧ್ಯಂತರ ಚುನಾವಣೆ ನಡೆಯೋದು ಖಚಿತ! ಒಂದು ವೇಳೆ ಅಧಿಕಾರ ಹಸ್ತಾಂತರ ಪ್ರಕ್ರಿಯೆ ನಡೆಯದಿದ್ದರೂ ಕೈ ಪಾಳಯ ತಲ್ಲಣಗೊಳ್ಳುವುದು ನಿಶ್ಚಿತ! ಹೀಗಾಗಿ, ಏನೇ ಆದರೂ ಲಾಭ ನಮಗೇ ಎಂಬುದು ಬಿಜೆಪಿಗಳ ಅಂಬೋಣ. ಹೀಗಾಗಿಯೇ ಪಕ್ಷದ ಅಂತ:ಕಲಹಕ್ಕೆ ಬ್ರೇಕ್ ಹಾಕಲು ಬಿಜೆಪಿ ಹೈಕಮಾಂಡ್ ತರಾತುರಿ ತೋರಿಸುತ್ತಿರುವುದು ರಹಸ್ಯವೇನಲ್ಲ...!! ☯


## ಬುರುಡೆ ರಹಸ್ಯ!

ಸುದ್ದಿಯಲ್ಲಿದೆ ಬುರುಡೆ. ಎಪ್ಪತ್ತೈದು ವರ್ಷಗಳ ಹಿಂದೆ ಸಿಕ್ಕಿತ್ತು ಬುರುಡೆ. ಇದರ ಹಿಂದೆ ಹೋಗಿದ್ದರು ಎಸ್‌ಐ. ಕೊನೆಗೂ ಆರೋಪಿಯ ಬಂಧನ. ಈ ಪ್ರಕರಣ ನ್ಯಾಯಾಲಯದಲ್ಲಿ ಸಾಬೀತು. ಆರೋಪಿಗೆ ಗಲ್ಲು ಶಿಕ್ಷೆ. ಅತ್ಯಂತ ಕುತೂಹಲಭರಿತ ಕಥಾನಕ...

ಅತೀ ಶೀಘ್ರದಲ್ಲಿ


# ...ಪೊಲೀಸ್ ಠಾಣೆಯಲ್ಲಿ ಲಾಕಪ್ ಡೆತ್?!

10 ☜


ಮೃತ ರಮೇಶ್‌ನ ಹೆಂಡತಿ, ಮಕ್ಕಳ ರೋಧನೆ

ಸಾಕ್ಷಿಯಾಗಿ ಪೊಲೀಸ್ ಠಾಣೆಯ ಸೆಲ್‌ನಿಂದ ಶೌಚಾಲಯಕ್ಕೆ ಒಬ್ಬನೇ ತೆರಳಿಸುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಈ ಎಲ್ಲಾ ದಾಖಲೆಗಳನ್ನು ಜಿಲ್ಲಾ ಎಸ್ಪಿರವರು ಪಡೆದಿದ್ದಾರಂತೆ.

ಆದರೆ ಈ ಪ್ರಕರಣದ ಬಗ್ಗೆ ಮೃತ ರಮೇಶ್‌ನ ಪತ್ನಿ ಮತ್ತು ಮಕ್ಕಳಾದ ಉಷಾ ಹಾಗೂ ಆಶಾರವರುಗಳು ಪತ್ರಿಕೆಗಳ ಜೊತೆ ಮಾತನಾಡಿ, ನಮ್ಮ ತಂದೆ ರಮೇಶ್‌ರವರು ಯಾವುದೇ ಕಳ್ಳತನ ಮಾಡಿಲ್ಲ. ನಾವು ಕೂಲಿ ಮಾಡಿಕೊಂಡು ಜೀವನ ಮಾಡುತ್ತಿದ್ದೇವೆ. ಬಿದುರಿನ ಏಣಿ ಮಾಡಿಕೊಡಬೇಕು ಎಂದು ಶನಿವಾರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದವರು, ಸೋಮವಾರ ಪೊಲೀಸರು ಮನೆಗೆ ಬಂದು ಸಿಲಿಂಡರ್, ದೀಪಾಲೆ ಕಂಬಗಳನ್ನು, ತಾಳಿಗಳನ್ನು ತೆಗೆದುಕೊಂಡು ಹೋದರು. ಮತ್ತೆ ರಮೇಶ್‌ರ ಆಧಾರ್ ಕಾರ್ಡ್ ಪೊಲೀಸ್ ಠಾಣೆಗೆ ತಂದು ಕೊಡುವಂತೆ ಹೇಳಿದ್ದರು. ಅದರಂತೆ ಹೋಗಿ ಕೊಟ್ಟಿದ್ದೆವು. ಜೊತೆಗೆ ರಮೇಶ್ ಮತ್ತು ಮಗ ಮಂಜು ಇಬ್ಬರಿಗೆ ತಲಾ ಎರಡು ಜೊತೆ ಬಟ್ಟೆ ತರುವಂತೆ ಹೇಳಿದ್ದರು. ನಾವು ಮನೆಗೆ ಬಂದು ಅವರ ಬಟ್ಟೆಯನ್ನು ಬ್ಯಾಗ್‌ಗೆ ಹಾಕಿಕೊಳ್ಳುವ ವೇಳೆಗೆ ಮಗಳ ನಂಬರ್‌ಗೆ ಕರೆಬಂದು ರಮೇಶ್‌ನು ನೇಣು ಹಾಕಿಕೊಂಡಿದ್ದಾರೆ ಎಂದು ಹೇಳಿದ್ದರು. ಇಲ್ಲಿ ಪೊಲೀಸರು ಏನೂ ತಪ್ಪು ಮಾಡದ ನನ್ನ ಗಂಡನನ್ನು ಹೊಡೆದು ಸಾಯಿಸಿ ನೇಣು ಹಾಕಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದಾರೆ ಎಂದು ರಮೇಶ್‌ನ ಹೆಂಡತಿ, ಮಕ್ಕಳು ಆರೋಪಿಸಿದ್ದಾರೆ.


ಸಾರ್ವಜನಿಕ ಆಸ್ಪತ್ರೆ ಮುಂಭಾಗ ಜನಸ್ತೋಮ

ಇತ್ತ ಎಂ.ಕೆ. ದೊಡ್ಡಿ ಪೊಲೀಸ್ ಠಾಣೆಯ ಪಿಎಸ್‌ಐ ಸಹನಾ ಪಾಟೀಲ್‌ರನ್ನು ಅಮಾನತು ಮಾಡದಂತೆ ಡಿವೈಎಸ್ಪಿರವರಿಗೆ ಕೆಲವು ಸಂಘಟನೆಗಳ ಮೂಲಕ ಮನವಿ ಮಾಡಿದ್ದರು. ಕರ್ತವ್ಯ ನಿರ್ಲಕ್ಷ್ಯದಡಿ ನಾಲ್ವರು ಪೊಲೀಸರನ್ನು ಎಸ್ಪಿರವರು ಅಮಾನತುಗೊಳಿಸಿದ್ದಾರೆ. ಏನೇ ಆದರೂ ಈ ಪ್ರಕರಣ ಸತ್ಯಾಸತ್ಯತೆಯ ಬಗ್ಗೆ ಪೊಲೀಸ್ ಮತ್ತು ಸಿಐಡಿ ತನಿಖೆಯಿಂದ ಹೊರಬೀಳಬೇಕಿದೆ. ☯

11 ☜



ಅವಮಾನ ಮಾಡುತ್ತೇವೆ. ಮೇಲಾಧಿಕಾರಿಗಳ ಗಮನಕ್ಕೆ ತರುತ್ತೇವೆ. ನಿರಂತರವಾಗಿ ಕಿರುಕುಳ ನೀಡುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ. ನೀವೇನಾದರೂ ನಾವು ಹೇಳಿದಂತೆ ಕೇಳಿ 25 ಲಕ್ಷ ನೀಡಿದ್ರೆ ಇದ್ಯಾವುದನ್ನು ಮಾಡುವುದಿಲ್ಲ ಎಂದಿದ್ದಾರೆ. ಅಷ್ಟೇ ಅಲ್ಲದೆ 25-08-2025 ರಂದು ಡೆಡ್‌ಲೈನ್ ನೀಡಿ ಹೂಟಗಳ್ಳಿ ಸಿಗ್ನಲ್ ಲೈಟ್ ಬಳಿ ಕರೆಸಿಕೊಂಡು ಹೆದರಿಸಿದ್ದಾರೆ.

ಈ ನಕಲಿ ಪತ್ರಕರ್ತರ ಕಿರುಕುಳದಿಂದ ಬೇಸತ್ತ ಡಾ. ಕಾಂತರಾಜು ಅವರು ವಿಜಯನಗರ ಪೊಲೀಸ್ ಠಾಣೆಗೆ ಹೋಗಿ ಬ್ಲಾಕ್‌ಮೇಲ್ ಮಾಡಿ ಬೆದರಿಸಿದ ನಕಲಿ ಪತ್ರಕರ್ತರಾದ ಹರೀಶ್ ಅಲಿಯಾಸ್ ರಾಮು ಮತ್ತು ಪ್ರತಾಪ್ ಎಂಬುವರ ವಿರುದ್ಧ ದೂರು ನೀಡಿದ್ದಾರೆ. ದೂರು ಪಡೆದು ಬ್ಲಾಕ್ ಮೇಲ್ ಮಾಡಿದ ಆರೋಪದ ಮೇಲೆ ಎಫ್‌ಐಆರ್ ದಾಖಲಿಸಿದ ಪೊಲೀಸರು ಕಾರ್ಯಾಚರಣೆ ನಡೆಸಿದ್ದು ಈ ವೇಳೆ ಪ್ರತಾಪ್ ಸಿಕ್ಕಿಬಿದ್ದರೆ, ಹರೀಶ್ ಅಲಿಯಾಸ್ ರಾಮು ಎಸ್ಕೇಪ್ ಆಗಿದ್ದಾನೆ. ಆತನಿಗಾಗಿ ಪೊಲೀಸರು ಬಲೆ ಬೀಸಿದ್ದಾರೆ.

ಇಂತಹ ನಕಲಿ ಪತ್ರಕರ್ತರು ಎಲ್ಲೆಡೆಯೂ ಇರಬಹುದು. ಬ್ಲಾಕ್‌ಮೇಲ್ ಮಾಡುವುದು, ಬೆದರಿಸುವುದು ಮಾಡಿದರೆ ಕೂಡಲೇ ಹತ್ತಿರದ ಪೊಲೀಸ್ ಠಾಣೆಗೆ ಅಂತಹವರ ವಿರುದ್ಧ ದೂರು ನೀಡುವುದು ಒಳಿತು. ☯



ಬೆಳಗಾವಿಯಲ್ಲಿ ಗಾಂಜಾ ಪೂರೈಸುತ್ತಿದ್ದ ಆರೋಪಿಗಳಾದ ಸದ್ದಾಂ ಅಲಿಯಾಸ್ ಇಸ್ಮಾಯಿಲ್ ಸೈಯದ್ ಕಿಂಗ್‌ಪಿನ್, ತಾಜೀರ್ ಗುಡುಸಾಬ ಬಸ್ತವಾಡೆ, ತೇಜಸ್ ಭೀಮರಾವ ವಾಜರೆ, ರಮಜಾನ್ ದಸ್ತಗೀರ ಜಮಾದಾರ, ಶಿವಕುಮಾರ ಬಾಲಕೃಷ್ಣ ಅಸಬೆ, ತಾಜೀಬ್ ಅಬ್ದುಲ್ ರಜಾಕ್ ಮುಲ್ಲಾ, ಪ್ರಥಮೇಶ ದಿಲೀಪ್ ಲಾಡ, ಅನುರಾಗ ಉದಯಕುಮಾರ ಯರನಾಳಕರ, ಅಬ್ದುಲ್, ಮಜೀದ ಅಬ್ದುಲ್ ಸತ್ತಾರ ಮೊಖಾದ್ದಮ್

## ಸಿಇಎನ್ ಅಪರಾಧ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ ತಂಡದಿಂದ ಭರ್ಜರಿ ಬೇಟೆ...

# ಮಧ್ಯಪ್ರದೇಶ, ಓಡಿಸ್ಸಾದಿಂದ ಗಾಂಜಾ ತಂದು ಬೆಳಗಾವಿಗೆ ಪೂರೈಸುತ್ತಿದ್ದ ಕಿಂಗ್‌ಪಿನ್ ಸೇರಿ 9 ಜನ ಆರೋಪಿಗಳು ಅಂದರ್... 30 ಲಕ್ಷ ರೂ.ಗಳ 50 ಕೆಜಿ ಗಾಂಜಾ ಜಪ್ತಿ...

**ಕುಂದಾ ನಗರಿ ಖ್ಯಾತಿಯ ಬೆಳಗಾವಿ ಮಹಾನಗರ ಮತ್ತು ಪರಿಸರವನ್ನು ನಶೆಮುಕ್ತ, ಮಟ್ಕಾ-ಜೂಜಾಟ ಮುಕ್ತ ಮಾಡಲು ಪಣ ತೊಟ್ಟು ಸಮರವನ್ನೇ ಸಾರಿರುವ ದಕ್ಷ ಪೊಲೀಸ್ ಕಮೀಷನರ್ ಭೂಷಣ ಗುಲಾಬರಾವ ಬೋರಸೆ ನೇತೃತ್ವದಲ್ಲಿ ಚತುರ ಮತ್ತು ಧಾಡಸಿ ಡಿಸಿಪಿ (ಕಾ.ಸು) ನಾರಾಯಣ ಬರಮನಿ, ಡಿಸಿಪಿ (ಕ್ರೈಂ) ನಿರಂಜನ ರಾಜೇ ಅರಸ ಮುಂದಾಳತ್ವದಲ್ಲಿ ಎಲ್ಲಾ ಎಸಿಪಿಗಳು ಮತ್ತು ಇನ್ಸ್‌ಪೆಕ್ಟರ್‌ಗಳು ಕಾರ್ಯಪ್ರವೃತ್ತರಾಗಿದ್ದಾರೆ. ಇದರ ಮುಂದುವರಿದ ಭಾಗವಾಗಿ ಸಿಇಎನ್ ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ ಮತ್ತು ಸಿಬ್ಬಂದಿಗಳು ಖಚಿತ ಮಾಹಿತಿ ಆಧರಿಸಿ ನಡೆಸಿರುವ ಮಹತ್ವದ ಕಾರ್ಯಾಚರಣೆಯಲ್ಲಿ ಮಧ್ಯಪ್ರದೇಶ, ಓಡಿಸ್ಸಾ ರಾಜ್ಯಗಳಿಂದ ಗಾಂಜಾ ಖರೀದಿಸಿ ತಂದು ಮುಂಬೈ ಮಾರ್ಗವಾಗಿ ಬೆಳಗಾವಿ ಮಹಾನಗರದಲ್ಲಿ ಪೆಡ್ಲರ್‌ಗಳ ಮೂಲಕ ಮಾರಾಟ ಮಾಡುವ ಕಿಂಗ್‌ಪಿನ್ ಸೇರಿದಂತೆ 9 ಜನ ಖತರ್‌ನಾಕ್ ಕ್ರಿಮಿನಲ್‌ಗಳ ಹೆಡೆಮುರಿ ಕಟ್ಟಿದ್ದಾರೆ. ಬಂಧಿತರಿಂದ 30 ಲಕ್ಷ ರೂ.ಗಳ ಮೌಲ್ಯದ 50 ಕೆಜಿ ಒಣಗಿದ ಗಾಂಜಾ, 13 ಮೊಬೈಲ್‌ಗಳು, 2 ಕಾರ್, 1 ತೂಕದ ಮೆಷೀನ್, 1 ಮಚ್ಚು, ಸರ್ಜಿಕಲ್ ಬ್ಲೇಡ್, 4 ಸಾವಿರ ನಗದು ಹಣ ವಶಪಡಿಸಿಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ನಡೆದ ಬೃಹತ್ ಪ್ರಮಾಣದ ದಾಳಿ ಇದಾಗಿದೆ. 'ಪೊಲೀಸ್ ನ್ಯೂಸ್' ಈ ಕುರಿತಾಗಿ ಸಮಗ್ರ ಮಾಹಿತಿ ಕಲೆ ಹಾಕಿ ವರದಿ ನೀಡಿದೆ.**



ಪತ್ರಿಕಾಗೋಷ್ಟಿಯಲ್ಲಿ ಗಾಂಜಾ ದಾಳಿಯನ್ನು ವಿವರಿಸುತ್ತಿರುವ ಕಮೀಷನರ್ ಭೂಷಣ ಗುಲಾಬರಾವ ಬೋರಸೆ, ಡಿಸಿಪಿಗಳಾದ ನಾರಾಯಣ ಬರಮನಿ, ನಿರಂಜನ ರಾಜೇ ಅರಸ, ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ

**ಬೆಳಗಾವಿ**
✍ ಮನ್ನಾಪೂರ

ಇತ್ತೀಚಿನ ದಿನಗಳಲ್ಲಿ ಕುಂದಾನಗರಿ ಖ್ಯಾತಿಯ ಬೆಳಗಾವಿಯ ಪರಿಸರದಲ್ಲಿ ಗಾಂಜಾ ಘಮಲು ಸದ್ದಿಲ್ಲದೇ ಪಸರಿಸುತ್ತಿತ್ತು. ಇದರೊಂದಿಗೆ ಮಟ್ಕಾ... ಜೂಜಾಟ ಅಡ್ಡೆಗಳು ಕೂಡ ತಲೆ ಎತ್ತುತ್ತಿವೆ. ಗಾಂಜಾದ ಘಮಲಿಗೆ... ಮಟ್ಕಾ ತೆವಲಿಗೆ ಅನೇಕ ಯುವಕರು ಅಪರಾಧ ಕೃತ್ಯಗಳನ್ನು ಎಸಗುತ್ತಿದ್ದಾರೆ. ಇದರಿಂದ ಸಮಾಜದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಕಾಪಾಡಲು ಪೊಲೀಸರು ಹೆಣಗಾಡಬೇಕಾದ ಸ್ಥಿತಿ ನಿರ್ಮಾಣವಾಗುತ್ತಿದೆ. ಇದೀಗ ಬೆಳಗಾವಿ ಮಹಾನಗರದ ಪೊಲೀಸ್ ಯಂತ್ರಣ ಮೈ ಕೊಡವಿ ಎದ್ದು ನಿಂತಿದೆ. ಗಾಂಜಾ ಮತ್ತು ಮಟ್ಕಾ ಮುಕ್ತ ಬೆಳಗಾವಿ ನಗರವನ್ನಾಗಿ ಮಾಡಲು ಸ್ವತಃ ದಕ್ಷ ಪೊಲೀಸ್ ಕಮೀಷನರ್ ಭೂಷಣ ಗುಲಾಬರಾವ ಬೋರಸೆ ಮುಂದಾಗಿದ್ದಾರೆ.

ಸಮಾಜಘಾತುಕರಿಗೆ, ಕ್ರಿಮಿನಲ್ ಕುಳಗಳಿಗೆ, ಮಟ್ಕಾ, ಜೂಜಾಟಗಾರರಿಗೆ, ಡ್ರಗ್ಸ್ ಪೆಡ್ಲರ್‌ಗಳಿಗೆ, ಗುಂಡಾಗಳಿಗೆ ಸಿಂಹಸ್ವಪ್ನ ಎಂದೆನಿಸಿರುವ ಎನ್‌ಕೌಂಟರ್ ಫೇಮ್ ಡಿಸಿಪಿ (ಕಾ.ಸು) ನಾರಾಯಣ ಬರಮನಿ ಅವರು ಬೆಳಗಾವಿ ನಗರದ ಇಂಚಿಂಚು ಬಲ್ಲವರು. ದಕ್ಷ ಪೊಲೀಸ್ ಕಮೀಷನರ್ ಭೂಷಣ ಬೋರಸೆ ಅವರ ನಿರ್ದೇಶನದಂತೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ನಿರತರಾಗಿದ್ದಾರೆ. ಇವರ ಜತೆಗೆ ಡಿಸಿಪಿ (ಕ್ರೈಂ) ನಂಜರಾಜೇ ಅರಸ, ಹೆಗಲು ಕೊಟ್ಟಿದ್ದಾರೆ. ಇನ್ನುಳಿದಂತೆ ಬೆಳಗಾವಿ ನಗರಕ್ಕೆ ಸಂಬಂಧಿಸಿದಂತೆ ಎಸಿಪಿಗಳಾದ ಸಂತೋಷ ಸತ್ಯ ನಾಯಿಕ (ಮಾರ್ಕೆಟ್ ಉಪವಿಭಾಗ), ಹೆಚ್. ಶೇಖರಪ್ಪ (ಖಡೇಬಜಾರ್ ಉಪವಿಭಾಗ), ಗಂಗಾಧರ (ಗ್ರಾಮೀಣ ಉಪವಿಭಾಗ), ಜೆ. ರಘು (ಸಿಇಎನ್), ಎಸ್.ಆರ್. ಕಟ್ಟಿಮನಿ (ಕ್ರೈಂ) ಮತ್ತು ನಗರದ ಎಲ್ಲಾ ಇನ್ಸ್‌ಪೆಕ್ಟರ್‌ಗಳು, ಪಿಎಸ್‌ಐ ಮತ್ತು ಸಿಬ್ಬಂದಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಇತ್ತೀಚಿಗೆ ಕಮೀಷನರ್ ಬೋರಸೆ ಎಲ್ಲಾ ಅಧಿಕಾರಿಗಳ ಸಭೆ ನಡೆಸಿ ಗಾಂಜಾ, ಮಟ್ಕಾ, ಜೂಜು, ಗುಂಡಾಗಿರಿ ಚಟುವಟಿಕೆಗಳನ್ನು ಮುಲಾಜಿಲ್ಲದೇ ಹತ್ತಿಕ್ಕಬೇಕು. ಇದಕ್ಕಾಗಿ ಯಾರ ಪ್ರಲೋಬನೆಗೆ ಒಳಗಾಗಬೇಡಿ ಎಂದು ಕರೆ ನೀಡಿದ್ದರು.



ಕಮೀಷನರ್ ಭೂಷಣ ಗುಲಾಬರಾವ ಬೋರಸೆ



ಡಿಸಿಪಿ (ಕಾಸು) ನಾರಾಯಣ ವೆಂ. ಬರಮನಿ




ಡಿಸಿಪಿ (ಕ್ರೈಂ) ನಿರಂಜನ ರಾಜೇ ಅರಸ

### ಗಾಂಜಾ-ಮಟ್ಕಾ ಮೀತಿ ಮೀರಿತ್ತು...

ಕುಂದಾನಗರಿ ಬೆಳಗಾವಿಯಲ್ಲಿ ಇತ್ತೀಚಿನ ದಿನಗಳಲ್ಲಿ ಗಾಂಜಾದ ಘಮಲು ಯುವಜನಾಂಗ ಮತ್ತು ನಿರುದ್ಯೋಗಿಗಳನ್ನು ತೀರಾ ಆಕರ್ಷಿಸಿತ್ತು. ಇದರ ಜತೆಗೆ ಮಟ್ಕಾ-ಜೂಜಾಟದಂತಹ ಅನೈತಿಕ ದಂಧೆ ಬೆಳಗಾವಿಯನ್ನು ಬಗ್ಗಡವೆಬ್ಬಿಸಿದ್ದವು. ಕರ್ನಾಟಕ-ಮಹಾರಾಷ್ಟ್ರ-ಗೋವಾ ರಾಜ್ಯಗಳ ಪ್ರಮುಖ ಕೊಂಡಿಯಾಗಿರುವ ಬೆಳಗಾವಿ ನಗರ ಗಾಂಜಾದ ಘಾಟಿಗೆ ನಲುಗತೊಡಗಿತ್ತು. ಕತ್ತಲಾದರೆ ಸಾಕು ಈ ದಂಧೆ ಹೆಡೆ ಬಿಚ್ಚತೊಡಗುತ್ತಿತ್ತು. ಕೆಲವೊಂದು ಸಲ ಹಾಡುಹಗಲೇ ಪೆಡ್ಲರ್‌ಗಳು ರೇಲ್ವೆ ನಿಲ್ದಾಣ, ನಗರದ ಬಸ್ ನಿಲ್ದಾಣ, ಗೂಡಂಗಡಿಗಳು, ಶಾಲಾ, ಕಾಲೇಜಿನ ಬಯಲುಗಳಲ್ಲಿ ಅನಾಯಾಸವಾಗಿ ದಂಧೆ ನಡೆಸುವುದನ್ನೇ ಕಾಯಕವಾಗಿರಿಸಿಕೊಂಡರು. ಬೆಳಗಾವಿ

☞ 14



ಸಿಇಎನ್ ಎಸಿಪಿ ಜೆ. ರಘು



ಸಿಇಎನ್ ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ




50 ಕೆಜಿ ಗಾಂಜಾ ಜಪ್ತಿ ಮಾಡಿಕೊಂಡ ಸಿಇಎನ್ ಪೊಲೀಸ್ ತನಿಖಾ ತಂಡದವರು

## ಇನ್ಸ್‌ಪೆಕ್ಟರ್ ಗಡ್ಡೇಕರ ತಂಡದ ಕಾರ್ಯ ಶ್ಲಾಘನೀಯ...

ಬೆಳಗಾವಿ ಮಹಾನಗರದಲ್ಲಿ ಗಾಂಜಾ ಸೇರಿದಂತೆ ಮತ್ತಿತರ ಮಾದಕ ವಸ್ತುಗಳ ಮಾರಾಟ ಹಾಗೂ ಸೇವನೆ ಕಳೆದ ಸುಮಾರು ದಿನಗಳಿಂದಲೂ ಮಿತಿ ಮೀರಿತ್ತು. ಇಂತಹ ಕರಾಳ ದಂಧೆಯನ್ನು ಮಟ್ಟಾ ಹಾಕುವಲ್ಲಿ ಸಿಇಎನ್ ಅಪರಾಧ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ ಮತ್ತವರ ತಂಡ ಸುಮಾರು ದಿನಗಳಿಂದ ಖಚಿತ ಮಾಹಿತಿ ಆಧರಿಸಿ ಮುಂಬೈ ಸೇರಿದಂತೆ ವಿವಿಧ ನಗರಗಳಿಗೆ ತೆರಳಿ ಮಾಹಿತಿ ಕಲೆ ಹಾಕಿತ್ತು. ಮೊದಲು ದಾಖಲಾಗಿದ್ದ ಸಣ್ಣ ಪ್ರಕರಣದ ಬೆನ್ನು ಬಿದ್ದ ಧಾಡಸಿ ಹಾಗೂ ಚತುರ ಪೊಲೀಸ್ ಅಧಿಕಾರಿಯಾದ ಬಿ.ಆರ್. ಗಡ್ಡೇಕರ ಅವರ ತಂಡ ಮಾಹಿತಿ ಕಲೆಹಾಕುವಲ್ಲಿ ಯಶಸ್ವಿಯಾಗಿದೆ. ನಂತರ ಚಾಣಾಕ್ಷ ಹಾಗೂ ಧಾಡಸಿ ಕಾರ್ಯಾಚರಣೆ ನಡೆಸಿ ಗಾಂಜಾ ಮಾರಾಟದ ಕಿಂಗ್ ಪಿನ್ ಸೇರಿದಂತೆ ಒಂಬತ್ತು ಜನ ಆರೋಪಿಗಳನ್ನು ಬಂಧಿಸಿ ಅವರಿಂದ 50 ಕೆಜಿ ಗಾಂಜಾ ಹಾಗೂ ಎರಡು ಕಾರು, ಒಂದು ಮಚ್ಚು, 13 ಮೊಬೈಲ್‌ಗಳು ಮತ್ತು 4 ಸಾವಿರ ನಗದು ಹಣ ವಶಪಡಿಸಿಕೊಂಡು ಕರ್ತವ್ಯ ದಕ್ಷತೆ ಮೆರೆದಿದ್ದಾರೆ. ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ ಅವರ ತಂಡದ ಕರ್ತವ್ಯ ದಕ್ಷತೆಯನ್ನು ಪೊಲೀಸ್ ಕಮೀಷನರ್ ಭೂಷಣ ಗುಲಾಬರಾವ ಬೋರಸೆ, ಕಾನೂನು, ಸುವ್ಯವಸ್ಥೆಯ ಡಿಸಿಪಿ ನಾರಾಯಣ ಬರಮನಿ, ಕ್ರೈಂ ಡಿಸಿಪಿ ನಿರಂಜನ ರಾಜೆ ಅರಸ ಶ್ಲಾಘಿಸಿದ್ದಾರೆ. ಅದರಂತೆ ಬೆಳಗಾವಿಯ ಪ್ರಜ್ಞಾವಂತ ನಾಗರೀಕರು ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ ಮತ್ತು ತಂಡದ ಕಾರ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ☯

13 ☞ ನಗರದ ಕೆಲವು ಚತುರ ಮತ್ತು ಧಾಡಸಿ ಪೊಲೀಸ್ ಅಧಿಕಾರಿಗಳು ದಾಳಿ ಮಾಡಿದಾಗ ಸಿಗುತ್ತಿದ್ದ ಪುಡಿ ವ್ಯಾಪಾರಿಗಳು ತಮ್ಮ ಕರಾಳ ದಂಧೆಯ ಅಸಲಿ ಹಕೀಕತ್ ಕುರಿತು ಬಾಯಿ ಬಿಡುತ್ತಿರಲಿಲ್ಲ.

ವಾಸಿಯಾಗಿದ್ದಾರೆ. ಅಪಾಯವನ್ನು ಸವಾಲಿನಂತೆ ಸ್ವೀಕರಿಸಿ ಮುನ್ನುಗ್ಗುಬಲ್ಲಛಾತಿಯ ಬಿ.ಆರ್. ಗಡ್ಡೇಕರ ಅವರು ಇದೀಗ ಎರಡನೇ ಬಾರಿಗೆ ಸಿಇಎನ್ ಅಪರಾಧ ಠಾಣೆಯಲ್ಲಿ ಅಧಿಕಾರದಲ್ಲಿದ್ದಾರೆ. ಈ ಹಿಂದೆ ಗಾಂಜಾ ಪೆಡ್ಲರ್‌ಗಳು ಸೇರಿದಂತೆ, ಸುಮಾರು ಸೈಬರ್ ವಂಚಕರನ್ನು ಹುಡುಕಿ... ಹುಡುಕಿ ಬಂಧಿಸಿ ಕ್ರಮ ಕೈಗೊಂಡಿದ್ದಾರೆ. ಅತ್ಯಂತ ಅಪಾಯಕಾರಿ ಸೈಬರ್ ವಂಚಕರ ನೆಲೆಬೀಡಾದ ಜಮತಾರಾ ಪ್ರದೇಶಕ್ಕೆ ತೆರಳಿ ಜೀವದ ಹಂಗು ದೊರೆದು ವಂಚಕರ ಹೆಡೆಮುರಿಕಟ್ಟಿದ ಇವರೆಂದರೆ ಡಿಸಿಪಿ (ಕಾ.ಸು) ನಾರಾಯಣ ಬರಮನಿ ಅವರಿಗೆ ಎಲ್ಲಿಲ್ಲದ ಪ್ರೀತಿ.


ಸಿಇಎನ್ ಕ್ರೈಂ ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ ಅವರ ತಂಡದವರ ಯಶಸ್ವಿ ಕಾರ್ಯಾಚರಣೆಯನ್ನು ಶ್ಲಾಘಿಸುತ್ತಿರುವ ಕಮೀಷನರ್ ಭೂಷಣ ಬೋರಸೆ

ಇತ್ತೀಚಿಗೆ ಬೆಳಗಾವಿ ಮಹಾನಗರಕ್ಕೆ ನೂತನ ಪೊಲೀಸ್ ಕಮೀಷನರ್ ಆಗಿ ಭೂಷಣ ಗುಲಾಬರಾವ ಬೋರಸೆ, ಯಾವಾಗ ಬಂದರೋ ಆಗ ಬೆಳಗಾವಿ ನಗರದ ಪೊಲೀಸ್ ಯಂತ್ರಾಂಗವೇ ಸಂಪೂರ್ಣ ಅಲರ್ಟ್ ಆಗಿದೆ. ಇವರೊಂದಿಗೆ ಚತುರ ಮತ್ತು ಧಾಡಸಿ ಎನ್‌ಕೌಂಟರ್ ಫೇಮ್ ಡಿಸಿಪಿ ನಾರಾಯಣ ಬರಮನಿ ಹೆಗಲಿಗೆ ಹೆಗಲು ಜೋಡಿಸಿದರು. ಕಳೆದ 20 ವರ್ಷಗಳಿಂದ ಬೆಳಗಾವಿ ಮಹಾನಗರದಲ್ಲಿನ ಅಕ್ರಮ ಚಟುವಟಿಕೆಗಳ ಸಂಪೂರ್ಣ ಮಾಹಿತಿ ಡಿಸಿಪಿ ಬರಮನಿ ಅಂಗೈಯಲ್ಲಿರಿಸಿಕೊಂಡಿದ್ದರು. ಮತ್ತು ಮಹತ್ವದ ಕಾರ್ಯಾಚರಣೆ ಕೂಡಾ ನಡೆಸಿದ್ದರು. ಏನಾದರೂ ಸರಿ ಸಂಪೂರ್ಣ ಬೆಳಗಾವಿ ಮಹಾನಗರವನ್ನು ನಶೆಮುಕ್ತ... ಮಟಕಾ-ಜೂಜಾಟ ಮುಕ್ತ ನಗರವನ್ನಾಗಿ ಮಾಡುವ ಪಣ ತೊಟ್ಟು ಕಮೀಷನರ್ ಬೋರಸೆ, ಡಿಸಿಪಿ (ಕಾ.ಸು) ನಾರಾಯಣ ಬರಮನಿ, ಕ್ರೈಂ ಡಿಸಿಪಿ ನಿರಂಜನ ರಾಜೇ ಅರಸ ಅವರ ನಿರ್ದೇಶನದಲ್ಲಿ ವಿಶೇಷ ಅಭಿಯಾನ ಆರಂಭಿಸಿದ್ದಾರೆ. ಇದರಿಂದ ಅಕ್ರಮ ದಂಧೆಕೋರರಿಗೆ ನಡುಕ ಶುರುವಾಗಿದೆ. ಬೆಳಗಾವಿಯಲ್ಲಿ ಇದೀಗ ಖಾಕಿ ಪಡೆ ತುಂಬಾ ಅಲರ್ಟ್ ಆಗಿದೆ. ಶಾಲಾ ಕಾಲೇಜುಗಳಿಗೆ ಪತ್ರ ಬರೆದು ಆ್ಯಂಟಿ ಡ್ರಗ್ ಕಮೀಟಿಗಳನ್ನು ರಚಿಸುವಂತೆ ನಿರ್ದೇಶನ ನೀಡಲಾಗಿದೆ. ಮಾದಕ ವಸ್ತುಗಳ ಮಾರಾಟ, ಸಾಗಾಟ ತಡೆಗೆ ಸೂಕ್ತ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವಂತೆ ಅಧೀನ ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

**ಈ ನಡುವೆ 5 ಕೆಜಿ ಗಾಂಜಾ ಜಪ್ತಿ...**

ಬೆಳಗಾವಿ ಮಹಾನಗರದ ಸಿಇಎನ್ ಅಪರಾಧ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ ತುಂಬಾ ಚತುರ ಮತ್ತು ಧಾಡಸಿ ಕಾರ್ಯಾಚರಣೆಗೆ ಹೆಸರು

## ನಗದು ಬಹುಮಾನ... ಪದಕಕ್ಕೆ ಶಿಫಾರಸ್ಸು...

ಸಿಇಎನ್ ಅಪರಾಧ ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ ಮತ್ತು ತಂಡದವರು ಯಶಸ್ವಿ ಕಾರ್ಯಾಚರಣೆ ನಡೆಸಿ ಇತ್ತೀಚಿನ ದಿನಗಳಲ್ಲಿ ಬೃಹತ್ ಪ್ರಮಾಣದ ಅಮಲು ಪದಾರ್ಥ 50 ಕೆಜಿ ಗಾಂಜಾ ವಶಪಡಿಸಿಕೊಂಡು ಸಂಪೂರ್ಣ ಗಾಂಜಾ ದಂಧೆಕೋರರ ಅಡ್ಡೆಯನ್ನೇ ಉದ್ವಸ್ಥಗೊಳಿಸಿದ್ದಾರೆ. ಅದಕ್ಕಾಗಿ ಕಮೀಷನರ್ ಭೂಷಣ ಗುಲಾಬರಾವ ಬೋರಸೆ ಅವರು ನಗದು ಬಹುಮಾನವನ್ನು ಇಡೀ ತಂಡಕ್ಕೆ ಘೋಷಣೆ ಮಾಡುವುದಲ್ಲದೇ ಅತ್ಯುತ್ತಮ ಕರ್ತವ್ಯ ನಿರ್ವಹಣೆಗಾಗಿ ಪದಕಕ್ಕೂ ಕೂಡಾ ಶಿಫಾರಸ್ಸು ಮಾಡಲಾಗುವುದು ಎಂದು ತಿಳಿಸಿದ್ದಾರೆ. ಈ ಹಿಂದೆ ಪಿಎಸ್ಐ ಆಗಿದ್ದಾಗಲೇ ಬಿ.ಆರ್. ಗಡ್ಡೇಕರ ಅವರು ಅತ್ಯುತ್ತಮವಾಗಿ ಕರ್ತವ್ಯ ನಿರ್ವಹಿಸಿ ಮುಖ್ಯಮಂತ್ರಿಗಳ ಚಿನ್ನದ ಪದಕಕ್ಕೆ ಭಾಜನರಾಗಿದ್ದಾರೆ. ☯

ಅಂದು ಜೂನ್ 29. ಸಿಇಎನ್ ಅಪರಾಧ ಠಾಣೆಯ ವಿಶ್ವಸನೀಯ ಚಾಣಾಕ್ಷ ಸಿಬ್ಬಂದಿಗಳು ಅತ್ಯಂತ ಖಚಿತವಾದ ಮಾಹಿತಿಯೊಂದನ್ನು ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ ಅವರಿಗೆ ತಿಳಿಸಿದರು. ತಕ್ಷಣ ಅಲರ್ಟ್ ಆದ ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ ಅವರ ನಿರ್ದೇಶನದಂತೆ ಕಾರ್ಯಾಚರಣೆಗೆ ವ್ಯೂಹ ರಚಿಸಿದರು. ಅಂದುಕೊಂಡಂತೆ ಕಾಕತಿ ಪೊಲೀಸ್ ಠಾಣೆ ವ್ಯಾಪ್ತಿಯ ಚಿಗರಿಮಾಳ ಎಂಬಲ್ಲಿ ಗಾಂಜಾ ಮಾರಾಟ ಮಾಡಲು ಬಂದಿದ್ದ 1) ತಾಜೀಬ ಅಬ್ದುಲ್ ರಜಾಕ್ ಮುಲ್ಲಾ ಸಾ. ಮಲ್ಲಾಪೂರ (ಪಿಜಿ) ತಾ॥ ಗೋಕಾಕ, ಹಾಲಿವಸ್ತಿ ಮುಲ್ಲಾ ಪ್ಲಾಟ್ ಚಿಕ್ಕೋಡಿ, 2) ಅನುರಾಗ ಉದಯಕುಮಾರ ಯರನಾಳಕರ ಹೌಸಿಂಗ್ ಕಾಲನಿ ಸಂಕೇಶ್ವರ ತಾ॥ ಹುಕ್ಕೇರಿ ಇವರಿಬ್ಬರನ್ನು ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ ಮತ್ತವರ ತಂಡ ವಶಕ್ಕೆ ಪಡೆದುಕೊಂಡು ಅವರಿಂದ 5 ಕೆಜಿ 562 ಗ್ರಾಂ ಒಣಗಾಂಜಾ, 4 ಮೊಬೈಲ್, ಒಂದು ಮೋಟಾರ್ ಬೈಕ್ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡಿದ್ದರು. ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ಬಿ.ಆರ್. ಗಡ್ಡೇಕರ ಮತ್ತವರ ತಂಡ ಆರೋಪಿಗಳನ್ನು ತೀವ್ರ ವಿಚಾರಣೆಗೆ ಒಳಪಡಿಸಿದಾಗ ಸದ್ದಾಂ ಅ॥ ಇಸ್ಮಾಯಿಲ್ ಸಯ್ಯದ್, ಕಣಗಲಾ ತಾ॥ ಹುಕ್ಕೇರಿ ಮತ್ತು ತಾಜೀಬ್ ಗುಡುಸಾಬ ಬಸ್ತವಾಡೆ ಕಣಗಲಾ ತಾ॥ ಹುಕ್ಕೇರಿ ಎಂಬಿಬ್ಬರೇ ಕಿಂಗ್‌ಪಿನ್‌ಗಳು ಎಂದು ಬಾಯಿ ಬಿಟ್ಟರು.

**ಗಾಂಜಾ ಕಿಂಗ್‌ಪಿನ್‌ಗಳ ಶೋಧನೆಗೆ...**

ಸಿಇಎನ್ ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ ಸುಮ್ಮನೇ ಕುಳಿತುಕೊಳ್ಳುವ ಜಾಯಮಾನದವರಲ್ಲ. ಜೂನ್ 30ನೇ ತಾರೀಖಿನಿಂದ ಅವರ ಅಸಲಿ ಕಾರ್ಯಾಚರಣೆ ಆರಂಭಗೊಂಡಿತು. ಸಿಇಎನ್ ಎಸಿಪಿ ಜೆ. ರಘು ಸೇರಿದಂತೆ ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ನ್ಯಾಯಾಲಯ ದಿಂದ ಸರ್ಚ್ ವಾರೆಂಟ್ ಪಡೆದು ಸದ್ದಾಂ ಅಲಿಯಾಸ್ ಇಸ್ಮಾಯಿಲ್ ಸಯ್ಯದ್ ಮತ್ತು ತಾಜೀರ್ ಗುಡುಸಾಬ ಬಸ್ತವಾಡೆಯ ಬೆನ್ನುಬಿದ್ದ ಇನ್ಸ್‌ಪೆಕ್ಟರ್ ಗಡ್ಡೇಕರ ಮತ್ತವರ ತಂಡ ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿದರು. ಸಿಕ್ಕ ಸಿಕ್ಕ ಸಣ್ಣ ಪುಟ್ಟ ಮಾಹಿತಿಗಳನ್ನೇ ಮೈಲುಗಲ್ಲಾಗಿರಿಸಿಕೊಂಡು ಗಾಂಜಾ ಕಿಂಗ್‌ಪಿನ್‌ಗಳ ಸಂಪೂರ್ಣ ಕುಂಡಲಿ ಸಿದ್ದಪಡಿಸಿದರು. ಕಿಂಗ್‌ಪಿನ್‌ಗಳ ಸಂಬಂಧಿಕರು ಮತ್ತು ಸ್ನೇಹಿತರು ಹಾಗೂ ಹಳೆಯ ಕಸಬುದಾರರನ್ನು ಸಂಪರ್ಕಿಸಿದರು. ಎಲ್ಲಿಯೂ ಇವರ ಪತ್ತೆ ಸಾಧ್ಯವಾಗಲಿಲ್ಲ. ಊರೂರು ಅಲೆದು ಮಾಹಿತಿ ಸಂಗ್ರಹಿಸಿದರು. ಅದಾಗಲೇ ಕಿಂಗ್‌ಪಿನ್‌ಗಳು ತಲೆಮರೆಸಿಕೊಂಡು ಬಿಟ್ಟಿದ್ದರು.

**ಮುಂಬೈನಲ್ಲಿ ಕಿಂಗ್‌ಪಿನ್ ಮಾವನ ಬಂಧನ...**

ಬೆಳಗಾವಿ ಮಹಾನಗರದಲ್ಲಿ ತನ್ನ ಪೆಡ್ಲರ್‌ಗಳ ಮೂಲಕ ಗಾಂಜಾ ಪೂರೈಸುತ್ತಿದ್ದ ಸದ್ದಾಂ ಸಯ್ಯದ್‌ನ ಹೆಂಡತಿಯ ತಂದೆ ಅಬ್ದುಲ್ ಮಜೀದ ಅಬ್ದುಲ್ ಸತ್ತಾರ ಮುಖಾದಮ್‌ನ ಆಶ್ರಯದಲ್ಲಿ ಕಿಂಗ್‌ಪಿನ್ ಇರಬೇಕೆಂಬ ಸಂದೇಹದಲ್ಲಿ ಸಿಇಎನ್ ಇನ್ಸ್‌ಪೆಕ್ಟರ್ ಗಡ್ಡೇಕರ ತಂಡ ಮುಂಬೈನ ಲಲ್ಲುಬಾಯಿ ಕಂಪೌಂಡ್‌ನ ಕೃಷ್ಣಾ ಅಪಾರ್ಟ್‌ಮೆಂಟ್ ಪ್ಲಾಟ್ ನಂ.507ಕ್ಕೆ ದಾಂಗುಡಿ ಇಟ್ಟು ಹುಡುಕಿದರು ಕಿಂಗ್‌ಪಿನ್ ಸಿಗಲಿಲ್ಲ. ಮುಂಬೈನ ಮುಖಾದಮ್ ಮನೆಯಲ್ಲಿ 2 ಕೆಜಿ 16 ಗ್ರಾಂ ಗಾಂಜಾ ಸಿಕ್ಕಿತು. ಅದನ್ನು ಜಪ್ತಿ ಮಾಡಿಕೊಂಡು ಬೆಳಗಾವಿಗೆ ತಂದು ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ ನ್ಯಾಯಾಧೀಶರು ಹಿಂಡಲಗಾ ಜೈಲಿಗೆ ಕಳಿಸಿ ಎಂದು ಆದೇಶ ಮಾಡಿದರು.

ದಿನಾಂಕ 21-07-2025ರಂದು ಕಿಂಗ್‌ಪಿನ್ ಆಗಿದ್ದ ಸದ್ದಾಂನ ಮಾವ ಅಬ್ದುಲ್ ಮಜೀದ್ ಅಬ್ದುಲ್ ಸತ್ತಾರ, ಮುಖಾದಮ್‌ನನ್ನು ಸಿಇಎನ್ ಪೊಲೀಸರು ವಶಕ್ಕೆ ಪಡೆದು ತೀವ್ರ ವಿಚಾರಣೆಗೆ ಒಳಪಡಿಸಿದಾಗ ಅತ್ಯಂತ ಆಘಾತಕಾರಿಯಾದ ವಿಷಯಗಳನ್ನು ಬಾಯಿ ಬಿಟ್ಟನು. ಸದರಿ ಮಾಹಿತಿಯನ್ನು ಕಮೀಷನರ್ ಭೂಷಣ ಗುಲಾಬರಾವ ಬೋರಸೆ, ಕಾನೂನು ಸುವ್ಯವಸ್ಥೆಯ ಡಿಸಿಪಿ ನಾರಾಯಣ ಬರಮನಿ, ಕ್ರೈಂ ಡಿಸಿಪಿ ನಿರಂಜನ ರಾಜೇ ಅರಸ, ಸಿಇಎನ್ ಎಸಿಪಿ ಜೆ. ರಘು ಅವರೊಂದಿಗೆ ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ ವಿವರಿಸಿ ಅವರಿಂದ ಅತ್ಯಂತ ಸೂಕ್ತ ನಿರ್ದೇಶನಗಳನ್ನು ಪಡೆದುಕೊಂಡು ಗಾಂಜಾ ಕಿಂಗ್‌ಪಿನ್‌ಗಳ ಪತ್ತೆಗೆ ವ್ಯಾಪಕವಾದ ಜಾಲವನ್ನು ಬೀಸಿ ಕಾಯ್ದು ಕುಳಿತಿದ್ದರು. ಇದರಲ್ಲಿ ಕಿಂಗ್‌ಪಿನ್ ಆಗಿದ್ದ ಸದ್ದಾಂ ಮಹಾ ಕ್ರಿಮಿನಲ್. ಈತ ಎಲ್ಲೆಲ್ಲಿಂದ ಗಾಂಜಾ ತರಿಸಿ ಪೂರೈಕೆ ಮಾಡುತ್ತಿದ್ದನು ಎಂಬುದು ಆತನ ಬಂಧನವಾಗುವತನಕ ನಿಗೂಢವಾಗಿತ್ತು.

**ಜೈಲಿನಲ್ಲಿದ್ದ ಮಾವನ ಭೇಟಿಗೆಂದು...**

ಅಂದುಕೊಂಡ ಹಾಗೇ ಸಿಇಎನ್ ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ ತಂಡದ ಕೆಲವು ಜನ ಚತುರ ಸಿಬ್ಬಂದಿಗಳು ತಿಂಗಳುಗಟ್ಟಲೇ ಅಂಡಲೆಂದು ಗಾಂಜಾ ಕಿಂಗ್‌ಪಿನ್‌ಗಳ ಮಾಹಿತಿ ಸಂಗ್ರಹಿಸಿದ್ದರು. ಇತ್ತೀಚಿಗೆ ಬೆಳಗಾವಿಯ ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿದ್ದ ಕ್ರಿಮಿನಲ್ ಮಾವ ಮುಖಾದ್ದಮ್‌ನನ್ನು ಭೇಟಿ ಆಗಲು ಸದ್ದಾಂ ಅಲಿಯಾಸ್ ಇಸ್ಮಾಯಿಲ್ ಸಯ್ಯದ್ ಬರುವರಿದ್ದಾರೆ ಎಂಬ ಮಾಹಿತಿ ಸಿಇಎನ್ ಇನ್ಸ್‌ಪೆಕ್ಟರ್ ಗಡ್ಡೇಕರ ತಂಡಕ್ಕೆ ದೊರಕಿತ್ತು. ಅದರಂತೆ ಅಲರ್ಟ್ ಆಗಿದ್ದ ಇವರು ಮೂರ್‍ನಾಲ್ಕು ತಂಡಗಳಾಗಿ ಕ್ರಿಮಿನಲ್ ಕಿಂಗ್ ಪಿನ್‌ಗಳ ಬಂಧನಕ್ಕೆ ಕಾಯ್ದು ಕುಳಿತಿದ್ದರು.



ಗಾಂಜಾ ಪೂರೈಸುತ್ತಿದ್ದ ಎರಡು ಕಾರು ಮತ್ತು ಅದರಲ್ಲಿದ್ದ 30 ಲಕ್ಷ ರೂ. ಬೆಲೆಯ ಗಾಂಜಾ ವಶಪಡಿಸಿಕೊಂಡಿರುವ ಸಿಇಎನ್ ಪೊಲೀಸರ ತಂಡ

ದಿನಾಂಕ 21-08-2025ರಂದು ಖಚಿತ ಮಾಹಿತಿ ಪಡೆದುಕೊಂಡ ಸಿಇಎನ್ ಅಪರಾಧ ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಆರ್.ಗಡ್ಡೇಕರ ಅವರು ತಮ್ಮ ತಂಡದ ಸದಸ್ಯರಾದ ಎಎಸ್ಐಗಳಾದ ಎಸ್.ಎಂ. ಶಿಂಧೆ, ಎಲ್.ಎಸ್. ಚಿನಗುಂದಿ, ಮುಖ್ಯಪೇದೆಗಳಾದ ವಿ.ಎನ್. ಬಡವನ್ನವರ್, ಎಸ್.ಎಲ್. ಅಜ್ಜಪ್ಪನವರ, ಎನ್.ಜೆ. ಮಾದರ, ಎಂ.ಡಿ. ಯಾದವಾಡ, ಎಂ.ಎಲ್. ಕೋನ್ಯಾಗೋಳ, ಕೆ.ಎಂ. ನಿಗಡಿ, ಗಂಗಾಧರ ಜ್ಯೋತಿ, ಪೇದೆಗಳಾದ ಯಾಸೀನ್ ನದಾಫ, ಸಿ.ಬಿ. ದಾಸರ, ಅಜಿಂಕ್ಯ ಜಬಡೆ, ಉದ್ಯಮ ಭಾಗ ಪೊಲೀಸ್ ಠಾಣೆಯ ಬಿ.ಬಿ. ಕುಂಚನೂರ, ಕ್ಯಾಂಪ್ ಪೊಲೀಸ್ ಠಾಣೆಯ ಜೆ.ಎಸ್. ಲಮಾಣಿ, ಟಿಳಕವಾಡಿಯ ಸತೀಶ ಗಿರಿ, ಖಡೇಬಜಾರದ ಸಂತೋಷ ಬರಗಿ, ಕಮೀಷನರ್ ಕಚೇರಿಯ ಟೆಕ್ನಿಕಲ್ ಶಾಖೆಯ ಸಿಬ್ಬಂದಿಗಳು ರಮೇಶ ಅಕ್ಕಿ, ಮಹಾದೇವ ಕಾಶೀದ್ ಅವರನ್ನೊಳಗೊಂಡ ಒಂದು ತಂಡಕ್ಕೆ ನೇತೃತ್ವ ವಹಿಸಿಕೊಂಡು ಸಿದ್ದರಾದರು.

**ಕಿಂಗ್‌ಪಿನ್ ಸಮೇತ 6 ಜನರು ಬಲೆಗೆ...**

ಸಿಇಎನ್ ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ ಮತ್ತು ಸಿಬ್ಬಂದಿಗಳು ಬೆಳಗಾವಿ ಮಹಾನಗರದ ಸುಳಗಾ ಗ್ರಾಮದ ಹದ್ದಿಯ ಚಂದಗಡ-ಬೆಳಗಾವಿ ರಸ್ತೆಯ 'ಸೇಮ್ ಪ್ಲೇಸ್' ದಾಬಾದ ಬಳಿ ಬರುತ್ತಿದ್ದ ನೀಲಿ ಬಣ್ಣದ ಮಾರುತಿ ಸ್ವಿಪ್ಟ್ ಕಾರು, ಮತ್ತೊಂದು ವ್ಯಾಗ್ನಾರ್ ಕಾರಿನ ನಂಬರ್ ಗುರುತಿಸಿ ಕಾರುಗಳನ್ನು ತಡೆದು ನಿಲ್ಲಿಸಲು ಯತ್ನಿಸಿದಾಗ ಕಾರುಗಳನ್ನು ನಿಲ್ಲಿಸದೇ ತಪ್ಪಿಸಿಕೊಂಡು ಹೋಗಲು ಯತ್ನಿಸಿದಾಗ ಸಿಇಎನ್ ಪೊಲೀಸರ ತಂಡ ಅದನ್ನು ವಿಫಲಗೊಳಿಸಿ ಎರಡು ಕಾರಿನಲ್ಲಿದ್ದ ಆರು ಜನರನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದಾಗ ಅಲ್ಲಿದ್ದವರಲ್ಲಿ ಗಾಂಜಾ ಕಿಂಗ್‌ಪಿನ್ ಸದ್ದಾಂ ಅಲಿಯಾಸ್ ಇಸ್ಮಾಯಿಲ್ ಸಯ್ಯದ್ (35) ಮತ್ತು ತಾಜೀರ್ ಗುಡುಸಾಬ ಬಸ್ತವಾಡೆ (29) ಇಬ್ಬರೂ ಕಣಗಲಾ ಗ್ರಾಮದವರು. ಮಹಾರಾಷ್ಟ್ರದ ಗಡಹಿಂಗ್ಲಜ ತಾಲ್ಲೂಕಿನ ಮಹಾಗಾಂವದ ಪ್ರಥಮೇಶ ದಿಲೀಪ ಲಾಡ್ (29), ಕಣಗಲಾ ಗ್ರಾಮದ ತೇಜಸ್ ಭೀಮರಾವ ವಾಜಿದ (21), ಶಿವಕುಮಾರ ಬಾಳಕೃಷ್ಣ ಅಸಬೆ (29) ರಮಜಾನ್ ದಸ್ತಗೀರ ಜಮಾದಾರ ಸೇರಿದ್ದರು.

ಕಾರುಗಳನ್ನು ಪರಿಶೀಲಿಸಲಾಗಿ ಅದರಲ್ಲಿ ಮಾರಾಟಕ್ಕೆಂದು ತಂದಿದ್ದ 42 ಕೆಜಿ 730 ಗ್ರಾಂ ಗಾಂಜಾ, ಡಿಜಿಟಲ್ ಹ್ಯಾಂಗರ್ ತಕ್ಕಡಿ, ಮಚ್ಚು, ಸರ್ಜಿಕಲ್ ಬ್ಲೇಡ್ ಸೇರಿದಂತೆ 10 ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಯಿತು. ಈ ಮೊದಲೇ ಅಬ್ದುಲ್ ರಜಾಕ್ ಮುಲ್ಲಾ, ಉದಯಕುಮಾರ ಯಾರನಾಳಕರ, ಮುಂಬೈನ ಅಬ್ದುಲ್ ಮಜೀದ್ ಮುಖಾದಮ್‌ನನ್ನು ಬಂಧಿಸಿ ಅವರಿಂದ ಗಾಂಜಾ ಜಪ್ತಿ ಮಾಡಿಕೊಂಡು ಜೈಲಿಗಟ್ಟಲಾಗಿತ್ತು. ಇದುವರೆಗೆ ಗಾಂಜಾ ಪ್ರಕರಣದಲ್ಲಿ 30 ಲಕ್ಷ ರೂ. ಬೆಲೆಬಾಳುವ 50 ಕೆಜಿಗಿಂತ ಹೆಚ್ಚು ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಇಲ್ಲಿ ಸಿಇಎನ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ ಅವರ ಯಶಸ್ವಿ ಕಾರ್ಯಾಚರಣೆಗೆ ಕಮೀಷನರ್ ಭೂಷಣ ಗುಲಾಬರಾವ ಬೋರಸೆ, ಕಾನೂನು, ಸುವ್ಯವಸ್ಥೆ ಡಿಸಿಪಿ ನಾರಾಯಣ ಬರಮನಿ, ಕ್ರೈಂ ಡಿಸಿಪಿ ನಿರಂಜನ ರಾಜೇ ಅರಸ, ಸಿಇಎನ್ ಎಸಿಪಿ ಜೆ. ರಘು ಸೂಕ್ತ ನಿರ್ದೇಶನ ನೀಡಿದ್ದರು. ಇದುವರೆಗೆ ಬೆಳಗಾವಿ ನಗರದಲ್ಲಿ ನಡೆದ ಬೃಹತ್ ಪ್ರಮಾಣದ ಗಾಂಜಾ ದಾಳಿ ಇದಾಗಿದ್ದು, ಇನ್ಸ್‌ಪೆಕ್ಟರ್ ಬಿ.ಆರ್. ಗಡ್ಡೇಕರ ಅವರ ತಂಡದ ಕರ್ತವ್ಯ ದಕ್ಷತೆಗೆ ಬೆಳಗಾವಿಗರು ಫುಲ್ ಖುಷ್ ಆಗಿದ್ದಾರೆ. ☯

## ಗಾಂಜಾ ಜತೆಗೆ ಹೆರಾಯಿನ್ ಸಪ್ಲೈ ಮಾಡ್ತಿದ್ದ ಆರೋಪಿ

ಬೆಳಗಾವಿ ನಗರಕ್ಕೆ ಗಾಂಜಾ ಪೂರೈಸುತ್ತಿದ್ದ ಮುಖ್ಯ ಆರೋಪಿ ಸದ್ದಾಂ ಅಲಿಯಾಸ್ ಇಸ್ಮಾಯಿಲ್ ಸಯ್ಯದ್ ಸಿಕ್ಕಿ ಬಿದ್ದಿದ್ದಾನೆ. ಈತ ತನ್ನ ಸಹಚರರೊಂದಿಗೆ ಬೆಳಗಾವಿಗೆ ಗಾಂಜಾ ಕಳುಹಿಸಿ ಕೊಡುತ್ತಿದ್ದನು. ಬೆಳಗಾವಿ ನಗರ, ಬೆಳಗಾವಿ ಜಿಲ್ಲೆ, ಹುಬ್ಬಳ್ಳಿ-ಧಾರವಾಡ, ಬೆಂಗಳೂರು, ಗೋವಾ ಸೇರಿದಂತೆ ವಿವಿಧ ಕಡೆಗೆ ಗಾಂಜಾ ಪೂರೈಸುತ್ತಿದ್ದನು. ಸದ್ದಾಂ ವಿರುದ್ಧ ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಪುಣೆಯಲ್ಲಿ ಹಲವು ಪ್ರಕರಣಗಳು ದಾಖಲಾಗಿವೆ. ಪುಣೆ ಹಾಗೂ ಮುಂಬೈನಿಂದ ಮಾದಕ ವಸ್ತು ಹೆರಾಯಿನ್ ಸರಬರಾಜು ಮಾಡುತ್ತಿದ್ದನು. ಪುಷ್ಪಾ ಸಿನಿಮಾ ನೋಡಿಕೊಂಡು ಇವರಲ್ಲಿಯೇ ಕೆಲವು ಗ್ಯಾಂಗ್‌ಗಳು ಆಗಿದ್ದವು. ಇಂಟರ್ ಗ್ಯಾಂಗ್ ಕಲಹ ಶುರುವಾಗಿತ್ತು. ಇಲ್ಲಿಯ ಕೆಲವು ಪೆಡ್ಲರ್ಸ್‌ಗಳು ನೇರವಾಗಿಯೇ ಮಧ್ಯಪ್ರದೇಶ ಹಾಗೂ ಓರಿಸ್ಸಾದಿಂದ ಗಾಂಜಾ ತಂದು ಮಾರಾಟ ಮಾಡುತ್ತಿದ್ದರು ಎಂದು ಪೊಲೀಸ್ ಕಮೀಷನರ್ ಭೂಷಣ ಬೋರಸೆ ತಿಳಿಸಿದರು. ☯

# ಲವ್ಲಿ ಹೀರೋ 'ಕೋಕಿಲ' ಮೋಹನ್....

ಸಿನಿ ಪ್ರೇಮಿಗಳಿಗೆ 'ಮೋಹನ್' ಎಂದರೆ ಯಾರು ಎಂದು ತಕ್ಷಣ ಹೊಳೆಯುವುದಿಲ್ಲ. ಅದೇ ಕೋಕಿಲ ಮೋಹನ್ ಅಂದರೆ ಎಲ್ಲರ ಆಂತರ್ಯ ಅರಳುತ್ತದೆ.




ಕನ್ನಡದ ಈ ಹುಡುಗನಷ್ಟು ದಕ್ಷಿಣ ಭಾರತದ ಅಸಂಖ್ಯಾತ ಚಿತ್ರಗಳಲ್ಲಿ ಯಶಸ್ಸು ಪಡೆದು ತನ್ನ ಪಾಡಿಗೆ ಮೌನಲೋಕ ದಲ್ಲಿರುವ ಮತ್ತೊಬ್ಬ ನಟನಿಲ್ಲ!

ಮೋಹನ್ ತಮ್ಮ ಚೊಚ್ಚಲ ಚಿತ್ರ 'ಕೋಕಿಲ' ಮೂಲಕ ಕೋಕಿಲ ಮೋಹನ್ ಎಂದೇ ಖ್ಯಾತರಾದವರು. ಬಾಲು ಮಹೇಂದ್ರ ಅವರ ನಿರ್ದೇಶನದ ಆ ಚಿತ್ರದಲ್ಲಿ ದೈತ್ಯ ಪ್ರತಿಭೆ ಕಮಲಹಾಸನ್ ಉಪಸ್ಥಿತಿಯಲ್ಲೂ ತನ್ನ ಉಲ್ಲಾಸಕರ ಅಭಿನಯದಿಂದ ಸಿನಿರಸಿಕರ ಮನಗೆದ್ದ ಮೋಹನ್, ಆ ಚಿತ್ರದ ಹೆಸರಿನ ಜೊತೆಗೆ ನಿಜಕ್ಕೂ ನೆನಪಲ್ಲುಳಿದಂತವರು. ಮೋಹನ್ ಅವರ ಚಿತ್ರಗಳ ಮತ್ತೊಂದು ವೈಶಿಷ್ಟ್ಯವೆಂದರೆ ಸುಶ್ರಾವ್ಯ ಗೀತೆಗಳ ಗಾಯಕರಾಗಿ ಅವರ ಪಾತ್ರಗಳು ಮೂಡಿದ್ದು. ಮೈಕ್ ಹಿಡಿದು ಗಾಯಕನ ಪಾತ್ರದಲ್ಲಿ ಮಿನುಗಿದ ತಮ್ಮ ಅನೇಕ ಪಾತ್ರಗಳಿಂದಾಗಿ ಅವರು 'ಮೈಕ್ ಮೋಹನ್' ಎಂದೇ ಪ್ರಸಿದ್ಧರಾಗಿದ್ದವರು.

ಮೋಹನ್ 1956ರ ಮೇ 10ರಂದು ಮಂಗಳೂರಿನ ಕೋಟೇಶ್ವರದಲ್ಲಿ ಜನಿಸಿದರು. ಅವರನ್ನು ರೆಸ್ಟೋರೆಂಟ್ ಒಂದರಲ್ಲಿ ಗುರುತಿಸಿದ ಬಿ.ವಿ. ಕಾರಂತರು ಮೊದಲಿಗೆ ರಂಗಭೂಮಿಗೆ ಪರಿಚಯಿಸಿದರು. ಮುಂಬೈನಲ್ಲಿ ಬಿ.ವಿ. ಕಾರಂತರು, ಬಿ. ಜಯಶ್ರೀ ಅವರೊಂದಿಗೆ ಮೋಹನ್ ಅವರು ಪಿ. ಲಂಕೇಶರ 'ಸಿದ್ಧತೆ' ಎಂಬ ನಾಟಕದಲ್ಲಿ ಅಭಿನಯಿಸಿದ ಸಂದರ್ಭದಲ್ಲಿ ಜಿ. ವಿ. ಶಿವಾನಂದರು ಸಿನಿಮಾಗೆ ಸೇರುವಂತೆ ಮೋಹನ್ ಅವರ ಮನವೊಲಿಸಿ ಅವರ ಹಲವು ಫೋಟೊಗಳನ್ನು ತೆಗೆಸಿದರು. ಶಿವಾನಂದರು ಬಾಲುಮಹೇಂದ್ರ ಅವರ 'ಕೋಕಿಲ' ಚಿತ್ರದ ಸಹನಿರ್ದೇಶಕರಾಗಿದ್ದು ಅದರಲ್ಲಿನ ಪ್ರಮುಖ ಪಾತ್ರಕ್ಕೆ ಯುವ ನಟನನ್ನು ಅರಸುತ್ತಿದ್ದರು. ಮೋಹನ್ ಅವರ ರಂಗಾಭಿನಯವು ಎಲ್ಲೆಡೆ ಮೆಚ್ಚುಗೆ ಗಳಿಸಿತ್ತು. ಅವರ ಅಭಿನಯವನ್ನು ಬೆಂಗಳೂರಿನಲ್ಲಿ ಕಣ್ಣಾರೆ ಕಂಡು ಸಂತೋಷಿಸಿದ ಬಾಲು ಮಹೇಂದ್ರ ಅವರು 1977ರಲ್ಲಿ 'ಕೋಕಿಲ' ಚಿತ್ರದ ಮೂಲಕ ಮೋಹನ್ ಅವರನ್ನು ಪರಿಚಯಿಸಿದರು.

1980ರಲ್ಲಿ 'ಮೂಡುಪನಿ' ಬಿಡುಗಡೆಯಾದಾಗಿನಿಂದ ಮೋಹನ್ ಅವರು ತಮಿಳು ಚಿತ್ರರಂಗದ ದೊಡ್ಡ ತಾರೆಗಳಲ್ಲಿ ಒಬ್ಬರಾದರು. 1980ರ ದಶಕದಲ್ಲಿ ಮೋಹನ್ ಅವರ ಎಷ್ಟೊಂದು ಚಿತ್ರಗಳು ಯಶಸ್ಸು ಗಳಿಸಿದ್ದವೆಂದರೆ ಉದ್ಯಮದಲ್ಲಿ ಅವರನ್ನು ಸಿಲ್ವರ್ ಜ್ಯೂಬಿಲಿ ಹೀರೋ (ರಜತ ಮಹೋತ್ಸವಗಳ ನಾಯಕ) ಎಂದು ಬಣ್ಣಿಸಲಾಗುತ್ತಿತ್ತು.

ಕೋಕಿಲ ಚಿತ್ರದ ನಂತರ ಮೋಹನ್ ಮಲಯಾಳದ 'ಮದಾಲಸ' (1978) ಚಿತ್ರದಲ್ಲಿ ನಟಿಸಿದರು. 'ತೂರ್ಪು ವೆಲ್ಲೆ ರೈಲು' (1979) ಎಂಬ ತೆಲುಗು ಚಿತ್ರದಲ್ಲಿ




ಅಭಿನಯಿಸಿದರು. ಸುಹಾಸಿನಿ ಅವರನ್ನು ಚಿತ್ರರಂಗಕ್ಕೆ ತಂದ ಮೊದಲ ಚಿತ್ರವಾದ ತಮಿಳಿನ 'ನೆಂಜತ್ತೈ ಕಿಳ್ಳಾದೆ' (1980) ಚಿತ್ರದಲ್ಲಿ ಅದ್ಭುತವಾಗಿ ನಟಿಸಿದರು. ಈ ಚಿತ್ರ ಒಂದು ವರ್ಷ ಓಡಿತಲ್ಲದೆ ತಮಿಳಿನಲ್ಲಿ ಅತ್ಯುತ್ತಮ ಚಲನಚಿತ್ರಕ್ಕಾಗಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಗೆದ್ದುಕೊಂಡಿತು. 1982ರಲ್ಲಿ 'ಪಯಣಂಗಳ್ ಮುಡಿವದಿಲ್ಲೈ' ಚಿತ್ರಕ್ಕಾಗಿ ಫಿಲ್ಮ್‌ಫೇರ್ ಪ್ರಶಸ್ತಿ ಗೆದ್ದು ದೊಡ್ಡ ತಾರೆಯಾದರು.

ಮೋಹನ್ ವೃತ್ತಿಜೀವನದ ಉತ್ತುಂಗದಲ್ಲಿದ್ದಾಗಲೂ ವಿಧಿ (1984), ನೂರಾವದು ನಾಳ್ (1984), ಇದಯ ಕೋವಿಲ್ (1985), ರೆಟ್ಟೈ ವಾಲ್ ಕುರುವಿ (1987), ಸಹದೇವನ್ ಮಹಾದೇವನ್ (1988) ಮುಂತಾದ ಚಿತ್ರಗಳಲ್ಲಿ ಅಭಿನಯಕ್ಕೆ ಆಸ್ಪದ ವಿದ್ದ ನಕಾರಾತ್ಮಕ ಪಾತ್ರಗಳನ್ನು ನಿರ್ವಹಿಸುವುದಕ್ಕೆ ಹಿಂಜರಿಯಲಿಲ್ಲ. 1985ರಲ್ಲಿ 2 ದಿನಗಳ ಅವಧಿಯಲ್ಲಿ ಅವರ 3 ಚಿತ್ರಗಳು ಬಿಡುಗಡೆ ಆಗಿ ದಾಖಲೆ ನಿರ್ಮಿಸಿದ್ದವು. ಚೆನ್ನೈನ 'ದೇವಿ ಥಿಯೇಟರ್ ಕಾಂಪ್ಲೆಕ್ಸ್‌ನಲ್ಲಿ' ಪ್ರತಿದಿನ ಮೂರು ಹೊತ್ತಿನಲ್ಲಿ ಅವರ ಮೂರು ಚಿತ್ರಗಳು ಪ್ರದರ್ಶನಗೊಂಡವು. ಈ ಮೂರು ಚಿತ್ರಗಳೂ ದೊಡ್ಡ ಯಶಸ್ಸನ್ನು ಕಂಡವು. ಇಲ್ಲಿಯವರೆಗೆ ಯಾವುದೇ ನಟ ಅವರ ಈ ದಾಖಲೆಯನ್ನು ಸರಿಗಟ್ಟಲು ಸಾಧ್ಯವಾಗಿಲ್ಲ.



ಮೋಹನ್ ವಿಮರ್ಶಾತ್ಮಕವಾಗಿ ಮೆಚ್ಚುಗೆ ಪಡೆದ 'ಮೌನ ರಾಗಂ' (1986) ಚಿತ್ರದಲ್ಲಿ ಅತ್ಯುತ್ತಮ ಅಭಿನಯವನ್ನು ನೀಡಿದರು. ಆ ಚಿತ್ರವು ಯಶಸ್ಸಿನ ಜೊತೆಗೆ ತಮಿಳಿನಲ್ಲಿ ಅತ್ಯುತ್ತಮ ಚಲನಚಿತ್ರಕ್ಕಾಗಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯನ್ನು ಗಳಿಸಿ, ನಿರ್ದೇಶಕ ಮಣಿರತ್ನಂ ಅವರಿಗೆ ದೊಡ್ಡ ಮನ್ನಣೆ ತಂದಿತು. ಮಣಿರತ್ನಂ ನಿರ್ದೇಶಕರಾಗಲು ಮೋಹನ್ ಅವರೇ ಕಾರಣ!

ಮೋಹನ್ ಅವರ ಬಹುತೇಕ ಚಲನಚಿತ್ರಗಳು, ಇಳಯರಾಜಾ ಸಂಗೀತ ನೀಡಿದ ಉತ್ತಮ ಸಂಗೀತದ ಆಲ್ಬಮ್‌ಗಳಾಗಿದ್ದು ಇಂದೂ ಜನಪ್ರಿಯತೆ ಉಳಿಸಿಕೊಂಡಿವೆ. 80ರ ದಶಕದ ಚಲನಚಿತ್ರಗಳು ಮತ್ತು ಇಳಯರಾಜರ ಸಂಯೋಜನೆಯ ಹಾಡುಗಳ ಮಾತು ಬಂದಾಗ ಮೋಹನ್ ಅವರ ಹೆಸರೂ ಪ್ರಸ್ತಾವನೆಗೊಳ್ಳುತ್ತದೆ.

ಕಾಲಾನುಕ್ರಮದಲ್ಲಿ ಹೊಸ ಅಲೆಯ ಪ್ರವಹಿನಿಯಲ್ಲಿ ಹಳತು, ಜನರಿಗೆ ಕಾಣುವುದಿಲ್ಲ. 1990ರ ನಂತರ ಮೂಡಿಬಂದ ಅವರ ಅಭಿನಯದ ಚಿತ್ರಗಳು ಕಡಿಮೆ. 1999ರಲ್ಲಿ 'ಅನ್ಬುಳ್ಳ ಕಡಲುಕ್ಕು' ಚಿತ್ರ ನಿರ್ಮಿಸಿ ನಿರ್ದೇಶಿಸಿ ಪ್ರಮುಖ ಪಾತ್ರವನ್ನು ನಿರ್ವಹಿಸಿದ ಮೋಹನ್ ಅವರ ಪುನರಾಗಮನದ ಪ್ರಯತ್ನ ಯಶ ಕಾಣಲಿಲ್ಲ. ಮೋಹನ್ ಅಚಮ್ ಮೇಡಂ ನಾನ, ಸೆಲ್ವಂಗಲ್, ಹಸಿಯ ರಾಮಾಯಣ, ಬೃಂದಾವನಂ ಮುಂತಾದ ಕಿರುತೆರೆ ಧಾರಾವಾಹಿಗಳನ್ನು ನಿರ್ಮಿಸಿದ್ದರು. ಅವರು ಸಿನಿಮಾ ನಿರ್ಮಾಣವನ್ನೂ ಮಾಡಿದರು. ಅನೇಕ ಸಮಾಜ ಮುಖಿ ಕಾರ್ಯಗಳನ್ನೂ ಮಾಡುತ್ತ ಬಂದಿದ್ದಾರೆ.

2008ರಲ್ಲಿ ಬಿಡುಗಡೆಯಾದ 'ಸುಟ್ಟಪಯುಂ'ನಲ್ಲಿ ಅವರು 9 ವರ್ಷಗಳ ವಿರಾಮದ ನಂತರ ನಾಯಕನಾಗಿ ನಟಿಸಿದ್ದರು. ಈ ಚಲನಚಿತ್ರವು ಕಡಿಮೆ ಬಜೆಟ್ನಲ್ಲಿ ಮೂಡಿ ಒಳ್ಳೆಲಾಭ ಮಾಡಿತು. 2024ರಲ್ಲಿ ಅವರ 'ಹರಾ' ಎಂಬ ಚಿತ್ರ ತೆರೆಕಂಡಿತು.ಅಲ್ಲದೆ, ದಳಪತಿ ವಿಜಯ್ ಅವರ 'ಗೋಟ್'ನಲ್ಲಿ ವಿಲ್ಲನ್ ಪಾತ್ರ ನಿರ್ವಹಿಸಿ ಎಲ್ಲರ ಮೆಚ್ಚುಗೆ ಗಳಿಸಿದ್ದಾರೆ ಮೋಹನ್!

ಮೋಹನ್ ಅವರು ಕನ್ನಡದಲ್ಲಿ 'ಕೋಕಿಲ' ಅಲ್ಲದೆ 'ಅಪರಿಚಿತ', 'ಭೂಲೋಕದಲ್ಲಿ ಯಮರಾಜ', 'ನಮ್ಮಮ್ಮನ ಸೊಸೆ', 'ಗಾಳಿ ಮಾತು', ' ಮುನಿಯನ ಮಾದರಿ', 'ಹೆಣ್ಣಿನ ಸೇಡು', 'ಹಾವಾದ ಹೂವು', 'ಗೌತಮ್' ಮುಂತಾದ ಚಿತ್ರಗಳಲ್ಲಿ ನಟಿಸಿದ್ದಾರೆ.

ತಮಿಳು ತೆಲುಗು ಭಾಷಾ ಚಿತ್ರಗಳಲ್ಲಿ ಗಂಭೀರ ಪಾತ್ರಗಳ ನಿರ್ವಹಣೆ ಮಾಡಿದ್ದರೆ ಕನ್ನಡದಲ್ಲಿ ಅವರ ಪಾತ್ರಗಳು ಹಾಸ್ಯಯುಕ್ತ ಲವ ಲವಿಕೆಯಿಂದ ತುಂಬಿಕೊಂಡಿದ್ದವು. ಮೊಹನ್ ಇತರ ಭಾಷೆಗಳಲ್ಲಿ ಬಹು ಬೇಡಿಕೆಯ ನಟರಾಗಿದ್ದ ಸಂದರ್ಭದಲ್ಲೂ ಕನ್ನಡದಲ್ಲಿ ಅವರ ಅಭಿನಯದ ಒಂದೇ ಒಂದು ಚಿತ್ರವೂ ಮೂಡಿ ಬರಲಿಲ್ಲ ಎಂಬುದು ಅಚ್ಚರಿಯ ಸಂಗತಿ. ಇದೇನೇ ಇರಲಿ, ಮೋಹನ್ ಓರ್ವ ಅದ್ಭುತ ಕಲಾವಿದರು... ನಮ್ಮ ಕನ್ನಡ ನೆಲದ ಹೆಮ್ಮೆ... ☯




ತೆಲುಗು ಸಿನಿಮಾಗಳಲ್ಲಿ ಹೆಸರು ಮಾಡಿರುವ ಉತ್ತರದ ಚಲುವೆ ದೀಕ್ಷಾ ಪಂತ್ ಬಿಗ್‌ಬಾಸ್ ತೆಲುಗು ಸೀಸನ್ -1ರಲ್ಲಿ ಗ್ರ್ಯಾಂಡ್ ಎಂಟ್ರಿ ಕೊಟ್ಟಿದ್ದರು. ತಮ್ಮ ಸೌಂದರ್ಯ ಹಾಗೂ ಚಾಣಾಕ್ಷತನದಿಂದ ಬಿಗ್‌ಬಾಸ್ ಮನೆಯಲ್ಲಿ ಎಲ್ಲರ ಗಮನ ಸೆಳೆಯುವಲ್ಲಿ ದೀಕ್ಷಾ ಪಂತ್ ಯಶಸ್ವಿಯಾಗಿದ್ದರು. ಇನ್ನೇನು ಫೈನಲ್‌ಗೆ ಎಂಟ್ರಿ ಕೊಡಬೇಕು ಎನ್ನುವಷ್ಟರಲ್ಲಿ

# ಸಮಸ್ಯೆ ಇಲ್ಲಾ ಅಂತಾಳೆ..... ಆದರೆ ನೋ ಅನ್ನೋದ್ಯಾಕೆ?!

ಎಲಿಮಿನೇಟ್ ಆದರು. ಟಾಪ್ 5 ಸ್ಥಾನದಲ್ಲಿ ಇರಬೇಕಿದ್ದ ಅನಿರೀಕ್ಷಿತವಾಗಿ ಹೊರಬೇಕಾಯ್ತು.

ಬಿಗ್‌ಬಾಸ್‌ಗೆ ಎಂಟ್ರಿ ಕೊಟ್ಟ ಮೇಲೆ ದೀಕ್ಷಾ ಪಂತ್‌ಗೆ ಉತ್ತಮ ಜನಪ್ರಿಯತೆ ಸಿಕ್ಕರೂ, ಯಾಕೋ ಕಾಣೆ ಸಿನಿಮಾಗಳಿಂದ ದೂರವಿದ್ದಾರೆ. ಒಕ ಲೈಲಾ ಕೋಸಂ, ಗೋಪಾಲ ಗೋಪಾಲ, ಬಂತಿ ಪೂಲ ಜಾನಕಿ, ಸೊಗ್ಗಾಡೆ ಚಿನ್ನಿ ನಾಯನ, ರಚ್ಚಾ... ಮುಂತಾದ



ಸಿನಿಮಾಗಳಲ್ಲಿ ಮಿಂಚಿರುವ ದೀಕ್ಷಾ, ಕೊನೆಯದಾಗಿ ನಟಿಸಿದ ಸಿನಿಮಾ 'ಈಗೋ'. ಅದಾದ ಬಳಿಕ ಸಿನಿಮಾಗಳಿಂದ ದೂರ ಇದ್ದಾರೆ. ಆಕೆ ಇತ್ತೀಚೆಗೆ ನೀಡಿದ ಒಂದು ಸಂದರ್ಶನದಲ್ಲಿ ಕಾಸ್ಟಿಂಗ್ ಕೌಚ್ ವಿಚಾರವಾಗಿ ಶಾಕಿಂಗ್ ಹೇಳಿಕೆಯನ್ನು ಕೊಟ್ಟಿದ್ದಾರೆ.

ಈ ಸಂದರ್ಶನದಲ್ಲಿ ನಿರೂಪಕರು ಸೆಕ್ಸ್ ಅಂಡ್ ಸಕ್ಸಸ್ ಎರಡೂ ಸಂತೋಷಮಯವಾಗಿರುತ್ತೆ. ಮೊದಲನೆಯದನ್ನು ನೀವು ನೀಡಿದರೆ, ಎರಡನೆಯದು ತಾನಾಗಿಯೇ ಬರುತ್ತದೆ ಎಂಬ ಸಿದ್ಧಾಂತವನ್ನು ಅನೇಕರಲ್ಲಿ ಕೇಳಿದ್ದೇನೆ. ಚಿತ್ರರಂಗದಲ್ಲಿರೋ ಕಾಸ್ಟಿಂಗ್ ಕೌಚ್ ಬಗ್ಗೆ ನಿಮ್ಮ ಅಭಿಪ್ರಾಯವೇನು? ಎಂದು ಕೇಳಿದ್ದರು. ಅದಕ್ಕೆ ದೀಕ್ಷಾ ಪಂತ್ ಕೊಟ್ಟ ಉತ್ತರ ನೆಟ್ಟಿಗರನ್ನು ಗೊಂದಲಕ್ಕೆ ಸಿಲುಕಿಸಿದೆ!

ಇಬ್ಬರಿಗೂ ಇಷ್ಟವಿದ್ದರೆ ನಿಮಗೇನು ಸಮಸ್ಯೆ? ಇದೆಲ್ಲ ಇಲ್ಲದಿದ್ದರೆ, ಇಷ್ಟು ಪ್ರತಿಭೆಗಳು ಉದ್ಯಮಕ್ಕೆ ಬರುತ್ತಲೇ ಇರಲಿಲ್ಲ. ಸೆಕ್ಸ್ ಅಂಡ್ ಸಕ್ಸಸ್ ಇಬ್ಬರಿಗೂ ಇಷ್ಟವಿರುವಾಗ ಇತರರಿಗೆ ಏನು ಸಮಸ್ಯೆ? ಎಂದು ದೀಕ್ಷಾ ನಿರೂಪಕರನ್ನೇ ಪ್ರಶ್ನಿಸಿದ್ದಾರೆ.

ಹಾಗೇ ಮುಂದುವರೆದು ನಾನು ಇದೂವರೆಗೆ ಕಾಸ್ಟಿಂಗ್ ಕೌಚ್ ಅಂತಹ ಸಮಸ್ಯೆಗಳನ್ನು ಎದುರಿಸಿಲ್ಲ. ಹೀಗಾಗಿ ಯಾರಿಗೆ ಯಾವುದು ಸರಿ ಎನ್ನಿಸುತ್ತದೆಯೋ ಅದನ್ನೇ ಮಾಡಬೇಕು. ವೈಯಕ್ತಿಕವಾಗಿ ನಾನು 'ಹ್ಯಾಂಡ್‌ಇನ್ ಹ್ಯಾಂಡ್' ನೀತಿಯನ್ನು ಒಪ್ಪುವುದಿಲ್ಲ. ಈ ವಿಷಾರದಲ್ಲಿ ನಾನು ದೂರವಿರುತ್ತೇನೆ. ಎಂದಿದ್ದಾರೆ!! ☯

# ಯಶ್ ಮಮ್ಮಿಗೆ ಸುಮ್ನೆ ಇರೋಕೆ ಏನಂತೆ?!



ರಾಕಿಂಗ್ ಸ್ಟಾರ್ ಯಶ್ ತಾಯಿ ಪುಷ್ಪಾ ಮತ್ತವರ ತಂಗಿ ವೇದಾ ಮಗಳು ದೀಪಿಕಾ ದಾಸ್ ಜಗಳ ಬೀದಿಗೆ ಬಂದಿದೆ! ನನ್ನ ಬಗ್ಗೆ ಆ ಮಾತನಾಡುವ ಯೋಗ್ಯತೆ ನಿಮಗಿಲ್ಲ ಎಂದು ನೇರವಾಗಿ ಕೌಂಟರ್ ಕೊಟ್ಟಿದ್ದಾರೆ ದೀಪಿಕಾ. ಎಲ್ಲರಿಗೂ ಗೊತ್ತಿರುವ ಹಾಗೆ ದೀಪಿಕಾ ದಾಸ್ ತಾಯಿ ವೇದಾ ಹಾಗೂ ಯಶ್ ತಾಯಿ ಪುಷ್ಪಾ ಒಡಹುಟ್ಟಿದ ಅಕ್ಕ ತಂಗಿಯರು. ಆದರೆ ಇವರ ಕುಟುಂಬದ ನಡುವೆ ಮೊದಲಿನಿಂದಲೂ ಮುಸುಕಿನ ಗುದ್ದಾಟವೇ ನಡೆಯುತ್ತಿದೆ. ಇದಕ್ಕೆ ಸಾಕ್ಷಿಯೆಂಬಂತೆ ದೀಪಿಕಾ ದಾಸ್ ಎಲ್ಲೂ ಯಶ್ ತನ್ನ ಅಣ್ಣ ಎಂದು ಹೇಳಿಕೊಂಡಿಲ್ಲ!



ಯಶ್ ತಾಯಿ ಪುಷ್ಪ ಇತ್ತೀಚೆಗೆ ಕೊತ್ತಲವಾಡಿ ಎಂಬ ಸಿನಿಮಾ ನಿರ್ಮಿಸಿ, ಅದರ ಪ್ರಮೋಷನ್ ವೇಳೆ ಮಾಧ್ಯಮಗಳಿಗೆ ನೀಡಿದ ಒಂದು ಸಂದರ್ಶನದಲ್ಲಿ ದೀಪಿಕಾಗೆ ಚಿಕ್ಕಂದಿನಿಂದಲೂ ನನ್ನ ಕಂಡರೆ ಭಯ. ಅದಕ್ಕೇ ಹೆಚ್ಚು ಮಾತನಾಡಲ್ಲ ಎಂದಿದ್ದರು....

ಇನ್ನೊಂದು ಸಂದರ್ಶನದಲ್ಲಿ ದೀಪಿಕಾರನ್ನು ಹಾಕಿಕೊಂಡು ಸಿನಿಮಾ ಮಾಡುತ್ತೀರಾ? ಎಂದು ಯಾರೋ ಕೇಳಿದ್ದಕ್ಕೆ ಅವಳಿಗೂ ನಮಗೂ ಆಗಿಬರಲ್ಲ, ಅವಳನ್ನು ಯಾವ ಹೀರೋಯಿನ್ ಅಂತ ಆಯ್ಕೆ ಮಾಡಬೇಕು? ಅವಳು ಏನು ಸಾಧನೆ ಮಾಡಿದ್ದಾಳೆ? ಅವಳನ್ನು ನಾವು ದೂರವೇ ಇಟ್ಟಿದ್ದೇವೆ ಎಂದು ಅವಮಾನಿಸಿ ಮಾತಾಡಿದ್ದರು!

ಪುಷ್ಪಮ್ಮನ ಹೇಳಿಕೆ ವೈರಲ್ ಆಗಿ ದೀಪಿಕಾ ದಾಸ್ ಗಮನಕ್ಕೆ ಬಂದಿದ್ದು, ಇದೀಗ ದೊಡ್ಡಮ್ಮ ಮಗಳ ಜಗಳ ಬೀದಿಗೆ ಬಂದಿದ್ದು, ದೀಪಿಕಾ ಸೋಷಿಯಲ್ ಮೀಡಿಯಾದಲ್ಲಿ ದೊಡ್ಡಿಗೆ ಸರಿಯಾಗಿಯೇ ಕೌಂಟರ್ ಕೊಟ್ಟಿದ್ದಾರೆ!

ನಾಗಿಣಿ ಧಾರವಾಹಿಯಲ್ಲಿ ಅಭಿನಯಿಸಿದ್ದ ಚೆಲುವೆ ದೀಪಿಕಾಗೆ ತನ್ನದೇ ಆದ ಅಭಿಮಾನಿ ವರ್ಗವಿದೆ. ಬಿಗ್ ಬಾಸ್‌ನಲ್ಲಿ ಮಿಂಚಿದ್ದ ದೀಪಿಕಾ ಅನಂತರ ಒಂದೆರಡು ಸಿನಿಮಾಗಳಲ್ಲಿಯೂ ನಟಿಸಿದ್ದಾರೆ. ಅಲ್ಲೇಕೋ ಅದೃಷ್ಟ ಒಲಿಯದೆ ಇಚ್ಛಿಸಿದ ಹುಡುಗನ್ನ ಮದುವೆಯಾಗಿ ಸಂಸಾರ ನಡೆಸುತ್ತಿದ್ದಾರೆ. ಹೀಗೆ, ತನ್ನ ಪಾಡಿಗೆ ತಾನಿರುವ ಹುಡುಗಿಗೆ ಕೊತ್ತಲವಾಡಿ ದೊಡ್ಡಮ್ಮ ಪುಷ್ಪಮ್ಮ ಕೆಟ್ಟದಾಗಿ ಮಾತಾಡಿ ಅವಮಾನಿಸಿರುವುದು ಸರಿಯೇ?

ದೊಡ್ಡಮ್ಮನಿಗೆ ಸೋಷಿಯಲ್ ಮೀಡಿಯಾದಲ್ಲಿ ಸರಿಯಾಗಿ ಟಾಂಗ್ ಕೊಟ್ಟಿರುವ ದೀಪಿಕಾ ಹೊಸ ಕಲಾವಿದರನ್ನು ಬೆಳೆಸುವ ಜನರು ಕಲಾವಿದರಿಗೆ ಬೆಲೆ ಕೊಡುವುದನ್ನು ಮೊದಲು ಕಲಿಯಬೇಕು. ನಾವು ಇಲ್ಲಿಯವರೆಗೆ ಯಾರ ಹೆಸರನ್ನೂ ಹೇಳಿಕೊಂಡು ಬಂದಿಲ್ಲ, ಮುಂದೇನೂ ಬರಲ್ಲ, ಕೆಲವರಿಗೆ ಬೆಲೆ ಕೊಟ್ಟ ಮಾತ್ರಕ್ಕೆ ಭಯ ಅಂತಲ್ಲ, ಯಾರನ್ನು ಕಂಡು ಯಾರಿಗೂ ಭಯ ಇಲ್ಲ, ಅದು ಅಮ್ಮ ಆದರೂ ಸರಿ, ದೊಡ್ಡಮ್ಮ ಆದರೂ ಸರಿ, ಅಥವಾ ಪುಷ್ಪಮ್ಮ ಆದರೂ ಸರಿ! ವಿತ್ ಡ್ಯೂ ರೆಸ್ಪೆಕ್ಟ್ ಟು ಸ್ಟಾರ್ ಆಫ್ ಅವರ್ ಇಂಡಸ್ಟ್ರಿ, ನಾನು ಯಾವ ದೊಡ್ಡ ನಟಿ ಅಲ್ಲದಿದ್ದರೂ



ಏನು ಸಾಧನೆ ಮಾಡದಿದ್ದರೂ... ನನ್ನ ಬಗ್ಗೆ ಹೀನಾಯವಾಗಿ ಮಾತನಾಡುವ ಯೋಗ್ಯತೆ ಯಾರಿಗೂ ಇಲ್ಲ ಎಂದು ಖಡಕ್ ಕೌಂಟರ್ ಕೊಟ್ಟಿದ್ದಾರೆ.

ಅಲ್ಲಾ, ಈಯಮ್ಮ ಪುಷ್ಪಮ್ಮನಿಗೆ ಸುಮ್ನೆ ಇರೋಕೆ ಆಗೋದಿಲ್ವಾ... ಮೊದಲು ನೋಡಿದ್ರೆ, ನಾನು ಸಿನಿಮಾ ಮಾಡ್ತಿದ್ದೀನಿ, ಯಶ್ ಹೆಸರು ಹೇಳಿಕೊಂಡು ಬದುಕುವ ಇಚ್ಛೆ ನನಗಿಲ್ಲ... ನಾನು ಡ್ರೈವರ್ ಹೆಂಡ್ತಿ. ಅವನು (ಯಶ್) ಈಗ ದೊಡ್ಡ ಸ್ಟಾರ್. 1000 ಕೋಟಿ ಬಡ್ಜೆಟ್ ಬೇಕು ಒಂದು ಸಿನಿಮಾ ಮಾಡೋಕೆ.... ಅಂತೆಲ್ಲ ಬೋಂಗು ಬಿಟ್ಟಿತ್ತು ಈಯಮ್ಮ. ಆಮೇಲೆ ನನ್ ಮಗನಿಗೂ ನಮಗೂ ಏನೂ ಜಗಳ ಇಲ್ಲಾರೀ.... ಸೊಸೆ ಕೂಡ ನಮ್ಜೊತೆ ಚೆನ್ನಾಗಿಯೇ ಇದ್ದಾಳೆ. ಯಶ್ ನಮಗೆ ಎಂ.ಜಿ. ರೋಡ್‌ನಲ್ಲಿ ಸೈಟ್ ತಕ್ಕೊಟ್ಟವ್ನೆ... ಅದರ ಬೆಲೆ ಎಷ್ಟೋ ಕೋಟಿ ರೂಪಾಯ್...

ಹಾಸನದ ಕಡೆ ನೂರಾರು ಎಕರೆ ಭೂಮಿ ತಕ್ಕೊಂಡಿದ್ದೀವಿ... ಅಂತೆಲ್ಲ ಏನೇನೋ ಜಂಭ ಕೊಚ್ಚಿಕೊಂಡಿದ್ರು! ನೀ ಹೊಲ ತಗೊಂಡ್ಯಾ.... ಮನೆ ತಗೊಂಡ್ಯಾ... ಸೈಟ್... ಅಂತ ಯಾರಾದ್ರೂ ಕೇಳಿದ್ರ??! ತನ್ನ ಪಾಡಿಗೆ ತಾನೇ ಹೇಳಿಕೊಂಡು ಬೋಳು ಹಣೆ ಸವರಿಕೊಳ್ತಾರೆ ಪುಷ್ಪಮ್ಮ! ಅಮ್ಮ ಅಮ್ಮ ಇದೆಲ್ಲಾ ನಿನಗೆ ತರವೇನಮ್ಮ ಅಂತ ಕೇಳಬಾರದೆ ಯಶ್....

# ಹಬ್ಬದ ಸಂಭ್ರಮದಲ್ಲಿ ದಿನೇಶ್ ಮಂಗಳೂರು ಹೋದದ್ದು ಗೊತ್ತೇ ಆಗಲಿಲ್ಲ!

ಸ್ಯಾಂಡಲ್‌ವುಡ್‌ನ ಅದ್ಭುತ ಕಲಾ ನಿರ್ದೇಶಕ ಹಾಗೂ ನಟ ದಿನೇಶ್ ಮಂಗಳೂರು ಯಶ್ ಅಭಿನಯದ ಕೆಜಿಎಫ್ ಚಿತ್ರದಲ್ಲಿ ಮುಂಬೈ ಡಾನ್ ಆಗಿ ನಟಿಸಿದ್ದನ್ನು, ರಾಕಿ ಭಾಯ್ ಪ್ರೇಯಸಿಗೆ ಕಣ್ಣು ಹಾಕಿ ಭೀಕರವಾಗಿ ಕೊಲೆಯಾಗುವ ದೃಶ್ಯವನ್ನು ಯಾರೂ ಮರೆಯಲಾರರು. ಅದೇ ರೀತಿ ಯೋಗಿ ಅಭಿನಯದ ಅಂಬಾರಿ ಚಿತ್ರದಲ್ಲಿ ನಾಯಕಿಯ ತಂದೆಯ ಪಾತ್ರ ಕೂಡ ಸ್ಮರಣೆಯವಾಗಿದೆ. ಆ ದಿನಗಳು ಚಿತ್ರದ ಕೊತ್ವಾಲ್ ಶಿಷ್ಯ ಶೆಟ್ಟಿ ಪಾತ್ರವು ಸೂಪರ್.



ವಾಸ್ತವಾಂಶದಲ್ಲಿ ದಿನೇಶ್ ಮಂಗಳೂರು ಆರ್ಟ್ ಡೈರೆಕ್ಟರ್. ಕಾಂತಾರ ಕೂಡ ಅವರ ಕೈಯಲ್ಲಿ ಅರಳಿದ ಕಲಾ ಕುಸುಮವೇ! ಅವರನ್ನು ಆ ದಿನಗಳು ಚಿತ್ರದಲ್ಲಿ ನಟಿಸುವಂತೆ ಮಾಡಿದ್ದು ಚೇತನ್ ಸರ್.



ಅಲ್ಲಿಂದ ಹಿಂತಿರುಗಿ ನೋಡಿದವರಲ್ಲ ದಿನೇಶ್. ಒಳ್ಳೆ ಶರೀರ ಮತ್ತು ಶಾರೀರ. ಒಬ್ಬ ವಿಲ್ಲನ್ ಗೆ ಬೇಕಿರೋದು ಇವೇ ಕ್ವಾಲಿಟಿಸ್ ಅಲ್ವೇ. ದಿನೇಶ್ ನೆನಪಿನಲ್ಲಿ ಉಳಿಯುವಂತೆ ವರ್ಷಕ್ಕೊಂದು ಎರಡು ಚಿತ್ರಗಳಲ್ಲಿ ನಟಿಸುತ್ತ ಬಂದಿದ್ದರು.ಆದರೆ ಅವರಿಗೆ ಹೆವಿ ಶುಗರ್ ಇತ್ತು. ಕೆಜಿಎಫ್ ಬಳಿಕ ಅವರಿಗೆ ಗ್ಯಾಂಗ್ರಿನ್ ಉಲ್ಬನಗೊಂಡು ಕಾಲಿನ ಬೆರಳುಗಳನ್ನು ಕತ್ತರಿಸಲಾಗಿತ್ತು. 'ಕಾಂತಾರ'ಕ್ಕೆ ಕೆಲಸ ಮಾಡುವಾಗ ಅವರಿಗೆ ಪಾರ್ಶ್ವವಾಯು (ಲಕ್ವಾ) ಹೊಡೆದಿತ್ತು!

ಇತ್ತೀಚಿಗೆ ಬ್ರೈನ್ ಸ್ಟ್ರೋಕ್ ಬೇರೆ ಹೊಡೆದಿತ್ತು.... ಮುಗಿಯಿತಲ್ಲ, ಮೊನ್ನೆ ಆಗಸ್ಟ್ 26ರಂದು ಹೋಗಿಯೇ ಬಿಟ್ರು ದಿನೇಶ್! 27ರಂದು ಅಂತಿಮ ಕಾರ್ಯವು ನಡೆದುಹೋಯಿತು. ಗೌರಿ ಗಣೇಶ ಹಬ್ಬದ ಸಂಭ್ರಮದಲ್ಲಿ ಅವರು ಹೋಗಿದ್ದು, ಮಣ್ಣಿನ ಕಾರ್ಯ ನಡೆದದ್ದು ಯಾರಿಗೂ ಗೊತ್ತೇ ಆಗಲಿಲ್ಲ... ಅವರ ಆತ್ಮಕ್ಕೆ ಶಾಂತಿ ಸಿಗಲಿ...

# ಓಂ 'ರಾಯ್'ಗೆ ಬೇಕಾಗಿದೆ ನೆರವು...

ಉಪೇಂದ್ರ ನಿರ್ದೇಶನದ ಶಿವರಾಜ್‌ಕುಮಾರ್ ಅಭಿನಯದ ಬ್ಲಾಕ್ ಬಸ್ಟರ್ 'ಓಂ' ಚಿತ್ರದ ಮುಂಬೈ ಡಾನ್ 'ರಾಯ್ ಹಾಗೂ 'ಕೆಜಿಎಫ್ ಚಾಚಾ' ಎಂದೇ ಖ್ಯಾತರಾದ ಹರೀಶ್ ರಾಯ್ ಥೈರಾಯ್ಡ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ಗುರುತೇ ಸಿಗಲಾರದಷ್ಟು ಬದಲಾಗಿದ್ದಾರೆ. ಕ್ಯಾನ್ಸರ್ ಅವರ ಹೊಟ್ಟೆಗೆ ಪಸರಿಸಿ ಸಾವು-ಬದುಕಿನ ನಡುವೆ ಹೋರಾಡುತ್ತಿದ್ದಾರೆ. ಅವರ ದೇಹದ ತೂಕ ತೀರಾ ಕಡಿಮೆಯಾಗಿದ್ದು ಕಡ್ಡಿಯಂತೆ ಕಾಣಿಸುತ್ತಿದ್ದಾರೆ ರಾಯ್. ಹೊಟ್ಟೆಯಲ್ಲಿ ನೀರು ತುಂಬಿಕೊಂಡಿದ್ದು ತುಂಬಾ ಊದಿಕೊಂಡಿದೆ... ಕೆಲ ಯೂ ಟ್ಯೂಬರ್ಸ್ ರಾಯ್ ಅವರನ್ನು ತೋರಿಸುತ್ತಿದ್ದರೆ,ಅವರನ್ನು ಇಂಥ ಸ್ಥಿತಿಯಲ್ಲಿ ನೋಡುವುದಕ್ಕೆ ಆಗುತ್ತಿಲ್ಲ.

ಒಂದು ಕಾಲದಲ್ಲಿ ಖಡಕ್ ವಿಲನ್ ಆಗಿ ಬೆಳ್ಳಿ ತೆರೆಯ ಮೇಲೆ ಮಿಂಚಿದ್ದ ನಟನನ್ನು ಈ ಸ್ಥಿತಿಯಲ್ಲಿ ನೋಡಲಾಗದೆ ಅಭಿಮಾನಿಗಳು ಮರುಕುಪಡುತ್ತಿದ್ದಾರೆ. ರಾಯ್ ಅವರಿಗೆ ಸೂಕ್ತ ಚಿಕಿತ್ಸೆ ದೊರೆತರೆ ಅವರು ಆದಷ್ಟು ಬೇಗ ಚೇತರಿಸಿಕೊಳ್ಳುತ್ತಾರೆ. ಶಿವಣ್ಣನಿಂದ ಹಿಡಿದು ಯಶ್ ತನಕ ಎಲ್ಲರಿಗೂ ಬೇಕಾಗಿದ್ದವರು ಸಹನಟ ರಾಯ್. ಪ್ಲೀಸ್, ಯಾರಾದ್ರೂ ಚಿಕಿತ್ಸೆ ಕೊಡಿಸಿ ಅವರನ್ನು ಬದುಕಿಸಿಕೊಳ್ಳಲಿ ಎಂದು ಜನ ಪ್ರಾರ್ಥಿಸುತ್ತಿದ್ದಾರೆ...





ಅಂದಹಾಗೆ, ಸೋಶಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್ ಗೋಪಿ ಎಂಬುವರು ಹರೀಶ್ ರಾಯ್ ಅವರನ್ನು ಭೇಟಿಯಾಗಿದ್ದು, ವಿಡಿಯೋವೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. ವಿಡಿಯೋದಲ್ಲಿ ಚಿಕಿತ್ಸೆಗೆ ಆರ್ಥಿಕ ನೆರವು ಯಾಚಿಸಿರುವ ಹರೀಶ್ ರಾಯ್, ಗುಣವಾದರೆ ಮತ್ತೆ ಸಿನಿಮಾಗಳಲ್ಲಿ ನಟಿಸುತ್ತೇನೆ ಎಂದು ಹೇಳಿಕೊಂಡಿದ್ದಾರೆ...

ಅಲ್ಲದೆ, ಯಶ್ ಈ ಮೊದಲೇ ತಮಗೆ ಭಾರಿ ಸಹಾಯ ಮಾಡಿದ್ದಾರೆ,ಅವರಲ್ಲಿ ಮತ್ತೆ ಮತ್ತೆ ಸಹಾಯ ಯಾಚಿಸಲಾರೆ... ನಾನು ಹೋದ ಬಳಿಕ ಯಶ್ ಅವರಿಗೆ ಮೆಸೇಜ್ ಮಾಡಲು ತಮ್ಮ ಕುಟುಂಬದವರಿಗೆ ತಿಳಿಸಿದ್ದೇನೆ... ಎಂಬುದಾಗಿಯೂ ಕಣ್ತುಂಬಿಕೊಂಡು ದೈನೇಸಿಯಾಗಿ ನುಡಿದಿದ್ದಾರೆ! ಅಂದಹಾಗೆ, ಹರೀಶ್ ರಾಯ್ ಅವರು 'ಓಂ', 'ಸಮರ', 'ಬೆಂಗಳೂರು ಅಂಡರ್‌ವರ್ಲ್ಡ್', 'ಜೋಡಿಹಕ್ಕಿ', 'ರಾಜ್ ಬಹದ್ದೂರ್', 'ಸಂಜು ವೆಡ್ಸ್ ಗೀತಾ', 'ನಲ್ಲ', 'ಕೆಜಿಎಫ್ ಚಾಪ್ಟರ್1' ಹಾಗೂ 'ಕೆಜಿಎಫ್-ಚಾಪ್ಟರ್2' ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಅವರು ಎಷ್ಟೇ ಚಿತ್ರಗಳಲ್ಲಿ ನಟಿಸಿದ್ದರೂ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿರುವ ಪಾತ್ರಗಳು ಅಂದ್ರೆ, ಮೊದಲ ಚಿತ್ರ 'ಓಂ' ಹಾಗೂ ಕೊನೆ ಚಿತ್ರ 'ಕೆಜಿಎಫ್...' ಹರೀಶ್ ರಾಯ್‌ರವರಿಗೆ ಸಹಾಯ ಮಾಡಲಿಚ್ಛಿಸುವವರು ಈ ನಂಬರ್ ಗೆ ಮಾಡಬಹುದು: 7760035557

Vol. 41 No. 13 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com